**ಕನ್ನಡ ಭಾಷಾ ಪತ್ರ್ಯ**

# ವಿಜ್ಞಾನ ಸೌರಭ–2

**ಬಿ.ಎಸ್ಸಿ**

**(ಎರಡನೇ ಸೆಮಿಸ್ಟರ್)**

**2021–22**


**ಪ್ರಧಾನ ಸಂಪಾದಕರು:**

**ಡಾ. ಜಿ. ಪ್ರಶಾಂತ ನಾಯಕ**

**ಪರಿಶೀಲಕರು**

**ಡಾ. ಬೆಳಕೆರೆ ಲಿಂಗರಾಜಯ್ಯ**

**ಸಂಪಾದಕರು:**

**ಬೊಮ್ಮೆಗೌಡ**

**ಡಾ. ಪ್ರಮೀಳ**

**ಮೋಹನ್ ರಾವ್. ಸಿ. ಎನ್**



ಬೆಂಗಳೂರು ನಗರ ವಿಶ್ವವಿದ್ಯಾಲಯ BENGALURU CITY UNIVERSITY

BE BOUNDLESS

**ಬೆಂಗಳೂರು ನಗರ ವಿಶ್ವವಿದ್ಯಾಲಯ**

ಬೆಂಗಳೂರು

**KANNADA BHASA PATYA – VIJNYANA SOURABHA**
A Prescribed Textbook for B.Sc, Degree Course
(First and Second Semester)

Chief Editor: Prof.Prashanth G. Nayaka
(Professor of Kannada & Director
Kannada Bhathi, Kuvempu University
Shankarghatta, B.R. Project, Shimoga Dist.)

Edited by.
**Bomme Gowda**
**Dr. Prameela**
**Mohan Rao. CN**

Published by : Bangalore City University, Bengaluru
Pp:
@Bengaluru City University
First Print:2021

ಪ್ರಧಾನ ಸಂಪಾದಕರು
**ಡಾ. ಪ್ರಶಾಂತ್ ಜಿ. ನಾಯಕ**

***ಸಲಹಾ ಸಮಿತಿ***
**ಡಾ. ಕೆ.ವೈ.ನಾರಾಯಣ ಸ್ವಾಮಿ**
**ಡಾ. ಎಂ.ಎಸ್. ಆಶಾದೇವಿ**

ಪರಿಶೀಲಕರು
**ಡಾ. ಬೆಳಕೆರೆ ಲಿಂಗರಾಜಯ್ಯ**

**ಬೆಲೆ : ರೂ**

**ಪ್ರಕಾಶಕರು:**
**ಬೆಂಗಳೂರು ನಗರ ವಿಶ್ವವಿದ್ಯಾಲಯ**

## ಪ್ರಥಮ ಬಿ.ಎಸ್ಸಿ – ಎರಡನೇ ಸೆಮಿಸ್ಟರ್
## ಕನ್ನಡ ಭಾಷಾ ಪತ್ಯ
## ಪರಿವಿಡಿ


### ೧.ಜೀವನ ಕಲೆ

**ಆಶಯ : ನಾಯಿ– ಮುದುಕ** – **ಎಚ್. ಎಸ್. ಶಿವಪ್ರಕಾಶ್** 04
ಡೊಂಬರ ಚೆನ್ನೆ – ಪಂಜೆ ಮಂಗೇಶರಾಯ 05
ತೋಟದವನು – ಪಿ. ಲಂಕೇಶ್ 10
ಪೆಪೆ – ಮೂಲ: ಮ್ಯಾಕ್ಸಿಂ ಗಾರ್ಕಿ ಶ್ರೀನಿವಾಸ ವಿ. ಸುತ್ರಾವೆ (ಕನ್ನಡಕ್ಕೆ) 14
**ಓದು ಪತ್ಯ** : ಪ್ರಿನ್ಸಿಪಾಲ್ ಬಾಚಿ ತಬ್ಬಿಕೊಂಡರು – ತುಂಬಾಡಿ ರಾಮಯ್ಯ 21

### ೨. ಕನಸು

**ಆಶಯ : ನಾನೊಂದು ಕನಸ ಕಂಡೆ** – **ಅಕ್ಕಮಹಾದೇವಿ** 26
ಕನಸಿನ ಹುಡುಕಾಟ – ಎ.ಕೆ ರಾಮಾನುಜನ್ 27
ಕಲ್ಕಿ – ಕುವೆಂಪು 32
ಒಂದು ಹುಡುಗನಿಗೆ ಬಿದ್ದ ಕನಸು – ಬೆಸಗರಹಳ್ಳಿ ರಾಮಣ್ಣ 38
**ಓದು ಪತ್ಯ :** ಬೆಳಕೂ ಇಲ್ಲ ಕನಸೂ ಇಲ್ಲ – ನಾಗತಿಹಳ್ಳಿ ಚಂದ್ರಶೇಖರ್ 47

### ೩. ಮಳೆ

**ಆಶಯ: ಮಳೆಯ ಮುಸ್ಸಂಜೆ** – **ಪ್ರತಿಭಾ ನಂದಕುಮಾರ್** 50
ಇತಿಹಾಸದ ಭೀಕರ ಕ್ಷಾಮ – ಕೆ.ಪಿ. ಪೂರ್ಣಚಂದ್ರ ತೇಜಸ್ವೀ 51
ಮೋಡ ಬಿತ್ತನೆ ಮತ್ತು ಕೃತಕ ಮಳೆ ಬರಿಸುವುದು – ಪ್ರೊ. ಕೆ ಭೈರಪ್ಪ 60
ಗುಬ್ಬಚ್ಚಿಗಳು – ಕರೀಗೌಡ ಬೀಚನಹಳ್ಳಿ 66
**ಓದು ಪತ್ಯ :** ಮರಳಿ ಮಣ್ಣಿಗೆ – ಶಿವರಾಮಕಾರಂತ (ಆಯ್ದ ಭಾಗ) 72

### ೪. ಸಂಕೀರ್ಣ

**ಆಶಯ : ಅಬ್ದುಲ್ ಕಲಾಂ** 78
ಒಂದೇ ಒಂದು ಬಾರಿ ಹೊರ ಬನ್ನಿ – ಬಿ.ಟಿ ಲಲಿತಾನಾಯಕ 79
ಕೀಟದಿಂದ ಕೋಟಿ ನಾಶ – ಶಿವಾನಂದ ಕಳವೆ 81
ಮಹಿಳೆ ಮತ್ತು ಜಾಹೀರಾತು – ಸಾರಾ ಅಬೂಬಕ್ಕರ್ 88
**ಓದು ಪತ್ಯ :** ದೋಸೆ ಮತ್ತು ವಿಜ್ಞಾನ – ಪ್ರೊ ಜೆ ಆರ್ ಲಕ್ಷ್ಮಣರಾವ್ 92

## ೧. ಜೀವನ ಕಲೆ

**ಆಶಯ :** **ನಾಯಿ – ಮುದುಕ**

**– ಎಚ್. ಎಸ್. ಶಿವಪ್ರಕಾಶ್**

ಬೆಳಗ್ಗೆ ಅಷ್ಟು ಹೊತ್ತಿಗೇ ನಾಯಿಯ ಜೊತೆಗೆ ಮುದುಕ
ಊರಾಚೆಗೆ ವಾಕಿಂಗು ಹೊರಟನು. ಕೋಲೂರಿ ನಡೆಯುತ್ತಾ,
ಬೆಟ್ಟಗಳು ರೆಕ್ಕೆ ಬಿಚ್ಚಿರುವುದನ್ನು ಕಂಡು, ಹಾರಲಿ ಅಂತ
ಕಾಯುತ್ತಾ ನಿಂತನು. ಬಿಸಿಲು ಹಬ್ಬಿತು. ರೆಕ್ಕೆಗಳು ಮೋಡಗಳು !
ಕರಗಿದವು. ಗೋರಿಕಲ್ಲಿನ ಹಾಗೆ ಹಾರದ ಬೆಟ್ಟ.
ನಾಯಿಯ ಹಾಗೆ ನಡೆದ ಮನೆಯ ಕಡೆಗೆ.

# ಡೊಂಬರ ಚೆನ್ನೆ

**– ಪಂಜೆ ಮಂಗೇಶರಾಯ**

ಬೆರಗು ಕಣ್ಣಿನ ಬೆರಳ ಮೀಸೆಯ ಬೆರಸಿದಾ ನಗು ಮೋರೆಯಾ,
ಅರಸನಿದ್ದನು ಡೊಂಬರಾಟಕೆ ಸೆರೆಯ ಸಿಕ್ಕಿದ ಮನದಲಿ
ದಾಟಿ ಪಡುಹೊಳೆ ಜನರಸಂದಣಿ ಆಟ ನೋಡಲು ಕೂಡಿತು;
ಕೋಟೆ, ಕೊತ್ತಳ, ಮಾಡು, ಮನೆ ಮರ, ಕೊಂಬೆಗಳ ಮೇಲಿದ್ದರು.

ಗುಲ್ಲು ಮಾಡರು, ಸೊಲ್ಲನಾಡರು:
ಎಳ್ಳು ಬಿದ್ದರೆ ಬೊಬ್ಬೆಯು
ಅಲ್ಲಿ ಜನಗಳ ನುಗ್ಗು ನುಗ್ಗಿಗೆ
ಇಲ್ಲ ಸಾಸಿವೆ ಹಾಕಲು.

ಅತ್ತಲಿದ್ದರು ಸೆಟ್ಟಿಮುದ್ಯರು,
ಗುತ್ತಿನಡ್ಯಂತಾಯರು
ಇತ್ತಪೊಕ್ಕುಳ ಅರಸು ಮಕ್ಕಳ
ಒತ್ತಿನಲಿ ಕಳದೆಡದಲಿ

ಗುರು, ಸುಮಂಗಳ, ಬುಧ ಗ್ರಹಂಗಳ
ನಡುವೆ ತಿಂಗಳ ಚೆಲುವಿನಾ
ಅರಸು ಅಂಗಳದಲಿ ಜನಂಗಳ
ನಡುವೆ ಸಂಗಳಿಸಿದ್ದನು.

ಆಗ ಬಡಿಯಿತು ಡೋಲು ಬಡ ಬಡ,
ಬಾಗಿ ಅರಸಿಗೆ ತಲೆಯನು,
ಬೇಗ ತಿರ್ರನೆ ತಿರುಗಿ ಸರ್ರನೆ
ಲಾಗ ಹಾಕಿದ ಡೊಂಬನು.

ನೀರಿನೊಂದಿಗೆ ಆರು ಬಿಂದಿಗೆ
ಹೇರಿ ನೆತ್ತಿಯ ಮೇಲಕೆ

ಹಾರಿ ಧಿಕ್ಕಿಟ ಕುಣಿದನಕ್ಕಟ
ನೀರು ಹೊರಗಡೆ ಚೆಲ್ಲದೆ!

ತೆಗೆದು ಡೊಂಬನು ಹುರಿಯ ಸುಂಬನು
ಬಿಗಿದು ಬಟ್ಟಲನೇರಿಸಿ,
ಬೊಗರಿಯಂತೆಯೆ, ತಿಗರಿಯಂತೆಯೆ
ನೆಗೆದು ಕುಣಿದನು ಧಿಮಿ ಧಿಮಿ.

"ಮಾವಿನಾಟದ, ಹಾವಿನಾಟದ
ನೋವು ಸೋಜಿಗ ತಿಳಿಯದು!
ಯಾವ ತಂತ್ರವೊ? ಮೋಡಿ ಮಂತ್ರವೊ?
ನಾವು ಅರಿಯೆವು" ಎಂದರು.
ಬಿದಿರು ಒಂದನು ಹೊತ್ತು ತಂದನು
ಮುದುಕ ಡೊಂಬನು ಹೆಗಲಲಿ.
ಅದನು ಬಲದಲಿ ಹೂಡಿ ನೆಲದಲಿ
ಮದುವೆ ಮಗಳನು ಕರೆದನು.

ಹೆಣ್ಣು ಬಂದಳು ಹಣ್ಣು ಬಿಡದಾ
ಸಣ್ಣ ಬಳ್ಳಿಯ ಬೆಡಗಿನಾ,
ಮಣ್ಣೊಳಾಡುವ ಬೆಣ್ಣೆಯಂತಿಹ
ಕಣ್ಣು ಕಟ್ಟಿನ ಸೊಬಗಿನಾ.

ಮಣಿದು ಹಗ್ಗಕೆ ಹಾರಿ ಸಿಡಿದಳು ಕುಣಿವ ಮರಿಸಿಡಿಲಂತೆಯೇ
ಹೆಣೆದು ಮೈಯನು, ಹಾವಿನಂತೆಯೆ ಗಣಿಗೆ ಸರಿದಳು ಸರ್‍ರನೆ!
ಬಳಿಕ ಬೆನ್ನನು ಕೋದು, ಕೈಕಾಲ್ಗಳನು ತೇಲಿಸಿ ಹೊಳೆದಳು,
ಮಳೆಯ ಬಿಲ್ಲಿನ ಹಾಗೆ, ಸ್ಥಾಣುವಿನೆಳೆಯ ಚಂದ್ರನ ಚಂದದಿ.
ಕೊರಳು ಮಾಲಿತು, ಹೆರಳು ಜೋಲಿತು, ಕರುಳು ತೇಲಿತು ತರಳೆಯಾ
ಉರುಳುತಲಿ ಕಾಲ್ ಬೆರಳ ಕೊನೆಯಲಿ ಮರಳಿ ಹೊಲಿದಳು ಜಡೆಯನು.

ಗಳೆಯ ಡೊಂಬತಿಯಾಟದಾ ಪರಿ
ಗಾಳಿ ಕೈಗಿರಿಗಿಟಗಿರಿ,

ಸುಳಿಯ ನೀರಿನ ತಲೆಯ ಹೂಗರಿ,
ಸೆಳೆಯೆ ಮಿಂಚಿನ ತೋಳ್ ಸರಿ.

ಅರರೆ! ಡೊಂಬರ ಹೆಣ್ಣುಮರಿ
ಗರಗರನೆ ಎತ್ತರ ಭರದಲಿ–
ತಿರುಗುವಾ ತೆರ ಹುಡಿಯು ಅರಸಿನ
ಎರಚಿತೆರಚಿತು ಕಣ್ಣಿಗೆ.

ಬಿಗಿದು ಬಿಚ್ಚುವ, ಬಿಚ್ಚಿ ಬಿಗಿಯುವ,
ಮುಗಿಲ ಕೂದಲ ಬಲೆಯಲಿ
ಇಗೊ! ಇಗೊ!
ಸಿಲುಕಿದುದು ಅರಸನ
ಮಿಗದ ಕಣ್ಗಳ ಜೋಡಿಯು!

"ಏಕೆ! ಡೊಂಬನೆ! ನಿಲ್ಲಿಸಾಟವ! ಈಕೆಯಲಿ ಮನಸೋತುದು.
ಸಾಕು! ಬಂಗರು ನಾನೆ! ಕೈಸರ ಹಾಕುವೀಕೆಯ ಕೊರಳಲಿ!"

ಎಂದು ನಂದಾವರದ ಬಂಗರು ನೊಂದು ನಂದದ ತಾಪದಿ,
ಮುಂದೆ ನಿಂದಾ ಡೊಂಬನೊಂದಿಗೆ "ಸಂದಿಸಿವಳನು", ಎಂದನು.

ನುಡಿದ ಮಾತಿನ ಮಾನಭಂಗದ ಹೊಡೆತ ನುಂಗಿದ ಸಿಡುಕಿನಾ
ಕಿಡಿಯ ಕಣ್ಣೀರಿಂದ ನಂದಿಸಿ, "ಒಡೆಯ! ಬಿನ್ನಹ ಲಾಲಿಸು".

ಮಗಳ ಹೆಸರಿನ ಮೈಗೆ ಸೂಳೆಯ ಬೆಡಗ ಸೀರೆಯ ಉಡಿಸೆನು,
ನಗರೆ? ಹೆಸರಿನ ತಲೆಗೆ ಪಾದರಿ ಮುಗುಳು ಹೂವನು ಮುಡಿಸೆನು"

ಉಲಿಯೆ ಡೊಂಬನು, ಕೆಲರ ಪಿಸಿಪಿಸಿ, ಕೆಲರ ಗುಜುಗುಜು, ಕೆಲವರಾ
ಗಲಭೆ ಕಳಕಳ ಆಟದಾ ಕಳದಲಿ ವಿಶಾಲಕೆ ತುಂಬಿತು.

ಒಡನೆ ಡೊಂಬನು ಡೋಲು
ಬಡಿದನು,

ಬಡಿದು ಗುಡುಗುಡು
ಗುಡುಗಿದಾ.
ಗುಡುಗಿ ಓಡಿದ,
ಓಡಿ ತೋರಿದ
ಗಿಡುಗನನು ಗಳೆ ಗುಬ್ಬಿಗೆ.
ಹೀಗೆ ಹೋದನು,
ಸನ್ನೆ ಮಾಡುತ
ಕೈಗಳಿಂದಾ ಹುಡುಗಿಗೆ.
ಕಣ್ಣು ಕತ್ತಲೆಗೊಳಿಪ ಗಣೆಯಿಂ
ಹೆಣ್ಣು ಧುಮುಕಿತು ಹೊಳೆಯಲಿ --
ಬಣ್ಣ ಕಿಡಿಯಲಿ
ಬಿದ್ದು ಬಾನಿಂ
ತಣ್ಣಗಾಗುವ ಬಿರುಸಿನೋಲ್
ಎಲ್ಲಿ? ಹೋ! ಹೋ! ಹೋಯ್ತು! ಹೋಗಿರಿ!
ಎಲ್ಲಿ! ಎಲ್ಲೆಂಬರಸಿನಾ
ತಲ್ಲಣದ ಕಟ್ಟಾಜ್ಞೆಗಾಗಲೆ
ಎಲ್ಲರೋಡಿದರ್
ಅರಸುತಾ.
ಆಳುನಾಲ್ವರು
ದಡಕೆ ಹಾಯ್ದರು,
ಆಳವಿಹ ಹೊಳೆ ನೀರಲಿ
ಆಳುವೇಳುವ
ಇಬ್ಬರನು ತಮ್
ಆಳುವವನಡೆಗೊಯ್ದರು,
ಗದ್ದಿಗೆಯ ಬಳಿ
ಕೆಡವಿದರು – ನೀರ್
ಮೆದ್ದ ಉದ್ದಿನ ತೊಗಲಿನಾ
ಬಿದ್ದ ಮೋರೆಯ,
ನಿದ್ದೆಗಣ್ಣಿನ,
ಒದ್ದೆ ಕೂದಲ ಡೊಂಬನಾ.
“ದೇವ ಬಂಗರೆ!

ಕರೆವುದೆನ್ನನು,......................
........ಸಾವು;..........................................
ಬಾಗಲು ತೆರೆದಿದೆ!...............
ಜೀವನಿಲ್ಲದು;.............
.............ಅರಿಕೆ ಮಾಡುವೆ;
ಕಾವುದೆನ್ನಪರಾಧವಾ.................

"ಹಿಂದೆ ನಾಲ್ಕ್-ಕೈ ವರ್ಷಗಳ ಕೆಳಗೊಂದು ಸಲ ನಾನಿಲ್ಲಿಗೆ
ಬಂದು ಗೈದಾಟಕೆ ಪಾದದ ತಂದೆ ತಂಗಿ ಸುನಂದೆಯು–"

ಎಂದು ನಿಲ್ಲಲು ಡೊಂಬನರೆನುಡಿ, "ಮುಂದೆ, ಮುಂದೆ"ನ ಬಂಗರು,
"ಮುಂದೆ ತಮ್ಮ ಸುನಂದೆ... ಕಿರಿಮಗಳೊಂದಿಗರಮನೆ... ಬಿಟ್ಟಳು.

"ಅಂದು ರತ್ನಾವತಿಗೆ ತುಂಬದು ಒಂದು ವರ್ಷವು, ಕೂಸಿನಾ
ಮುಂದು ಎಣಿಸದೆ, ನಿಂದೆ ಗಣಿಸದೆ... ಹಿಂದೆ ಬಂದಳು ಪಾಪಿಯಾ.

"ಸಂದವಿಂದಿಗೆ ವರ್ಷಗಳು ಹನ್ನೊಂದು,–ಸತ್ತು ಸುನಂದೆಯು,
ಅಂದಿನಿಂದಿದು ಕೋಗಿಲೆಯ ಮರಿ ಕಾಗೆ ನಾನೆನೆ ಆಯಿತು.

"ಇವಳೆ ರತ್ನಾವತಿಯು; ಮುಂಚಿನ ಇವಳ ಹೆಸರದು ರನ್ನೆಯು;
ಇವಳೆ ಕೊಳ ಸೋಕದ ಸುಕನ್ಯೆಯು; ಇವಳೆ ಡೊಂಬರ ಚೆನ್ನೆಯು.

"ಆರಿ ದೂರಕೆ ಅಲೆದ ಕಡಲಿನ ನೀರೆ ಕಡಲನೆ ಕೂಡಿತು,..........
....ಬೇರೆ! ....ಹಾ! ....ಹಾ!" ಎಂದು ಡೊಂಬನು ತೀರಿಸದೆ ಕಣ್ಮುಚ್ಚಿದಾ.

ಅಳಿದ ಡೊಂಬಗೆ ಉತ್ತರಕ್ರಿಯೆಗಳನು ಬಂಗರು ಮಾಡಿಸಿ,
ಗೆಳೆಯ ಡೊಂಬರ ಚೆನ್ನೆಯನು ಮದುವಳಿಗ ಕೈಯಲಿ ಹಿಡಿದನು.

ತನ್ನ ರಾಜ್ಯದ ಪಾಲು ಬಳುವಳಿಯನ್ನು ಕೊಟ್ಟನು ರನ್ನೆಗೆ.
ಚೆನ್ನೆ ಸಂತತಿಗಾಯ್ತು ಅದರಿಂ ಹೆಸರು ಡೊಂಬಾ ಹೆಗಡೆ.

# ತೋಟದವನು

**– ಪಿ. ಲಂಕೇಶ್**

ಇದನ್ನು ವಿವರವಾಗಿ ಬರೆದರೆ ಬಡವಾಗುತ್ತದೆ.

ಈ ಕತೆ ನನಗೊಮ್ಮೆ ಹೊಳೆಯಿತು. ಒಬ್ಬ ಮುದುಕನನ್ನು ನೋಡಿ ಹೊಳೆಯಿತು. ಚನ್ನರಾಯಪಟ್ಟಣದ ಹತ್ತಿರದ ತೆಂಗಿನ ತೋಟದಲ್ಲಿ ನಿಂತಿದ್ದ ಮುದುಕ. ಅವನ ಕಣ್ಣಲ್ಲಿ ಜಾಣತನ, ವಿಚಿತ್ರ ನೆನಪುಗಳಿದ್ದವು. ಎತ್ತರಕ್ಕೆ ನಿಂತಿದ್ದ ಬಿಳಿ ಕೂದಲು, ಉದ್ದನೆಯ ಮೂಗು, ಗಟ್ಟಿಮಾಂಸದ ತೋಳುಗಳು, ಒಂದು ಕೈಯಲ್ಲಿ ತೆಂಗಿನಮರಕ್ಕೆ ಏರು ಹಾಕುತ್ತಿದ್ದ ಗುದ್ದಲಿ, ಇನ್ನೊಂದು ಬಗಲಲ್ಲಿ ವೃತ್ತಪತ್ರಿಕೆ. ಕೆಲಸದವ, ಮೇಸ್ತ್ರಿ ಮತ್ತು ತತ್ತ್ವಜ್ಞಾನಿ ಮೂರು ಆಗಿದ್ದಂಥ ಮುದುಕ.

ಈತ ನೂರಾರು ಮೈಲಿ ನಡೆದ ಮೇಲೆ ಒಂದು ದಿನ ಆ ತೋಟಕ್ಕೆ ಬಂದ, ಅಲ್ಲಿ ತೋಟದ ಯಜಮಾನನಿದ್ದ. ಆ ಯಜಮಾನನಿಗೆ ಈ ಮಾದರಿಯ ಮನುಷ್ಯನೇ ಬೇಕಾಗಿದ್ದ. ಒಂದೆರಡು ಮಾತುಕತೆ ಆದವು. ಅಲ್ಲಿಂದ ಆ ತೋಟದಲ್ಲೇ ತಂಗಿದ. ತೋಟಕ್ಕೆ ನಿಜಕ್ಕೂ ಉಪಯುಕ್ತನಾದ. ಬೆಳೆಯ ಬಗ್ಗೆ, ಕೂಲಿಗಳ ಬಗ್ಗೆ ಬಲ್ಲವನೀತ. ತೋಟದಲ್ಲಿ ಆಗುತ್ತಿದ್ದ ಕಳವು ನಿಂತವು. ತೋಟದ ಆದಾಯ ಹೆಚ್ಚಿತು. ಯಜಮಾನನ ಜೀವನ ಕೂಡ ಬದಲಾಯಿತು. ತೋಟ ವಿಸ್ತಾರಗೊಂಡು ತೋಟದ ಯಜಮಾನನ ತುಡುಗು ಹೆಚ್ಚಾಯಿತು; ತೋಟದ ಯಜಮಾನನ ಹೆಂಡತಿಗೆ ಇದೆಲ್ಲ ವಿಚಿತ್ರವಾಗಿ ಕಾಣತೊಡಗಿತು. ಈ ಮುದುಕ ತೋಟಕ್ಕೆ ಬಂದದ್ದು ಒಳ್ಳೆಯದೋ ಕೆಟ್ಟದ್ದೋ ಎಂದು ಕೂಡ ತಿಳಿದುಕೊಳ್ಳುವುದು ಆಕೆಗೆ ಕಷ್ಟವಾಯಿತು. ಗಂಡನಿಗೆ ಶ್ರೀಮಂತಿಕೆ, ಸಮಾಜದಲ್ಲಿ ಪ್ರಭಾವ ಹೆಚ್ಚಾದವು. ನೆರೆಯೂರಲ್ಲಿ ಅವನಿಗೆ ಗೆಳೆಯರು, ಊರಲ್ಲಿ ಅಭಿಮಾನಿಗಳು. ಮಾಡಲು ಕೆಲಸವಿಲ್ಲದಿದ್ದರೂ ಜೀವನವನ್ನು ಪೂರ್ತಿ ತುಂಬಿಕೊಂಡ ಬಣ್ಣ ಬಣ್ಣದ ಘಟನೆಗಳು. ಒಂದು ದಿನ ಆಕೆಗೆ ಗಂಡನ ವ್ಯಭಿಚಾರದ ಬಗ್ಗೆ, ಆತನ ವರ್ಚಸ್ಸಿನ ಅಂಗವಾಗಿಯೇ ಹುಟ್ಟಿಕೊಂಡ ತೆವಲುಗಳ ಬಗ್ಗೆ ಹೆದರಿಕೆಯಾಯಿತು. ಹತ್ತು ಎಕರೆ ಇದ್ದ ತೋಟ ತನ್ನ ಗಂಡನ ಮತ್ತು ತನ್ನ ಕಲ್ಪನೆಗೂ ಸಿಕ್ಕದಷ್ಟು ದೊಡ್ಡದಾಗಿತ್ತು. ಅದು ಒಳ್ಳೆಯದು, ಆದರೆ ಬದುಕು ಕೂಡ ತಮ್ಮೆಲ್ಲರ ಹತೋಟಿ ಮೀರತೊಡಗಿತ್ತು.

ಈ ದಿಕ್ಕು ತೋಚದ ಸಂದರ್ಭದಲ್ಲಿ ಆಕೆಯ, ಅಂದರೆ ತೋಟದ ಯಜಮಾನನ ಹೆಂಡತಿಯ ಅಳಲು ಗೊತ್ತಾದವನಂತೆ ಒಂದು ದಿನ ತೋಟದ ಮುದುಕ ಆಕೆಯನ್ನು ಕಂಡ. ತನ್ನೊಂದಿಗೆ ಎಂದೂ ಮಾತನಾಡದ ಮುದುಕ ತೋಟದಲ್ಲಿ ಅವಳಿದ್ದಲ್ಲಿಗೆ ಬಂದು ಮುಗುಳ್ನಕ್ಕು ಆಕೆಗೆ ಎಳನೀರು ಇಳಿಸಿಕೊಟ್ಟ. ಬಾವಿಯ ದಂಡೆಯ ಮೇಲೆ ಕೂತ. ಆಕೆ ಬೇರೆ ಮಾರ್ಗ ತಿಳಿಯದೆ ಅವನ ಹತ್ತಿರ ಕೂತಳು. ಸೂರ್ಯ ಪಡುವಲದತ್ತ ಜಾರುತ್ತಿತ್ತು,

ಕಿರಣಗಳು ತೆಂಗು, ಹಲಸು, ಮಾವಿನ ಮರದ ಮೂಲಕ ಬಾವಿಯ ದಂಡೆಗೆ ತಂಪಾಗಿ ತಾಗುತ್ತಿದ್ದವು.

ಮುದುಕ ಹೇಳತೊಡಗಿದ. "ಒಂದಾನೊಂದು ಊರಲ್ಲಿ ತಮ್ಮಣ್ಣ ಎಂಬ ಮನುಷ್ಯನಿದ್ದ. ಆತನಿಗೆ ಬದುಕಿನಲ್ಲಿ ಎಲ್ಲ ಇತ್ತು. ಹತ್ತೆಕರೆ ಗದ್ದೆ, ಅಚ್ಚುಕಟ್ಟಾದ ಮನೆ, ಅವನ ಮಾತನ್ನು ಕೇಳುತ್ತಿದ್ದ ಜನ. ಅವನು ಪಡೆದಿದ್ದ ಎಲ್ಲ ವಿಷಯಗಳಲ್ಲಿ ಮುಖ್ಯವಾದದ್ದು ಆತನ ಪ್ರತಿಸ್ಪರ್ಧಿ ಸಂಗೋಜಿ".

ಇಷ್ಟನ್ನು ಹೇಳಿದ ತೋಟದ ಮುದುಕ ತಪ್ಪು ಹೇಳಿದವನಂತೆ ತಡವರಿಸಿ ಚಿಂತಿಸತೊಡಗಿದ. ಆಕೆ ಕೇಳುತ್ತಿದ್ದಳು–'ಇದೆಲ್ಲ ನನಗ್ಯಾಕೆ' ಎಂದು ಎದ್ದು ಹೋಗುವ ಮನಸ್ಸಾಯಿತು. ಆದರೆ ಮುದುಕನಿಗೆ ನೋವಾದಿತೆಂದು ಸುಮ್ಮನೆ ಕೂತಳು. ಮುದುಕ ಮುಂದುವರಿಸಿದ, "ಆತನ ಹೆಸರು ಸಂಗೋಜಿ ಅಲ್ಲ, ಬಸವಯ್ಯ" ಅಂದ. ನಡೆದದ್ದೇ ಹೀಗೆ ಕಥೆಯಾಗ ತೊಡಗಿದೊಡನೆ ಬೇರೆ ಬೇರೆ ವೇಷತೊಟ್ಟು ಹೊರಬರುತ್ತದೆ. ಎಂದು ಆಶ್ಚರ್ಯ ವ್ಯಕ್ತಪಡಿಸಿದ. ಅದೆಲ್ಲ ಇರಲಿ. ಅವನ ಹೆಸರು ಬಸವಯ್ಯ ಎಂದು ಇಟ್ಟುಕೊಳ್ಳೋಣ. ಆತ ತಮ್ಮಣ್ಣನ ಪ್ರತಿಸ್ಪರ್ಧಿ. ತಮ್ಮಣ್ಣ ಹತ್ತೆಕರೆಗೆ ಹೊಂದಿಕೊಂಡಂತೆ ಇನ್ನೂ ನಾಲ್ಕೆಕರೆ ಕೊಂಡರೆ ಬಸವಯ್ಯನೂ ಕೊಂಡುಕೊಂಡ. ತಮ್ಮಯ್ಯ ಹತ್ತು ಜನ ಗೆಳೆಯರನ್ನು ಪಡೆದಿದ್ದರೆ, ಬಸವಯ್ಯ ಹದಿನೈದು ಅಭಿಮಾನಿಗಳನ್ನು ಗಳಿಸಿಕೊಂಡ. ಇದೆಲ್ಲ ಆರೋಗ್ಯಕರ ಸ್ಪರ್ಧೆಯಂತೆಯೇ ಇತ್ತು. ಆದರೆ ಬರುಬರುತ್ತ ಇವರ ಸವಾಲು ಪಾಟಿಸವಾಲು ಎಷ್ಟು ಹೆಚ್ಚಾಯಿತೆಂದರೆ, ಅವರು ಕೊಳ್ಳಲು ಎರಡು ಊರುಗಳಲ್ಲಿ ನೆಲವೇ ಉಳಿಯಲಿಲ್ಲ. ಎಲ್ಲವೂ ತಮ್ಮಣ್ಣ ಮತ್ತು ಬಸವಯ್ಯನ ಸ್ವತ್ತಾಗಿತ್ತು. ತಮ್ಮಣ್ಣನದು ಸಾವಿರ ಎಕರೆ, ಬಸವಯ್ಯನದು ಎಂಟುನೂರು ಎಕರೆ, ಇದನ್ನು ಬಸವಯ್ಯ ಸಹಿಸುವುದು ಕಷ್ಟವಾಯಿತು. ತನಗೆ ಕೂಡಲೆ ಇನ್ನೂರೆಕರೆ ಜಮೀನನ್ನು ಮಾರಬೇಕೆಂದು ಹೇಳಿಕಳಿಸಿದ. ಬಸವಯ್ಯ ಕೋಪದಿಂದ ಕೆಂಡವಾದ. ತನ್ನೆಲ್ಲ ಜನರನ್ನು ಕರೆದುಕೊಂಡು ಹೋಗಿ ತಮ್ಮಣ್ಣನ ಇನ್ನೂರೆಕೆರೆ ಜಮೀನನ್ನು ತನ್ನದಾಗಿ ಮಾಡಿಕೊಂಡು ಬೇಲಿ ಹಾಕಿಕೊಂಡ. ತಮ್ಮಣ್ಣನಿಗೆ ಸಹಿಸುವುದು ಕಷ್ಟವಾಯಿತು.

ಇಬ್ಬರ ಜಗಳ ಇಷ್ಟರಲ್ಲಿ ಅವರ ಬೆಂಬಲಿಗರನ್ನೆಲ್ಲ ಒಳಗೊಂಡಿತ್ತು. ಬಸವಯ್ಯ ಆಕ್ರಮಿಸಿಕೊಂಡಿದ್ದ ನೆಲವನ್ನು ಹಿಂದಕ್ಕೆ ಪಡೆಯಲು ತಮ್ಮಣ್ಣನಿಗೆ ಅನೇಕ ದಾರಿಗಳಿದ್ದುದನ್ನು ಅವರ ಅಭಿಮಾನಿಗಳು ಹೇಳಿಕೊಂಡರು. ಪೊಲೀಸರಿದ್ದಾರೆ, ಕೋರ್ಟಿದೆ... ಇವೆಲ್ಲ ಬೇಡವೆಂದರೆ ಬಸವಯ್ಯನ ಮೇಲೆ ದಂಡೆತ್ತಿ ಹೋಗಬಲ್ಲ ಜನರಿದ್ದಾರೆ. ಇಂಥದೊಂದು ಯುದ್ಧ ಅನಿವಾರ್ಯ ಕೂಡ ಆಗಿದೆ. ಆದರೆ ತಮ್ಮಣ್ಣ ಈ ಧೂರ್ತ ಬಸವಯ್ಯನನ್ನು ಪೂರ್ತಿ ಹತ್ತಿಕ್ಕುವ ಮಾರ್ಗಕ್ಕಾಗಿ ಹುಡುಕಿದ. ತನ್ನೆಲ್ಲ ಅನುಭವವನ್ನು ಲಾವಣಿ ಮಾಡಿ ಹಾಡತೊಡಗಿದ. ತಮ್ಮಣ್ಣ ಮತ್ತು ಬಸವಯ್ಯನ ಸ್ಪರ್ಧೆ ಕಣ್ಣಿಗೆ ಕಾಣುವ ವಿಷಯಗಳಿಂದ ಕಾಣದ ವಿಷಯದತ್ತ ಸಾಗತೊಡಗಿತ್ತು.

ಬಸವಯ್ಯನಲ್ಲಿ ಇದಕ್ಕೆ ಉತ್ತರವಿರಲಿಲ್ಲ. ತಾನೂ ಹಾಡಲು ಯತ್ನಿಸಿದ. ಆಗಲಿಲ್ಲ. ಜಮೀನನ್ನು ಇನ್ನೂ ಚೆನ್ನಾಗಿ ಕೃಷಿ ಮಾಡಿದ. ಇದು ತಮ್ಮಣ್ಣನಿಗೆ ಉತ್ತರವಾಗಲಿಲ್ಲ. ತಮ್ಮಣ್ಣನ ಖ್ಯಾತಿ ಎಲ್ಲೆಲ್ಲೂ ಹರಡತೊಡಗಿತು. ಬಸವಯ್ಯನ ಕ್ರೌರ್ಯ, ನೀಚತನ ಕೂಡ ತಮ್ಮಣ್ಣನ ಹಾಡಿನಲ್ಲಿ ಬರತೊಡಗಿದವು. ಸಮಾಜದ ಗಣ್ಯರು, ರಾಜಕಾರಣಿಗಳು ತಮ್ಮಣ್ಣನನ್ನು ನೋಡಲು ಬರತೊಡಗಿದರು. ಜಾನಪದ ವಿದ್ವಾಂಸರು ದುಂಬಾಲು ಬಿದ್ದರು. ವಿಮರ್ಶಕರು ತಮ್ಮಣ್ಣ ಹಾಡುತ್ತಿದ್ದ ಲಾವಣಿಗಳನ್ನು ವಿಶ್ಲೇಷಿಸಿ, ಅನುವಾದಿಸಿ ತಮ್ಮ ಪಾಲಿನ ಖ್ಯಾತಿ ಪಡೆದರು. ಇದನ್ನೆಲ್ಲ ನೋಡಿದ ಬಸವಯ್ಯ ಮೈಪರಚಿಕೊಳ್ಳತೊಡಗಿದ. ಜಮೀನನ್ನು ಇನ್ನಷ್ಟು ಒತ್ತರಿಸಿದ, ಮತ್ತಷ್ಟು ಒತ್ತರಿಸಿದ. ತಮ್ಮಣ್ಣ ಇದಾವುದನ್ನೂ ಗಮನಿಸಲೇ ಇಲ್ಲ. ಕಲಾರಾಧನೆಯೇ ಆತನ ಜೀವನವಾಗತೊಡಗಿತ್ತು. ಅವನು ತನ್ನ ಯುಗದ ಅತ್ಯುತ್ತಮ ಕವಿ ಎಂದು ಎಲ್ಲರೂ ಸನ್ಮಾನಿಸಿದರು.

ಬಸವಯ್ಯ ಕುಗ್ಗಿ ಹೋದ. ಆದರೂ ತನ್ನ ಬದುಕನ್ನು ಸಕಲ ಸಂಪತ್ತುಗಳಿಂದ ತುಂಬಿಕೊಳ್ಳತೊಡಗಿದ. ಭವ್ಯ ಮನೆ ಕಟ್ಟಿಸಿಕೊಂಡ. ತನ್ನನ್ನು ಹೊಗಳುವುದಕ್ಕಾಗಿಯೇ ಜನರನ್ನು ನೇಮಿಸಿಕೊಂಡ. ಚಿನ್ನ, ವಜ್ರ, ರತ್ನಗಳಿಂದ ಅಲಂಕರಿಸಿಕೊಂಡ. ಆದರೆ ತಮ್ಮಣ್ಣನ ಪುಸ್ತಕಗಳಿಲ್ಲದೆ ಮನೆ ಬಿಕೋ ಅನ್ನತೊಡಗಿತು. ಬಂದವರು ಹಾಗೆ ಹೇಳುತ್ತಿದ್ದರು. ಆದ್ದರಿಂದ ಅನೇಕ ವಿದ್ವಾಂಸರು, ಕವಿಗಳು, ಸಂಗೀತಗಾರರನ್ನು ಆಹ್ವಾನಿಸಿ ತನ್ನ ಮನೆಗೆ ಅರ್ಥ ತಂದುಕೊಳ್ಳತೊಡಗಿದ.

ಹೀಗಿದ್ದಾಗ ಒಂದು ದಿನ ತಮ್ಮಣ್ಣನಿಗೆ ಕಾಯಿಲೆಯಾಗಿದ್ದುದು ತಿಳಿಯಿತು. ಆಗ ಬಸವಯ್ಯನಿಗೆ ತಮ್ಮಣ್ಣನನ್ನು ಮೀರಿಸುವ ದಾರಿ ಹೊಳೆಯಿತು. ಆರೋಗ್ಯವೇ ಭಾಗ್ಯ! ಸಂಗೀತ ಹಾಡಬಹುದು, ಲಾವಣಿ ಬರೆಯಬಹುದು, ಆದರೆ ತಮ್ಮಣ್ಣ ಕಾಯಿಲೆಯಿಂದ ನರಳತೊಡಗಿದರೆ ತನ್ನ ಚೇತನ ಊರ್ಜಿತಗೊಳ್ಳುವ ಸಂಭವ ಕಂಡಿತು. ತಮ್ಮಣ್ಣನ ಕಾಯಿಲೆ ಬಸವಯ್ಯನಿಗೆ ಆರೋಗ್ಯ.

ಅಷ್ಟರಲ್ಲಿ ತಮ್ಮಣ್ಣನಿಗೆ ಬಸವಯ್ಯನನ್ನು ಶಿಕ್ಷಿಸುವ ಇನ್ನೊಂದು ಮಾರ್ಗ ಹೊಳೆದಿತ್ತು. ಅದು ಸತ್ತುಹೋಗುವುದು. ದೇಹದ ಮಟ್ಟದಲ್ಲಿದ್ದರೆ ಆತ ಸ್ಪರ್ಧಿಸುತ್ತಲೇ ಹೋಗಬಹುದು – ತನ್ನ ಹಾಡು ತನ್ನ ದೇಹದಿಂದ ಬೇರ್ಪಟ್ಟರೆ, ಅದಕ್ಕೂ ತನ್ನ ರಕ್ತಮಾಂಸಗಳಿಗೂ ಸಂಬಂಧವೇ ಇಲ್ಲದಿದ್ದರೆ... ಎಂದು ಚಿಂತಿಸಿದ.

"ಮನುಷ್ಯ ಎಷ್ಟು ವಿಚಿತ್ರ ಅಂತ ಕಾಣಹತ್ತಿತ್ತು" ಎಂದು ಮುದುಕ ತೋಟದೊಡತಿಗೆ ವಿವರಿಸತೊಡಗಿದ. ಅವನಿಗೆ ಸಂಪತ್ತು, ವಿದ್ಯೆ, ಕಲೆ ಎಲ್ಲಬೇಕು. ಆದರೆ ಆತ ಯಾವುದೋ ಅಸಹ್ಯ ಜಿದ್ದಿನಿಂದ ಬದುಕುತ್ತಾನೆ. ಅದಿಲ್ಲದಿದ್ದರೆ ಅವನು ಬದುಕೋದಕ್ಕೆ ಕಾರಣವೇ ಸಿಗಲ್ಲ. ಇದು ನಡೆದ ಕತೆ ಅಲ್ಲ, ಕೇಳಿದ ಕತೆ. ನಾನು ದಿನಾಲೂ ಒಂದು ಪತ್ರಿಕೆ ತರಿಸೋದು ನಿಮಗೆ ಗೊತ್ತಿರಬಹುದು. ನಾನು ನಿಮಗೆ ಕೇವಲ ಮುದುಕ. ಒಂದು ವಯಸ್ಸಾದ ಮೇಲೆ ಮನುಷ್ಯ ತನ್ನ ಹೆಸರನ್ನೇ ಕಳೆದುಕೊಳ್ತಾನೆ. ಅವನ ವಯಸ್ಸು ಮುಖ್ಯವಾಗುತ್ತೆ, ಹೆಸರು

ಹೊರಟುಹೋಗುತ್ತೆ. ನಾನೀಗ ತೋಟದಜ್ಜ. ನಿಮ್ಮ ಆಳು, ಅದರ ಜೊತೆಗೆ ವೃತ್ತಪತ್ರಿಕೆ ಓದುವ, ತೋಟವನ್ನು ಸರಿಯಾಗಿ ನೋಡಿಕೊಳ್ಳುವ ಆಸಾಮಿ... ಬಸವಯ್ಯ, ತಮ್ಮಣ್ಣನ ಕತೆ ನನಗೆ ಹೊಳೆದದ್ದು ರಷ್ಯಾದೇಶ ಇದ್ದಕ್ಕಿದ್ದಂತೆ 'ನಾನು ಅಮೆರಿಕಾದ ಶತ್ರುವಲ್ಲ, ಅಮೆರಿಕಾದೊಂದಿಗೆ ಯುದ್ಧ ಮಾಡುವುದಿಲ್ಲ' ಎಂದು ಹೇಳಿದಾಗ. ಹೀಗೆಂದಾಗ ರಷ್ಯಾದ ಬದ್ಧ ವೈರಿ ಅಮೆರಿಕಕ್ಕೆ ಏನೆನ್ನಿಸಿರಬೇಕು? ರಷ್ಯಾ ಇನ್ನ ಮೇಲೆ ತನ್ನ ಸ್ನೇಹಿತ ಎಂದು ಕೇಳಿದೊಡನೆ ಅಮೆರಿಕದಲ್ಲಿ ಉಂಟಾದ ದುಗುಡ, ಬೇಸರ ನಿಮಗೆ ಗೊತ್ತಿರಲಾರದು. ಇಂಥದನ್ನು ದೇಶ ಸಹಿಸಿಕೊಳ್ಳುತ್ತೆ. ಆದರೆ ಮನುಷ್ಯ ಸಹಿಸಿಕೊಳ್ಳೋದು ಕಷ್ಟ. ನನಗೂ ಹಾಗೇ ಆಯಿತು ತಾಯಿ. ನನ್ನ ಸಾವೇ ಬಸವಯ್ಯನನ್ನು ನಾಶ ಮಾಡಬಲ್ಲದು ಅನ್ನಿಸಿತು. ಆದ್ದರಿಂದ ಒಂದು ದಿನ ಎಲ್ಲವನ್ನೂ ಬಿಟ್ಟು ಹೊರಟುಬಿಟ್ಟೆ. ನಾನು ಹೊರಟು ಬಂದ ಕೆಲ ದಿನಗಳಲ್ಲೇ ಬಸವಯ್ಯ ತೀರಿಕೊಂಡ. ಜೀವನ ಸಾಗಿಸೋದಕ್ಕೆ ಅವನಲ್ಲಿ ಕಾರಣಗಳೇ ಉಳಿದಿರಲಿಲ್ಲ.

ನನ್ನ ಹೆಸರು ತಮ್ಮಣ್ಣ.

ಅವನು ಸತ್ತಮೇಲೆ ಲಾವಣಿಗಳನ್ನೆಲ್ಲ ಮರೆತೆ. ಹೆಸರುವಾಸಿಯಾಗಿದ್ದ ನಾನೂ ಏನೂ ಇಲ್ಲದವನಾದೆ. ಹೀಗೆ ನನ್ನ ಸೇಡು ತೀರಿಸಿಕೊಂಡೆ.

ನಿಮ್ಮ ಗಂಡ ಇವತ್ತು ಶ್ರೀಮಂತರಾಗಿ ಮೆರೆಯತೊಡಗಿದ್ದಾರೆ. ಯಾರ ಮಾತಿಗೂ ಅವರು ಮಣಿಯುವುದಿಲ್ಲ. ಮನುಷ್ಯ ಎಷ್ಟು ತೊಡಕಿನವನು ಅಂದರೆ ಆತ ಸಾಯುವವರೆಗೆ ಒಂದಲ್ಲ ಒಂದು ಜಿದ್ದಿನಿಂದ, ಸವಾಲಿನಿಂದ, ಬದುಕುತ್ತಲೇ ಹೋಗುತ್ತಾನೆ.

ಅಮ್ಮ, ಏನೂ ತಿಳ್ಕೋಬೇಡಿ. ನಾನಿದನ್ನೆಲ್ಲ ಹೇಳಲೇ ಇಲ್ಲ ಅಂತ ಅಂದ್ಕೊಳ್ಳಿ. ಅಥವಾ ಇದೆಲ್ಲ ಕನಸಿನಲ್ಲಿ ಆದದ್ದು ಅಂದ್ಕೊಳ್ಳಿ. ಕೆಲಸದೋರು ಮನೆಗೆ ಹೋಗುವ ಹೊತ್ತು. ಆ ಲೋಕ್ಯಾನ ಮಗು ಭಾಳ ಚೆನ್ನಾಗಿ ಚಿತ್ರ ಬರೆಯುತ್ತೆ, ಅದಕ್ಕೆ ಜ್ವರ ಇವತ್ತು, ನೋಡಿಕೊಂಡು ಬರ್ತೇನೆ...

# ಪೆಪೆ

**– ಶ್ರೀನಿವಾಸ ವಿ.ಸುತ್ರಾವೆ (ಅನುವಾದ)**

**ಮೂಲ: ಮ್ಯಾಕ್ಸಿಂ ಗಾರ್ಕಿ**

ಪೆಪೆಗೆ ಹತ್ತು ವರ್ಷ, ಒಣಕಲ, ತೆಳ್ಳಗಿದ್ದಾನೆ. ಹಲ್ಲಿಯಂತೆ ಚುರುಕು. ಬಣ್ಣ ಬಣ್ಣದ ಅವನ ಹರಕಲು ಬಟ್ಟೆಗಳು ಅವನ ಬುಡಕಲು ಭುಜಕ್ಕೆ ಜೋತುಬಿದ್ದಿವೆ. ಬಿಸಿಲು ಮತ್ತು ಕೊಳೆಯಿಂದ ಕಪ್ಪಾದ ಅವನ ಮೈಚರ್ಮವು ಅಸಂಖ್ಯಾತ ತೂತುಗಳಿಂದ ತುಂಬಿರುವ ಬಟ್ಟೆಗಳಿಂದ ಹೊರಗೆ ಇಣುಕಿ ನೋಡುವಂತೆ ಕಾಣುತ್ತೆ.

ಅವನು– ಕಡಲು ಗಾಲಿಯು ಆ ಕಡೆ ಈ ಕಡೆ ತೂರುವ ಒಣಗಿದ ಹುಲ್ಲಿನ ಗರಿಯಂತೆ ಕಾಣುತ್ತಾನೆ. ಬೆಳಗಿನಿಂದ ಸಂಜೆಯವರೆಗೆ ಪೆಪೆ ದ್ವೀಪದ ಕಲ್ಲುಗಳ ಮೇಲೆ ಕುಪ್ಪಳಿಸುತ್ತಾನೆ.

ದಣಿವಿರದ ಅವನ ಸಣ್ಣ ದನಿಯಿಂದ

ಸುಂದರ ಇಟಲಿ ,

ನನ್ನದು ಇಟಲಿ !

ಎಂಬ ಹಾಡು ಪದೇ ಪದೇ ಹೊರ ಬರುತ್ತದೆ.

ಅವನಿಗೆ ಪ್ರತಿಯೊಂದರಲ್ಲೂ ಆಸಕ್ತಿ : ಪುಣ್ಯಭೂಮಿಯ ಮೇಲೆ ವಿಪುಲವಾಗಿ ಬೆಳೆದಿರುವ ಹೂವುಗಳು, ಊದಾ ಬಣ್ಣದ ಕಲ್ಲುಬಂಡೆಗಳ ಮಧ್ಯೆ ಭಗ್ಗನೆ ಎದ್ದು ಓಡುವ ಹಲ್ಲಿಗಳು, ಸಮುದ್ರ ತಳದ ಕಾಳ ಉದ್ಯಾನವನದ ಮೀನುಗಳು, ಊರಿನ ಅಂಕುಡೊಂಕಾದ ಕಿರಿದಾದ ರಸ್ತೆಗಳಲ್ಲಿನ ವಿದೇಶೀಯರು– ಹೀಗೆ ಎಲ್ಲವೂ ಅವನ ಆಸಕ್ತಿಯನ್ನು ಕೆರಳಿಸುತ್ತವೆ.

ಜಂಬದಿಂದ ಬೀಗುವ, ನವಿರೆದ್ದ ಕೂದಲಿನ ಜರ್ಮನ್ನನ್ನು ತನ್ನ ತೀಕ್ಷ್ಣ ಕಣ್ಣುಗಳಿಂದ ನೋಡಿ ಪೆಪೆ ತನ್ನ ಆಟದ ಸಂಗಾತಿಗಳಿಗೆ ಹೇಳುತ್ತಾನೆ:

"ಅವನ ಮುಖ ನೋಡು ! ನನ್ನ ಹೊಟ್ಟೆಯಷ್ಟು ದೊಡ್ಡದಾಗಿದೆಯಲ್ವಾ?"

ಪೆಪೆಗೆ ಜರ್ಮನ್ನರನ್ನು ಕಂಡರಾಗದು. ಅವನಿಗಿಷ್ಟವಾಗುವುದೇನೆಂದರೆ ಬೀದಿಯಲ್ಲಿನ, ಚೌಕಗಳಲ್ಲಿನ ಮತ್ತು ಮದ್ಯದಂಗಡಿಗಳಲ್ಲಿ ವೈನ್ ಕುಡಿಯುತ್ತ ಇಸ್ಪೀಟಾಟ ಆಡುತ್ತ ವೃತ್ತಪತ್ರಿಕೆಗಳನ್ನೋದುತ್ತ ರಾಜಕೀಯ ವ್ಯವಹಾರವನ್ನು ಚರ್ಚಿಸುತ್ತ ಕೂರುವ ಜನರ ವಿಚಾರಗಳು.

ಪೆಪೆ ಎಲ್ಲರ ಆಲಿಸುತ್ತಾನೆ, ಯಾವುದನ್ನೂ ಮರೆಯುವುದಿಲ್ಲ.

ಇಲ್ಲೊಬ್ಬ ಇಂಗ್ಲೀಷಿನವನಿದ್ದಾನೆ, ಕತ್ತರಿಯಂಥ ತನ್ನ ಕಾಲುಗಳನ್ನೆಳೆಯುತ್ತ ನಡೆದು ಹೋಗುತ್ತಿರುವವನು. ಅವನೆದುರು ಪೆಪೆ ಒಂದು ಶೋಕ ಗೀತೆಯನ್ನು ಹಾಡುತ್ತಿದ್ದಾನೆ.

ನನ್ನ ಗೆಳೆಯ ಸತ್ತನು,

ನನ್ನ ಮಡದಿ ಅತ್ತಳು...
ಅವಳಿಗೇನು ದುಃಖವೊ
ನನಗೆ ಮಾತ್ರ ತಿಳಿಯದು.

ಪೆಪೆಯ ಆಟದ ಸಂಗಾತಿಗಳು ಅವನ ಹಿಂದೆ ನಿಧಾನವಾಗಿ, ನಗುತ್ತ ನಡೆದು ಹೋಗುತ್ತಾರೆ – ಆ ವಿದೇಶೀಯನು ಶಾಂತವಾಗಿ, ತನ್ನ ಕಳೆಗುಂದಿದ ಕಣ್ಣುಗಳಿಂದ ಅವರತ್ತ ನಸುನೋಟ ಬೀರಿದಾಗ – ಪೊದೆಗಳಲ್ಲಿ ಅಥವಾ ಗೋಡೆಗಳ ಹಿಂದೆ ಬಚ್ಚಿಟ್ಟುಕೊಳ್ಳುವ ಸಲುವಾಗಿ ಓಡುವ ಇಲಿಗಳಂತೆ.

ಪೆಪೆಯ ಬಗ್ಗೆ ಜನ ಬೇಕಾದಷ್ಟು ಸ್ವಾರಸ್ಯಕರ ಕಥೆಗಳನ್ನು ಹೇಳಬಹುದು.

ಒಂದು ದಿನ ಇಟಲಿಯ ಮಹಿಳೆ ತನ್ನ ತೋಟದ ಸೇಬುಗಳ ಬುಟ್ಟಿಯೊಂದನ್ನು ತನ್ನ ಗೆಳತಿಯ ಮನೆಗೆ ಪೆಪೆಯ ಕೈಯಲ್ಲಿ ಕಳಿಸಿದಳು.

ಕೂಡಲೇ ಪೆಪೆ ಬುಟ್ಟಿಯನ್ನೆತ್ತಿಕೊಂಡು, ತಲೆಯ ಮೇಲೆ ಹೊತ್ತು ನಡೆದ. ಸಾಲ್ದೊ ಪಡೆಯಲು ಅವನು ವಾಪಸ್ಸು ಬರುವ ಹೊತ್ತಿಗೆ ಸಾಯಂಕಾಲವಾಗಿತ್ತು.

“ನಿನಗೇನೂ ಅವಸರ ಇದ್ದಿಲ್ಲ, ಅಲ್ಲ ?” ಎಂದು ಆ ಹೆಂಗಸು ಕೇಳಿದಳು.

“ಅಯ್ಯೋ, ನನಗೆ ತುಂಬ ಸುಸ್ತಾಗಿದೆ, ಅಮ್ಮಾವ್ರೆ!” ಎಂದು ಪೆಪೆ ನಿಟ್ಟುಸಿರು ಬಿಡುತ್ತ ಹೇಳಿದ. “ನೋಡಿ, ಹತ್ತಿಕ್ಕಿಂತ ಜಾಸ್ತಿ ಇದ್ದವು !”

“ಸೇಬುಗಳಲ್ಲ, ಅಮ್ಮಾವ್ರೆ, ಹುಡುಗ್ರು.”

“ಆದರೆ ಸೇಬುಗಳೇನಾದವು ?”

“ಮೊದ್ಲು ಆ ಹುಡುಗ್ರು, ಅಮ್ಮಾವ್ರೆ : ಮೈಕೆಲ್, ಗಿಯೊವನ್ನಿ...”

ಆ ಹೆಂಗಸಿಗೆ ಸಿಟ್ಟು ಬಂತು. ಆಕೆ ಅವನ ಭುಜ ಹಿಡಿದು ಅಲ್ಲಾಡಿಸಿದಳು.

“ಸರಿಯಾಗಿ ಉತ್ತರಕೊಡು. ಸೇಬುಗಳನ್ನು ಕೊಟ್ಟು ಬಂದೆಯೋ, ಇಲ್ವೋ?”, ಎಂದು ಆಕೆ ಗಟ್ಟಿಯಾಗಿ ಕೇಳಿದಳು.

‘ನಾನವನ್ನೆಲ್ಲ ಚೌಕದ ತನಕ ತಗೊಂಡು ಹೋದೆ, ಅಮ್ಮಾವ್ರೆ ! ಎಲ್ಲ ಸರಿಯಾಗೇ ಇತ್ತು. ಮೊದ್ಲು ನಾನವರ ಅಪಹಾಸ್ಯಕ್ಕೆ ಗಮನ ಕೊಡ್ಲಿಲ್ಲ. ಅವರು ನನ್ನನ್ನ ಕತ್ತೆಗೆ ಹೋಲಿಸಿದ್ರೂ ಚಿಂತೆಯಿಲ್ಲ. ನಾನು ನಿಮಗೆ ಕೊಡೋ ಮರ್ಯಾದೆಗೋಸ್ಕರ, ನಿಮಗೋಸ್ಕರ ಅಮ್ಮಾವ್ರೆ, ಅದನ್ನೆಲ್ಲ ಸಹಿಸಿಕೊಳ್ತೀನಿ ಅಂತ ಅಂದ್ಕೊಂಡೆ. ಆದರೆ ಅವರು ನನ್ನ ತಾಯಿ ಬಗ್ಗೆ ತಮಾಷೆ ಮಾಡ್ಲಿಕ್ಕೆ ಶುರು ಮಾಡಿದಾಗ ಇದು ತುಂಬ ಅತಿಯಾಯ್ತು ಅಂದ್ಕೊಂಡೆ. ಬುಟ್ಟೀನ ಕೆಳಗಿಟ್ಟೆ, ಆಮೇಲೆ, ನೀವು ನೋಡ್ಬೇಕಿತ್ತು, ಅಮ್ಮಾವ್ರೆ, ನಾನು ಈ ಕೇಡಿಗರನ್ನು ಸೇಬುಗಳಿಂದ ಹ್ಯಾಗೆ ಹೊಡ್ದೆ ಅಂತ! ನೀವು ನೋಡಿದ್ರೆ ತುಂಬ ಸಂತೋಷ ಪಡ್ತಿದ್ರಿ!”

“ಅಯ್ಯೋ, ಅವರು ನನ್ನ ಹಣ್ಣುಗಳನ್ನೆಲ್ಲ ಕದ್ದುಬಿಟ್ಟರು ಹಾಗಾದ್ರೆ !” ಎಂದು ಆ ಹೆಂಗಸು ಬೊಬ್ಬೆಯಿಟ್ಟಳು.

ಪೆಪೆ ಶೋಕದ ನಿಟ್ಟುಸಿರುಬಿಟ್ಟ.

"ಅಯ್ಯೋ, ಸ್ವಲ್ಪ ತಾಳಿ" ಎಂದ ಅವನು. "ಅವರಿಗಿಟ್ಟ ಗುರಿ ತಪ್ಪಿದ ಹಣ್ಣುಗಳೆಲ್ಲ ಗೋಡೆಗೆ ಅಪ್ಪಳಿಸಿದವು, ಆದರೆ ನಾನು ಆ ಶತ್ರುಗಳನ್ನು ಹೊಡೆದಾದ ಮೇಲೆ ನಾವು ರಾಜಿ ಮಾಡ್ಕೊಂಡು ಉಳಿದವನ್ನ ತಿಂದೆವು...."

ಆ ಹೆಂಗಸು ಪೆಪೆಯ ಬೋಳಿಸಿದ ಪುಟ್ಟ ತಲೆಯ ಮೇಲೆ ಬಯ್ಗುಳದ ಪ್ರವಾಹವನ್ನು ಹರಿಸಿದಳು. ಅವನು ಎಲ್ಲವನ್ನೂ ಗಮನಕೊಟ್ಟು, ನಮ್ರನಾಗಿ ಆಲಿಸಿದ; ಹಲವಾರು ಸಲ ಅವಳಾಡಿದ ಯಾವುದೋ ಉತ್ಕೃಷ್ಟ ಮಾತನ್ನು ಮೆಚ್ಚಿದ, ಚಪ್ಪರಿಸಿದ; ಓಹೊ, ಆ ಮಾತು ಬಹಳ ಸುಂದರವಾದದ್ದಲ್ವಾ? ವಾಹ್, ಎಂಥ ಭಾಷೆ!"

ನಂತರ, ಅವಳ ಸಿಟ್ಟು ಇಳಿದಾಗ ಮತ್ತು ಗಟ್ಟಿಯಾಗಿ ಹಿಡಿದುಕೊಂಡಿದ್ದ ಅವನನ್ನು ಅವಳು ಬಿಟ್ಟಾಗ ಅವನು ಜೋರಾಗಿ ಹೇಳಿದ :

"ಆ ನಿಮ್ಮ ಸೇಬುಗಳಿಂದ ಆ ಕೆಲ್ಸಕ್ಕೆ ಬಾರದ ಹುಡುಗರ ದರಿದ್ರ ತಲೆಗಳನ್ನ ಹ್ಯಾಗೆ ಜಜ್ಜು ಬಡಿದೆ ಅನ್ನೋದನ್ನ ನೀವು ನೋಡಿದ್ರೆ ನೀವು ಈ ರೀತಿ ಬೇಜಾರು ಮಾಡಿಕೊಳ್ತಿರ್ಲಿಲ್ಲ. ನೀವದನ್ನ ನೋಡಿದ್ರೆ, ನನಗೆ, ಒಂದ್ಯಾಕೆ, ಎರಡು ಸಾಲ್ಡೊ ಕೊಡ್ತಿದ್ರಿ !"

ಆ ವಿಜೇತನ ವಿನಯಶೀಲ ಹೆಮ್ಮೆಯನ್ನು ಆ ಪೆದ್ದ ಹೆಂಗಸು ಅರ್ಥ ಮಾಡಿಕೊಳ್ಳಲಿಲ್ಲ. ಆಕೆ ಅವನನ್ನು ಗುದ್ದುವಂತೆ ಮುಷ್ಠಿ ತೋರಿಸಿದಳು.

ಪೆಪೆಯ ಅಕ್ಕ – ಅವನಿಗಿಂತ ದೊಡ್ಡವಳು ಆದರೆ ಅವನಷ್ಟು ಚುರುಕಾದವಳಲ್ಲ – ಒಬ್ಬ ಶ್ರೀಮಂತ ಅಮೇರಿಕನ್ನನ ಮನೆಯಲ್ಲಿ ಮನೆಗೆಲಸದವಳಾಗಿ ಕೆಲಸ ಮಾಡುತ್ತಿದ್ದಳು. ಅವಳ ಚಹರೆ ಏಕಾಕೀ ಬದಲಾಯಿತು. ತುಂಬ ನೀಟಾದಳು. ಆಕೆಯ ಗಲ್ಲಗಳು ಗುಲಾಬಿ ರಂಗಿಗೆ ತಿರುಗಿದವು, ಮತ್ತು ಆಕೆ ಆಗಸ್ಟ್ ತಿಂಗಳ ಪೇರು ಹಣ್ಣಿನಂತೆ ಕಳೆ ತುಂಬಿದಳು.

"ನೀನು ನಿಜವಾಗ್ಲೂ ಅಲ್ಲಿ ದಿನಾ ಊಟ ಮಾಡ್ತೀಯಾ?" ಎಂದು ಅವಳ ತಮ್ಮ ಅವಳನ್ನೊಮ್ಮೆ ಕೇಳಿದ.

"ಹೌದು, ಇಷ್ಟವಾಯ್ತು' ಅಂದರೆ ದಿನಕ್ಕೆ ಎರಡು ಸಲ ಅಥವ ಮೂರು ಸಲ" ಎಂದು ಅವಳು ಹೆಮ್ಮೆಯಿಂದ ಉತ್ತರ ಕೊಟ್ಟಳು.

"ಆದ್ರೆ ನಿನ್ನ ಹಲ್ಲು ಸವೆಯದಂತೆ ನೋಡ್ಕೋ", ಎಂದು ಪೆಪೆ ಉಪದೇಶಿಸಿದ.

ಸ್ವಲ್ಪ ಹೊತ್ತಿನ ಬಳಿಕ ಅವನು ಕೇಳಿದ : "ನಿಮ್ಮ ಆ ಯಜಮಾನ ತುಂಬ ಶ್ರೀಮಂತನಾ ?"

"ಓ, ಹೌದು, ರಾಜನಿಗಿಂತ್ಲೂ ಶ್ರೀಮಂತ ಅನ್ಸುತ್ತೆ !"

"ಏ, ಹೋಗೋ, ನೀನು ನನಗೆ ಟೋಪಿ ಹಾಕ್ಬಾರದಲ್ಲ ! ಅಂದ್ಹಾಗೆ, ಅವನ ಹತ್ರ ಎಷ್ಟು ಪ್ಯಾಂಟುಗಳಿದಾವೆ ?"

"ಏನೋಪ್ಪ, ಹೇಳೋದು ಕಷ್ಟ."

"ಒಂದು ಹತ್ತಿರಬಹುದಾ ?"

"ಇನ್ನೂ ಜಾಸ್ತಿ, ಬಹುಶಃ"

"ಹಾಗಾದ್ರೆ ಒಂದು ಕೆಲ್ಸ ಮಾಡು. ನನಗೊಂದು ಪ್ಯಾಂಟು ತಗೊಂಡು ಬಾ. ತುಂಬ ಉದ್ದಕ್ಕಿರೋದಲ್ಲ, ಚೆನ್ನಾಗಿ ಬೆಚ್ಚಗಿಡೋವಂಥದ್ದು" ಎಂದ ಪೆಪೆ.

"ಯಾಕೆ"?

"ಯಾಕೆ ಅಂದ್ರೆ? ನನ್ನ ಪ್ಯಾಂಟು ನೋಡು, ಹ್ಯಾಗಿದೆ!"

ಹೌದು, ನಿಜವಾಗಿಯೂ ನೋಡುವಂಥದ್ದೇನೂ ಇರಲಿಲ್ಲ ಅದರಲ್ಲಿ, ಏಕೆಂದರೆ, ಪೆಪೆಯ ಪ್ಯಾಂಟಿನಲ್ಲಿ ಹೆಚ್ಚು ಕಡಿಮೆ ಏನೂ ಉಳಿದಿದ್ದಿಲ್ಲ.

"ಆಗ್ಲಿ ಎಂದಳು ಅವನ ಅಕ್ಕ. 'ನಿಜ, ನಿನಗೆ ಖಂಡಿತ ಬಟ್ಟೆಗಳು ಬೇಕು! ಆದ್ರೆ, ನಾವು ಕಳ್ತನ ಮಾಡಿದ್ವಿ, ಅಂತ ಅವನು ಅಂದ್ಕೊಳಲ್ವಾ?"

"ಜನ ನಮಗಿಂತ ಹೆಚ್ಚು ಪೆದ್ದರಿರ್ತಾರೆ ಅಂತ ತಿಳ್ಕೋಬೇಡ!" ಎಂದು ಪೆಪೆ ಅವಳಿಗೆ ದೃಢಪಡಿಸಿದ. "ಬಹಳಷ್ಟು ಇರೋ ಒಬ್ಬ ಮನುಷ್ಯನಿಂದ ನೀನು ಏನಾದರೂ ಒಂದು ಚೂರು ತಗೊಂಡರೆ, ಅದು ಕಳ್ಳತನ ಅಲ್ಲ, ಹಂಚ್ಕೊಳ್ಳೋದು ಅಂತ ಅಷ್ಟೆ."

"ನೀನು ಹುಚ್ಚು ಹುಚ್ಚಾಗಿ ಮಾತಾಡ್ತಿದ್ದೀಯ" ಎಂದು ಅವನ ಅಕ್ಕ ಹೇಳಿದಳು. ಆದರೆ ಪೆಪೆ ಅವಳ ಅಳುಕನ್ನು ಹೋಗಲಾಡಿಸಿದ. ಅವಳು ಪೆಪೆಗೆ ತುಂಬ ದೊಡ್ಡದಾಗಿದ್ದ ಒಂದು ಪ್ಯಾಂಟನ್ನು ತಂದು ಅಡುಗೆ ಮನೆಗೆ ಬಂದಾಗ ಅದಕ್ಕೆ ಪರಿಹಾರ ಏನು ಅಂತ ಅವನಿಗೆ ತಕ್ಷಣ ಹೊಳೆಯಿತು.

"ಎಲ್ಲಿ, ಒಂದು ಚಾಕು ಕೊಡು!" ಎಂದ.

ತಕ್ಷಣ ಇಬ್ಬರೂ ಸೇರಿ ಆ ಅಮೇರಿಕನ್ನನ ಪ್ಯಾಂಟನ್ನು ಪೆಪೆಗೆ ಅನುಕೂಲವಾಗುವಂಥ ಒಂದು ಉಡುಪನ್ನಾಗಿ ಪರಿವರ್ತಿಸಿದರು. ಸಿದ್ಧವಾಯಿತು ಒಂದು ದೊಗಳೆ ಆದರೆ ಅನಾನುಕೂಲವಲ್ಲದ ಚೀಲ: ಭುಜಗಳಿಗೆ ದಾರದಿಂದ ಕೂಡಿಸಿದ್ದು ಹಾಗೂ ಕುತ್ತಿಗೆಗೆ ಸುತ್ತಬಹುದಾದದ್ದು, ಮತ್ತು ಪ್ಯಾಂಟಿನ ಜೇಬುಗಳನ್ನು ಅಂಗಿಯ ತೋಳುಗಳಂತೆ ಉಪಯೋಗಿಸಬಹುದಾದದ್ದು.

ಆ ಪ್ಯಾಂಟಿನ ಒಡೆಯನ ಹೆಂಡತಿಯು ಅವರ ಈ ಕೆಲಸದಲ್ಲಿ ಮಧ್ಯೆ ಬಾರದೇ ಹೋಗಿದ್ದಿದ್ದರೆ ಅವರು ಅದನ್ನು ಇನ್ನೂ ಉತ್ತಮ ಹಾಗೂ ಅನುಕೂಲವಾದ ಉಡುಪನ್ನಾಗಿ ಮಾಡಬಹುದಾಗಿತ್ತು. ಆಕೆ ಅಡುಗೆ ಮನೆಗೆ ಬಂದ ಹಲವಾರು ಭಾಷೆಗಳಲ್ಲಿ ಉದ್ದುದ್ದಕ್ಕೆ ಅಸಹ್ಯವಾದ ಮಾತುಗಳಲ್ಲಿ ಬಯ್ಯಲಿಕ್ಕೆ ಶುರು ಮಾಡಿದಳು. ಆ ಮಾತುಗಳು ಎಷ್ಟು ಅಸಹ್ಯವಾಗಿದ್ದವೋ ಅಷ್ಟೇ ಕೆಟ್ಟದಾಗಿ ಉಚ್ಚರಿಸಲ್ಪಟ್ಟಿದ್ದವು – ಅಮೇರಿಕನ್ನರಿಗೆ ರೂಢಿಯಾದ ರೀತಿಯಲ್ಲಿ.

ಆ ವಾಗ್ಸರಿಯನ್ನು ಪೆಪೆಗೆ ನಿಲ್ಲಿಸಕ್ಕಾಗಲಿಲ್ಲ. ಅವನು ಮುಖ ಗಂಟು ಹಾಕಿಕೊಂಡು, ಎದೆಗೆ ಕೈ ಒತ್ತಿಕೊಂಡು, ಹತಾಶೆಯಿಂದ ತಲೆಯನ್ನು ಕೈಯಿಂದ ಗಟ್ಟಿಯಾಗಿ ಹಿಡಿದುಕೊಂಡು, ದೊಡ್ಡದಾಗಿ ನಿಟ್ಟುಸಿರುಬಿಟ್ಟ. ಆದರೂ ಆಕೆ ಶಾಂತಳಾಗಲಿಲ್ಲ – ಆಕೆಯ ಗಂಡ ಅಲ್ಲಿಗೆ ಬರುವ ತನಕವೂ.

"ಏನು ನಡೀತಾ ಇದೆ?" ಎಂದ ಅವನು.

ಪೆಪೆ ಹೇಳಿದ : ಸ್ವಾಮಿ, ನಿಮ್ಮ ಹೆಂಡತಿಯೋರು ಎಬ್ಬಿಸ್ರೋ ಗಲಾಟೆ ನೋಡಿ ನನಗೆ ಆಶ್ಚರ್ಯವಾಗಿದೆ. ನಿಜ ಹೇಳಬೇಕೆಂದರೆ, ನಿಮಗೋಸ್ಕರ ನನಗೆ ತುಂಬ ಬೇಜಾರಾಗಿದೆ, ನನಗೆ ಅನ್ನಿಸೋದೇನೆಂದರೆ ನಾವು ನಿಮ್ಮ ಪ್ಯಾಂಟನ್ನ ಹಾಳು ಮಾಡಿದೇವೆ ಅಂತ ಅವರು ತಿಳ್ಕೊಂಡಿದಾರೆ, ಆದ್ರೆ ನಿಮಗೆ ನಿಜ ಹೇಳಬೇಕೆಂದರೆ, ಅದು ನನಗೆ ಸರಿಯಾಗುತ್ತೆ! ನಾನು ನಿಮ್ಮ ಹತ್ತಿರ ಉಳಿದಿರೋ ಒಂದೇ ಒಂದು ಪ್ಯಾಂಟನ್ನ ತಗೊಂಡುಬಿಟ್ಟಿದ್ದೇನೆ, ಮತ್ತೆ ನಿಮಗೆ ಇನ್ನೊಂದು ತಗೋಳಾಕಾಗಲ್ಲ ಅನ್ನೋಹಾಗೆ ಅವರು ಮಾತಾಡ್ತಾರೆ...."

ಆ ಅಮೇರಿಕನ್ನನು ಶಾಂತ ರೀತಿಯಿಂದ ಪೆಪೆಯ ಮಾತನ್ನು ಕೇಳಿ ಹೀಗೆಂದ:

"ಅಂದ್ಹಾಗೆ, ಏನಪ್ಪ ನಾನು ಪೋಲೀಸಿನವರಿಗೆ ಕರೆಸಬಹುದು ಅನ್ನಿಸುತ್ತೆ"

ಹೌದಾ?" ಎಂದ ಆಶ್ಚರ್ಯದಿಂದ ಕೇಳಿದ ಪೆಪೆ. ಯಾಕೆ?"

"ನಿನಗೆ ಜೈಲಿಗೆ ಕಳಿಸ್ಲಿಕ್ಕೆ"

ಈ ಮಾತು ಕೇಳಿ ಪೆಪೆಯ ಮನಸ್ಸಿಗೆ ತುಂಬ ನೋವಾಯಿತು. ನಿಜವಾಗಿಯೂ ಅವನು ಅಳುವ ಸ್ಥಿತಿಯಲ್ಲಿದ್ದ. ಆದರೂ ಕಣ್ಣೀರು ತಡೆದುಕೊಂಡು ತುಂಬ ಗಂಭೀರವಾಗಿ ಹೇಳಿದ:

ಸ್ವಾಮಿ, ಜನರನ್ನು ಜೈಲಿಗೆ ಕಳಿಸೋದು ನಿಮಗೆ ಸಂತೊಷ ಕೊಡೋದಾದ್ರೆ, ಅದು ನಿಮಗೆ ಬಿಟ್ಟ ವಿಷಯ ! ಆದ್ರೆ ನನ್ನ ಹತ್ತಿರ ಬಹಳಷ್ಟು ಪ್ಯಾಂಟುಗಳಿದ್ದು ನಿಮ್ಮ ಹತ್ತಿರ ಒಂದೂ ಇರದೆ ಹೋಗಿದ್ರೆ, ನಾನು ಹಾಗ್ಯಾಡ್ತಾ ಇರ್ಲಿಲ್ಲ ! ನಾನು ನಿಮಗೆ ಎರಡು ಪ್ಯಾಂಟುಗಳನ್ನು ಕೊಡ್ತಿದ್ದೆ, ಮೂರು ಬೇಕಾದರೂ ಕೊಡ್ತಿದ್ದೆ, ಒಂದೇ ಸಲಕ್ಕೆ ಮೂರನ್ನೂ ಹಾಕ್ಕೊಳ್ಳಾಕ್ಕಾಗಲ್ಲದಿದ್ರೂ ! ಅದೂ ಸೆಖೆ ಇದ್ದಾಗ...."

ಆ ಅಮೇರಿಕನ್ನನು ಜೋರಾಗಿ ನಗಲು ಶುರುಮಾಡಿದನು. ಹೌದು, ಶ್ರೀಮಂತರೂ ಕೂಡ ಕೆಲವೊಮ್ಮೆ ಹಾಸ್ಯವನ್ನು ಕಾಣಬಲ್ಲರು. ಆಮೇಲೆ ಆತ ಪೆಪೆಗೆ ಸ್ವಲ್ಪ ಚಾಕಲೇಟುಗಳನ್ನು ಹಾಗೂ ಒಂದು ಪ್ರ್ಯಾಂಕನ್ನು ಕೊಟ್ಟ. ಆ ನಾಣ್ಯವನ್ನು ಪೆಪೆ ಹಲ್ಲಿನ ಮಧ್ಯೆ ಇಟ್ಟುಕೊಂಡು ಆತನಿಗೆ ಧನ್ಯವಾದಗಳನ್ನು ಹೇಳಿದ:

"ತುಂಬ ಉಪಕಾರವಾಯಿತು, ಸ್ವಾಮಿ! ಅಂದ್ಹಾಗೆ, ಈ ನಾಣ್ಯ ಸಾಚ ತಾನೆ ?"

ಆದರೆ ಪೆಪೆ ಯಾವಾಗ ಅತ್ಯುತ್ತಮನಾಗಿರುತ್ತಾನೆಂದರೆ, ಎಲ್ಲೊ ಕಲ್ಲು ಬಂಡೆಗಳ ನಡುವೆ ಒಬ್ಬನೆ ನಿಂತುಕೊಂಡು – ಅವುಗಳ ಬಿರುಕುಗಳನ್ನು, ಯೋಚನಾ ಮಗ್ನನಾಗಿ, ಕಲ್ಲುಬಂಡೆಗಳ ಗೂಢ ಇತಿಹಾಸವನ್ನು ಓದುತ್ತಿದ್ದಾನೇನೋ ಎನ್ನುವ ರೀತಿಯಲ್ಲಿ ಪರೀಕ್ಷಿಸುವಾಗ. ಅಂಥ ಸಮಯದಲ್ಲಿ ಅವನ ಉಜ್ವಲ ಕಣ್ಣಗಳು ಆಶ್ಚರ್ಯದಿಂದ ಅಗಲವಾಗುತ್ತದೆ, ಪೊರೆ ಕಟ್ಟುತ್ತವೆ; ಅವನ ತೆಳ್ಳನೆಯ ಕೈಗಳು ಬೆನ್ನ ಹಿಂದೆ ಹೆಣೆದುಕೊಳ್ಳುತ್ತವೆ, ಮತ್ತು ಸ್ವಲ್ಪ ಬಾಗಿರುವಂಥ ಅವನ ತಲೆ ಹೂವಿನಂತೆ ಗಾಳಿಗೆ ಆ ಕಡೆ

ಈ ಕಡೆ ತೊನೆದಾಡುತ್ತವೆ. ನಂತರ ಅವನು ಮೆಲ್ಲಗೆ ಯಾವುದೊ ಒಂದು ಹಾಡನ್ನು ಗನುಗುನಿಸುತ್ತಾನೆ. ಹೌದು, ಅವನು ಯಾವಾಗಲೂ ಹಾಡುತ್ತಿರುತ್ತಾನೆ.

ಆಮೇಲೆ ದೂರದಿಂದ, ದೊಡ್ಡ ತಮಟೆಯ ನಾದದಂತೆ ಸಮುದ್ರದ ಮಂದ ನಿಟ್ಟುಸಿರು ಕೇಳಿಬರುತ್ತೆ. ಹೂಗಳ ಮೇಲೆ ಬಣ್ಣದ ಚಿಟ್ಟೆಗಳು ಒಂದರ ಹಿಂದೆ ಒಂದು ಹಾರುತ್ತವೆ. ಪೆಪೆ ತಲೆಯತ್ತಿ ಅವನ್ನು ಹಿಂಬಾಲಿಸುತ್ತಾನೆ, ಬಿಸಿಲಿಗೆ ಅವನ ಕಣ್ಣುಗಳು ಪಿಳಿಪಿಳಿ ಅನ್ನುತ್ತವೆ, ಅಸೂಯೆ ಹಾಗೂ ದುಃಖದ ಛಾಯೆಯಿಂದ ತುಂಬಿದ ಅವನ ತುಟಿಗಳು ಈ ಜಗತ್ತಿನಲ್ಲಿರುವ ಎಲ್ಲರಿಗಿಂತ ಶ್ರೇಷ್ಠ ವ್ಯಕ್ತಿಯ ಮುಗುಳ್ನಗೆಯನ್ನು ಸೂಸುತ್ತವೆ.

"ಶ್!" ಎಂದು ಅವನು ಕೂಗುತ್ತಾನೆ – ಪಚ್ಚೆ ಬಣ್ಣದ ಹಲ್ಲಿಯೊಂದನ್ನು ಕೈ ತಟ್ಟಿ ಹೆದರಿಸುತ್ತ.

ಆಮೇಲೆ, ಸಮುದ್ರವು ಕನ್ನಡಿಯಂತೆ ಸೌಮ್ಯವಿದ್ದಾಗ, ಕಲ್ಲುಬಂಡೆಗಳು ಅಲೆಗಳ ನೊರೆಯಿಂದ ನಿರಲಂಕೃತವಾದಾಗ, ಪೆಪೆ ಕಲ್ಲಿನ ಮೇಲೆ ಕುಳಿತು ತನ್ನ ಹೊಳೆಯುವ ಕಣ್ಣುಗಳಿಂದ ಪಾರದರ್ಶಕ ನೀರನ್ನು ನೋಡುತ್ತಾನೆ – ಎಲ್ಲಿ ಕೆಂಪನೆಯ ಕಳೆಯ ಮಧ್ಯೆ ಮೀನುಗಳು ಮೆಲ್ಲಗೆ ಜಾರುತ್ತಿರುತ್ತವೋ, ಸೀಗಡಿಗಳು ಹಿಂದೆ ಮುಂದೆ ಥಟ್ಟನೆ ಚಲಿಸುತ್ತಿರುತ್ತವೆಯೋ, ಮತ್ತು ಏಡಿ ಅಕ್ಕಪಕ್ಕದಲ್ಲಿ ಮೆಲ್ಲಗೆ ತೆವಳಿಕೊಮಡು ಹೋಗುತ್ತಿರುತ್ತದೋ ಅಲ್ಲಿ, ಆಮೇಲೆ ಆ ನೀರವತೆಯಲ್ಲಿ ಆ ಹುಡುಗನ ಸ್ಪಷ್ಟ ದನಿಯು ನೀಲ ನೀರಿನ ಮೇಲೆ ಮೆಲ್ಲಗೆ ಹರಿಯುತ್ತದೆ.

"ಸಮುದ್ರ, ಓ, ಸಮುದ್ರ..."

ದೊಡ್ಡವರು ಪೆಪೆಯನ್ನು ನೋಡಿ ಅಸಮಾಧಾನವನ್ನು ವ್ಯಕ್ತಪಡಿಸುವ ರೀತಿಯಲ್ಲಿ ತಲೆ ಅಲ್ಲಾಡಿಸುತ್ತ ಹೇಳುತ್ತಾರೆ :

"ಆ ಹುಡುಗ ಅರಾಜಕತಾವಾದಿಯಾಗ್ತಾನೆ!"

ಆದರೆ ಅವರಿಗಿಂತ ಸ್ನೇಹಭಾವದ ಹಾಗೂ ಹೆಚ್ಚು ವಿವೇಕವುಳ್ಳ ಜನ ಬೇರೆಯದೇ ಅಭಿಪ್ರಾಯ ಹೊಂದಿದ್ದಾರೆ:

"ಇನ್ನು ಮೇಲೆ ಪೆಪೆ ನಮ್ಮ ಕವಿ..."

ಆಮೇಲೆ ಅಲಮಾರು ತಯಾರಿಸುವ ಪಾಸ್ಕಾಲಿನೊ – ಬೆಳ್ಳಿಯಲ್ಲಿ ಎರಕ ಹೊಯ್ದಂಥ ತಲೆಯ ಮುದುಕ – ಪುರಾತನ ರೋಮನ್ ನಾಣ್ಯಗಳ ಮೇಲೆ ಕೆತ್ತಿರುವಂಥ ಮುಖವುಳ್ಳ ಆ ಮುದುಕ ಪ್ರಜ್ಞಾವಂತ ಹಾಗೂ ಎಲ್ಲರಿಂದಲೂ ಗೌರವಿಸಲ್ಪಡುವ ಪಾಸ್ಕಾಲಿನೊ – ತನ್ನದೇ ಆದ ಅಭಿಪ್ರಾಯ ಹೊಂದಿದ್ದಾನೆ:

"ನಮ್ಮ ಮಕ್ಕಳು ನಮಗಿಂತ ಹೆಚ್ಚು ಉತ್ತಮರಾಗ್ತಾರೆ. ಆಮೇಲೆ, ಅವರ ಬದುಕು ಕೂಡ ಉತ್ತಮವಾಗಿರುತ್ತೆ!"

ಬಹಳಷ್ಟು ಜನ ಅವನ ಮಾತನ್ನು ನಂಬುತ್ತಾರೆ.

ಟಿಪ್ಪಣಿ:

1. Soldo = ಇಟಲಿ ದೇಶದ ಒಂದು ತಾಮ್ರದ ನಾಣ್ಯ
2. Franc = ಫ್ರೆಂಚರ ಒಂದು ನಾಣ್ಯ

# ಓದು ಪತ್ಯ : ಪ್ರಿನ್ಸಿಪಾಲ್ ಬಾಚಿ ತಬ್ಬಿಕೊಂಡರು

**– ಮಣಗಾರ (ತುಂಬಾಡಿ ರಾಮಯ್ಯರವರ ಆತ್ಮಕಥೆ)**

ನಾನು ಕೊರಟಗೆರೆಗೆ ಹೈಸ್ಕೂಲು ಸೇರಿದ್ದಾಗಿನಿಂದ ಪಿಯುಸಿವರೆಗೆ ಒಟ್ಟು ಆರು ವರ್ಷ ನಮ್ಮೂರಿನಿಂದ ಕೊರಟಗೆರೆಗೆ ಕಾಲ್ನಡಿಗೆಯಲ್ಲಿ ಓಡಾಡಿ– ಓಡಾಡಿ ನನ್ನ ಕಾಲು ಸವೆದಿದ್ದವೊ ಅಥವಾ ದಾರಿಯೇ ಸವೆದಿದ್ದವೊ ಎಂಬಂತಾಗಿತ್ತು. ನನ್ನ ಮೊದಲ ವರ್ಷದ ಪಿಯುಸಿ ಮುಗಿಯಲು ಇನ್ನು ಮೂರು ತಿಂಗಳು ಉಳಿದಿತ್ತು. ಕೊರಟಗೆರೆಯಲ್ಲಿ ಐಲುವ್ಯಕ್ತಿಯೊಬ್ಬರಿದ್ದರು. ಕೊಳಕಾದ ಖಾದಿ ತೊಟ್ಟು, ಕೈಯಲ್ಲಿ ಸದಾ ಒಂದು ಡೈರಿ ಮತ್ತು ಮೂರು ದಿನಗಳಷ್ಟು ಹಳೆಯದಾದ ಪತ್ರಿಕೆಯೊಂದನ್ನು ಹಿಡಿದು ಪುಡಾರಿಯೊಬ್ಬನ ಗತ್ತಿನಲ್ಲಿ ಓಡಾಡುತ್ತಿದ್ದರು. ಅದಾವ ಗ್ರಹಚಾರವೋ ಏನೋ ಆ ಐಲುವ್ಯಕ್ತಿ ವಕ್ಕರಿಸಿದರು. ಪಿಯುಸಿ ಓದುತ್ತಿರುವ ಎಸ್. ಸಿ. ಮತ್ತು ಎಸ್. ಓ. ವಿದ್ಯಾರ್ಥಿಗಳಿಗೆ ಕೊರಟಗೆರೆಯಲ್ಲಿ ಹಾಸ್ಟಲ್ ಆರಂಭಿಸುತ್ತಿರುವುದಾಗಿಯೂ, ನಿಮಗೆಲ್ಲಾ ಸರ್ಕಾರದಿಂದ ಸವಲತ್ತು... ಈ ಸವಲತ್ತುಗಳನೆಲ್ಲಾ ಕೊಡಿಸಿಕೊಡುತ್ತೇನೆಂದೂ; ಇಲ್ಲಸಲ್ಲದ ಭೂಕಾಳಿಯನ್ನೆಲ್ಲಾ ನಮ್ಮ ತಲೆಗೆ ತುಂಬಿದರು. ನಮ್ಮಲ್ಲಿ ಪಿಯುಸಿ ಓದುತ್ತಿದ್ದವರೆಲ್ಲಾ ಹೆಚ್ಚು ಕಡಿಮೆ ಹಳ್ಳಿಗಾಡಿನಿಂದ ಬಂದವರು. ನಮಗೂ ಪ್ರತಿದಿವಸ ನಮ್ಮ ಹಳ್ಳಿಗಳಿಂದ ಕೊರಟಗೆರಗೆ ನಡೆದಾಡಿ ಬೇಸರವಾಗಿತ್ತು. ಆದ್ದರಿಂದ ಆ ಪುಢಾರಿಯ ಮಾತನ್ನು ನಂಬಿ ಹಾಸ್ಟೆಲ್‌ಗೆ ಸೇರಲು ಒಪ್ಪಿಕೊಂಡೆವು. ಆಗ ನಮ್ಮ ಕಾಲೇಜಿನಲ್ಲಿ ನನ್ನನ್ನೂ ಒಳಗೊಂಡು ಹತ್ತು ಜನ ಎಸ್.ಸಿ. ಎಸ್.ಟಿ. ವಿದ್ಯಾರ್ಥಿಗಳಿದ್ದರು. ಮಧುಗಿರಿ ರಸ್ತೆಯಲ್ಲಿ ಸರ್ಕಾರಿ ನೌಕರರಿಗಾಗಿ ಕಟ್ಟಿದ್ದ ಕ್ಯಾಂಟಿನ್ ಕಟ್ಟಡವೊಂದು ಖಾಲಿ ಇತ್ತು. ಪುಢಾರಿಯ ಕಣ್ಣು ಆ ಕಟ್ಟಡದ ಮೇಲೆ ಬಿದ್ದಿದ್ದೇ ತಡ, ಅವನ ಕೈಚಳಕದಿಂದ 'ಸುಜ್ಞಾನ ವಿದ್ಯಾಸಂಸ್ಥೆ' ಯೆಂಬ ಬೋರ್ಡ್ ರಾತೋರಾತ್ರಿ ಆ ಕಟ್ಟಡಕ್ಕೆ ನೇತುಬಿದ್ದು ಎಸ್.ಎಸಿ–ಎಸ್.ಟಿ ಹಾಸ್ಟಲ್ ಆಗಿ ಪರಿವರ್ತನೆಗೊಂಡಿತು. ಇನ್ನುಳಿದಿದ್ದ ನಮ್ಮ ಕೊನೆಯ ಮೂರು ತಿಂಗಳ ಓದಿಗಾಗಿ ತುರಾತುರಿಯಲ್ಲಿ ಹಾಸ್ಟಲ್ ಆರಂಭವಾಯಿತು. ಆ ಪುಢಾರಿಯೇ ಹಾಸ್ಟಲ್‌ಗೆ ವಾರ್ಡನ್ – ಸೆಕ್ರಟರಿ ಆದರು. ನಮ್ಮ ಹೋರಾಟದ ದಿನಗಳು ಇಲ್ಲಿಂದಲೇ ಆರಂಭವಾದುವು ಎನ್ನಬಹುದು.

ಹಾಸ್ಟಲ್ ಪ್ರಾರಂಭೋತ್ಸವಕ್ಕೆ ಆಗ ಸಮಾಜಕಲ್ಯಾಣ ಸಚಿವರಾಗಿದ್ದ ಎನ್. ರಾಚಯ್ಯನವರು ಬಂದಿದ್ದರು. ಆ ಪುಡಾರಿ ಇದೇ ಸಂದರ್ಭದಲ್ಲಿ ಶ್ರೀ ರಾಚಯ್ಯನವರಿಗೆ 'ಹರಿಜನಾಂಗದ ಪುರುಷ ಸಿಂಹ' ಎಂಬ ಬಿರುದನ್ನು ಸ್ವಯಂ ದಯಪಾಲಿಸಿ, ಸಚಿವರಿಂದ 'ಮರಿಸಿಂಹ' ಎಂಬ ಬಿರುದನ್ನು ಅದೇ ಸಂದರ್ಭದಲ್ಲಿ ತಾನೂ ಪಡೆದುಬಿಟ್ಟ! ಆ ವರ್ಷ ನಮಗೆ ಪಬ್ಲಿಕ್ ಪರೀಕ್ಷೆ ಇದ್ದುದ್ದರಿಂದ, ಇನ್ನು ಉಳಿದಿದ್ದ ಮೂರು ತಿಂಗಳಲ್ಲಿ ಹೇಗೋ

ಎರಡು ಹೊತ್ತು ಹಾಸ್ಟಲ್‌ನಲ್ಲಿ ಊಟ ಮಾಡಿಕೊಂಡು, ಚೆನ್ನಾಗಿ ಓದಿಕೊಂಡು ಸಿಕ್ಕ ಸದವಕಾಶವನ್ನು ಸದುಪಯೋಗಪಡಿಸಿಕೊಂಡೆವು.

ಮೊದಲ ಪಿಯುಸಿಯನ್ನು ಪಾಸುಮಾಡಿ ಎರಡನೆಯ ಪಿ.ಯು.ಸಿ.ಗೆ ಸೇರಿದೆ. ಕಳೆದ ವರ್ಷದ ಕೊನೆಯ ಮೂರು ತಿಂಗಳಿನಲ್ಲಿ ನಮಗೆ ಸಿಕ್ಕಿದಂತೆ, ಈ ವರ್ಷವೂ ಹಾಸ್ಟೆಲ್‌ನಲ್ಲಿ ನಮಗೆಲ್ಲಾ ಹೊಟ್ಟೆತುಂಬಾ ಊಟ ಸಿಗುತ್ತದೆ ಎಂಬ ಆಶೆ ನಮ್ಮೆಲ್ಲರಲ್ಲಿತ್ತು. ಆದರೆ ಈ ಸಲ ತಾಲ್ಲೂಕು ಆಫೀಸಿನವರು ತಕರಾರು ತೆಗೆದು ಹಾಸ್ಟಲ್ ನಡೆಯುತ್ತಿದ್ದ ತಮ್ಮ ಕ್ಯಾಂಟಿನ್ ಕಟ್ಟಡವನ್ನು ಖಾಲಿ ಮಾಡಿಸಿದರು. ಇದೇ ಕ್ಯಾಂಟಿನ್ನಿನ ಹಿಂಭಾಗದಲ್ಲಿದ್ದ ಜನತಾ ಮನೆಯೊಂದರಲ್ಲಿ ಹಾಸ್ಟಲ್ ಮತ್ತೆ ಪ್ರಾರಂಭವಾಯಿತು. ಆ ಜನತಾ ಮನೆಯಲ್ಲಿ ಒಂದು ಚಿಕ್ಕ ಅಡಿಗೆಮನೆ ಮತ್ತು ಒಂದು ರೂಮು ಮಾತ್ರ ಇತ್ತು. ಅದರಲ್ಲಿ ನಾವು ಹತ್ತು ಜನ ಹುಡುಗರು ನಿರಾಳವಾಗಿದ್ದರೂ ಇಕ್ಕಟ್ಟಾಗುತ್ತಿತ್ತು. ಆದ್ದರಿಂದ ನಮಗೆಲ್ಲಾ ಸರ್ಕಾರಿ ಆಸ್ಪತ್ರೆ ಪಕ್ಕದಲ್ಲಿದ್ದ ಒಂದು ಬಾಡಿಗೆ ರೂಮನ್ನು ಮಾಡಿಕೊಟ್ಟಿದ್ದರು. ಹೀಗಾಗಿ ನಮಗೆ ಊಟ ಒಂದು ಕಡೆಯಾದರೆ, ಮಲಗುವುದು ಇನ್ನೊಂದು ಕಡೆಯಾಗಿತ್ತು.

ಈ ನಡುವೆ ನಾವಂದುಕೊಂಡಿದ್ದಕ್ಕೆ ವಿರುದ್ಧವಾಗಿ ಹಾಸ್ಟಲ್ ಹದಗೆಡಲು ಶುರುವಾಯಿತು. ನಮ್ಮ ಹಾಸ್ಟಲ್‌ನ ವಾರ್ಡನ್ ಆಗಿದ್ದ ಐಲುಮಢಾರಿ ಸದಾ ತುಮಕೂರು ಬೆಂಗಳೂರಿಗೆ ತಿರುಗಾಡುವುದನ್ನೆ ತನ್ನ ರಾಜಕಾರಣವನ್ನಾಗಿ ಮಾಡಿಕೊಂಡಿದ್ದ. ಇದರಿಂದಾಗಿ ನಮ್ಮ ತೊಂದರೆಗಳನ್ನು ಕೇಳುವವರೆ ಇಲ್ಲವಾಗಿತ್ತು. ಹಾಸ್ಟಲ್‌ನಲ್ಲಿ ತೂಕದ ಊಟ ಕೊಡಲು ಪ್ರಾರಂಭಿಸಿದರು. ನಾವೆಲ್ಲ ಅಡಿಗೆಯವನನ್ನು ಕೇಳಿದರೆ 'ನಾನೆಲ್ಲಿಂದ ತರಲಿ, ಹೀಗೇ ಕೊಡಬೇಕು ಅಂತ ವಾರ್ಡ್‌ನ ಹೇಳಿದ್ದಾರೆ' ಎಂದು ತನ್ನ ಅಸಹಾಯಕತೆಯನ್ನು ವ್ಯಕ್ತಪಡಿಸುತ್ತಿದ್ದ. ಗದರಿ ಕೇಳೋಣವೆಂದರೆ, ಜವಾಬ್ದಾರಿ ಹೊತ್ತವರು ಅಲ್ಲಿ ಯಾರೂ ಇರಲಿಲ್ಲ! ಕೇಳಬೇಕಾಗಿದ್ದ ವ್ಯಕ್ತಿ ನಮ್ಮ ಕೈಗೆ ಸಿಗುತ್ತಿರಲಿಲ್ಲ. ಹಾಸ್ಟಲ್‌ನ ಉಸ್ತುವಾರಿ ನೋಡಿಕೊಳ್ಳಲು ನೇಮಿಸಿದ್ದ ವ್ಯಕ್ತಿ, ಹಾಸ್ಟಲ್ ಹಿಂಭಾಗದಲ್ಲಿದ್ದ ಬಾವಿಗೆ ನೀರಿಗೆಂದು ಬರುತ್ತಿದ್ದ ಹೆಣ್ಣಮಕ್ಕಳನ್ನು ಚುಡಾಯಿಸಿಕೊಂಡು ನಿಲ್ಲುವ ಚಾಳಿಗೆಬಿದ್ದು, ಹಾಸ್ಟಲ್‌ನ್ನು ಮರೆತಿದ್ದ. ಇದೆಲ್ಲಕ್ಕಿಂತ ನಮಗೆ ಹೆಚ್ಚು ಸಂಕಟವಾಗಿದ್ದು, ಆಡಳಿತದಲ್ಲಿ ದಕ್ಷರೂ, ಪ್ರಮಾಣಿಕರೂ ಆಗಿದ್ದ ನಮ್ಮ ಕಾಲೇಜಿನ ಪ್ರಿನ್ಸಿಪಾಲರು, ಹಾಸ್ಟಲ್‌ನ ಅವ್ಯವಸ್ಥೆಯ ವಿಷಯದಲ್ಲಿ ಮಾತ್ರ ಅದ್ಯಾಕೊ ಅನ್ಯಾಯದ ಪರವೇ ಇದ್ದುದನ್ನು ಕಂಡು ನಮಗೆ ಆಶ್ಚರ್ಯವಾಗಿತ್ತು.

ಅದೇ ವೇಳೆಗೆ ಪಿಯುಸಿ ಫೇಲಾಗಿದ್ದ ಸಿದ್ಧರಾಮೇಶ ಎಂಬ ಹಿರಿಯ ವಿದ್ಯಾರ್ಥಿಯೊಬ್ಬರು, ಈ ಅನ್ಯಾಯವನ್ನು ಪ್ರತಿಭಟನೆ ಮೂಲಕ ಸರಿಪಡಿಸಬೇಕೆಂದು ನಮಗೆ ಆಗಾಗ ಬುದ್ಧಿಹೇಳುತ್ತಿದ್ದರು. ಹಳ್ಳಿಯಿಂದ ಬಂದ ನಮಗೆ ಪೇಟೆಯವರನ್ನು ಕಂಡರೆ ಏನೋ ಭಯ! ಆದರೂ ನಿಧಾನಕ್ಕೆ ಸಿದ್ದರಾಮೇಶ ಹೇಳುತ್ತಿದ್ದ ಮಾತು ನಿಜ ಅನ್ನಿಸತೊಡಗಿತು. ಅದರಿಂದಾಗಿ ಹಾಸ್ಟಲ್‌ನಲ್ಲಿ ನಮಗಾಗುತ್ತಿದ್ದ ಅನ್ಯಾಯವನ್ನು ನಾವೆ ತಡೆಯಬೇಕೆಂದು,

ಗಟ್ಟಿಯಾಗಿ ಕೇಳಲು ಪ್ರಾರಂಭಿಸಿದೆವು. ಹಾಸ್ಟಲ್‌ನಲ್ಲಿದ್ದ ಹತ್ತು ವಿದ್ಯಾರ್ಥಿಗಳ ಪೈಕಿ, ಆರುಜನ; ಹಾಸ್ಟಲ್ ನಡೆದರೇನು ಬಿಟ್ಟರೇನು? ನಾವು ಓದಿದರೇನು, ಬಿಟ್ಟರೇನು? ಎಂಬ ಮನೋಭಾವದವರು. ಹಾಸ್ಟಲ್‌ನಲ್ಲಿ ನಡೆಯುತ್ತಿದ್ದ ಅನ್ಯಾಯಕ್ಕೂ ನಮಗೂ ಸಂಬಂಧವಿಲ್ಲವೆನ್ನುವಂತೆ ವರ್ತಿಸುತ್ತಿದ್ದರು. ಇನ್ನುಳಿದ ನಾಲ್ವರಲ್ಲಿ ಸದಾ ನನ್ನ ನೆರಳಿನಂತಿರುತ್ತಿದ್ದವರು ನಮ್ಮೂರಿನ ಹನುಮಂತರಾಯ, ಜಟ್ಟಿ ಅಗ್ರಹಾರದ ರಾಮಚಂದ್ರ, ತೊಗರಿಘಟ್ಟದ ಭದ್ರಯ್ಯ, ಹನುಮಂತರಾಯ ನಾವು ಹೇಳಿದ್ದಕ್ಕೆಲ್ಲಾ ತಲೆಗುನುಕು ಹಾಕುತ್ತಿದ್ದ. ಭದ್ರಯ್ಯ ಮಹಾಮುಂಗೋಪಿ, ಮಾತಾಡಲು ತಡವರಿಸುತ್ತಿದ್ದ. ಇನ್ನು ನಾನು ಮತ್ತು ರಾಮಚಂದ್ರ ದಿನಕ್ಕೆರಡು ಸಲ ಪ್ರಿನ್ಸಿಪಾಲರ ಬಳಿ ಜಗಳವಾಡಲು ಆರಂಭಿಸಿದೆವು. ತುಂಬಾ ಹಾಸ್ಯಪ್ರವೃತ್ತಿಯ, ಜಾತಿ–ಬೇಧ ಮತ್ತು ಧರ್ಮಬೇಧ ಮಾಡದ ಮುಸ್ಲಿಂರಾದ ನಮ್ಮ ಪ್ರಿನ್ಸಿಪಾಲರು ಹಾಸ್ಟಲ್ ವಿಚಾರ ಎತ್ತಿದರೆ ಸಾಕು, ಅದೇಕೊ ಮಾತು ಕಳೆದುಕೊಳ್ಳುತ್ತಿದ್ದರು. ಇದರಿಂದಾಗಿ ನಾವು ಬಹುವಾಗಿ ಇಷ್ಟಪಡುತ್ತಿದ್ದ ಮತ್ತು ನಮಗೂ ಎರಡು ದಿನ ಪಾಠ ಹೇಳಿದವರನ್ನೇ ಬಯ್ಯಬೇಕಾಯಿತಲ್ಲ! ಎಂದು ಪಶ್ಚಾತಾಪ ಪಡುವಂತಾಯಿತು. ಆದರೆ ಇದರೊಡನೆ ಅನ್ಯಾಯವನ್ನು ಪ್ರತಿಭಟಿಸುತ್ತಿದ್ದೇವೆಂಬ ಸಮಾಧಾನವೂ ನಮಗಿತ್ತು.

ಇಷ್ಟೆಲ್ಲ ಆಗುವ ಹೊತ್ತಿಗೆ ಹಾಸ್ಟಲ್‌ನಲ್ಲಿ ನಮಗೆಲ್ಲ ಊಟ ನಿಲ್ಲಿಸಿದ್ದರು. ಇದರಿಂದಾಗಿ ಊಟಕ್ಕೆ ಊರಿಗೆ ಹೋಗಬೇಕಾಗಿತ್ತು. ಒಂದು ದಿನ ಮಧ್ಯಾಹ್ನದ ಉರಿಬಿಸಿಲಿನಲ್ಲಿ ಬಾಡಿಗೆ ಸೈಕಲ್‌ನಲ್ಲಿ ಊರಿಗೆ ಹೋದೆ. ನೋಡಿದರೆ ನಮ್ಮ ಮನೆ ಮುಂದೆ ಜನ ಸೇರಿದ್ದಾರೆ! ಏನೆಂದು ನೋಡಿದರೆ ನಮ್ಮೂರಿನ ಬೋವಿ ಹೆಂಗಸು ಅಮ್ಮನ ಜೊತೆ ಜಗಳ ಕಾಯುತ್ತಿದ್ದಳು. ಕಾರಣವೇನೆಂದು ವಿಚಾರಿಸಿದರೆ, ಬೋರ್‌ವೆಲ್‌ನ ಹತ್ತಿರ ಅಮ್ಮ ಬೋವಿ ಹೆಂಗಸಿನ ಗಡಿಗೆಯನ್ನು ಮುಟ್ಟಿಸಿಕೊಂಡಳಂತೆ! ಮುಟ್ಟಸಿಕೊಂಡ ತಪ್ಪಿಗಾಗಿ ಹೊಸ ಗಡಿಗೆ ಕೊಡಿಸಬೇಕೆಂದು ಆಕೆ ನಮ್ಮ ಮನೆ ಮುಂದೆ ಗಲಾಟೆ ಮಾಡುತ್ತಿದ್ದಳು. ಬಿಸಿಲಲ್ಲಿ ಸೈಕಲ್ ತುಳಿದು ಬಂದದ್ದರಿಂದ ಬೆವರು ಒರೆಸಿಕೊಳ್ಳುತ್ತ ನಿಂತಿದ್ದೆ. ನನ್ನನ್ನು ಕಂಡ ತಕ್ಷಣ ಆ ಬೋವಿ ಹೆಂಗಸು ಮಣ್ಣಿನ ಗಡಿಗೆಯನ್ನು ನನ್ನ ಮುಂದಿಟ್ಟು, “ನೋಡಣ್ಣಯ್ಯ ನಿಮ್ಮಮ್ಮ ನನ್ನ ಗಡಿಗೆ ಮುಟ್ಟಿಸಿಕೊಂಡೈತೆ! ನಿಮ್ಮೋರು ನಮ್ಮ ಗಡಿಗೆ ಮುಟ್ಟಬಹುದಾ?” ಎಂದಳು. ಇದರಿಂದಾಗಿ ನಾನು ಹೊಸಗಡಿಗೆ ಕೊಡಿಸಬಹುದೆಂಬ ಆಶೆ ಆ ಹೆಂಗಸಿನ ಮುಖದಲ್ಲಿತ್ತು. ಸಾವರಿಸಿಕೊಳ್ಳುತ್ತ ನಾನು ಹಾಗಂದಿದ್ದೆ ತಡ, ಆ ಮಣ್ಣಿನ ಗಡಿಗೆಗೆ ಅದೆಷ್ಟು ಸಿಟ್ಟು ಬಂದಿತೆಂದರೆ; ಚಂಗನೆ ಎಗರಿ ತನ್ನ ಯಜಮಾನಿಯ ಕೈ ಸೇರಿ, ಮಾದಿಗರ ಹಟ್ಟಿ ಬಿಟ್ಟು ಬರಬರನೆ ನಡೆದು ವಡ್ಡರಹಟ್ಟಿ ಸೇರಿತು.

ಇತ್ತ ಹಾಸ್ಟಲ್‌ನ ಪರಿಸ್ಥಿತಿ ಇನ್ನೂ ಬಿಗಡಾಯಿಸಿತು. ಪರಿಸ್ಥಿತಿ ಎಲ್ಲಿಗೆ ಬಂದಿತೆಂದರೆ, ಇಡೀ ವರ್ಷ ನಮಗೆ ಬರಬೇಕಾಗಿದ್ದ ಎಲ್ಲ ಹಣಕ್ಕೂ ನಮ್ಮಿಂದ ಮೊದಲೇ ಸಹಿಪಡೆದು, ನಿಮಗೂ ಹಣಕ್ಕೂ ಸಂಬಂಧವೇ ಇಲ್ಲ ಎಂದು ಹೇಳಿಬಿಟ್ಟರು. ಆಗ ನಾವು ಅನಿವಾರ್ಯವಾಗಿ ಹೋರಾಟದ ದಾರಿ ಹಿಡಿಯಲೇ ಬೇಕಾಗಿತ್ತು. ಆಗ ನಾವು ತಾಲ್ಲೂಕಿನ

ಸಮಾಜಕಲ್ಯಾಣ ಅಧಿಕಾರಿಗಳ ಹತ್ತಿರ ಹೋಗಿ ದೂರುನೀಡಿದೆವು. ಅವರೂ ಕೂಡ ಅನ್ಯಾಯದ ಪರವೇ ಮಾತಾಡಿದರು. ಇದರಿಂದ ರೋಸತ್ತ ನಾವು ನಾಲ್ವರೂ, ಒಂದು ದಿನ ಬೆಳಿಗ್ಗೆ ಕಾಲೇಜು ಪ್ರಾರಂಭವಾಗುವ ಮುಂಚೆ, ಕಾಲೇಜಿನ ಮುಂಭಾಗವಿದ್ದ ಆಲದ ಮರದ ಕೆಳಗೆ ಎರಡು ಈಚಲು ಚಾಪೆಗಳನ್ನು ಹಾಸಿ ಧರಣಿ ಕುಳಿತುಬಿಟ್ಟೆವು. ಇನ್ನುಳಿಕೆ ಆರುಜನ, ಅವರ ಹತ್ತಿರ ಹೋದರೆ ಬೇರೆಯವರು ಎಲ್ಲಿ ತಮ್ಮನ್ನು ದಲಿತರಂದು ತಿಳಿದುಬಿಡುತ್ತಾರೊ ಎಂದು ಅಥವಾ ಕಾಲೇಜಿನ ಹೆಣ್ಣುಮಕ್ಕಳು ಎಲ್ಲಿ ನೋಡಿಬಿಡ್ತಾರೊ ಎಂದು ದೂರದಲ್ಲೇ ನಿಂತು ನಮ್ಮನ್ನು ನೋಡಿ ಓಡಿಹೋದರು. ಸಾಯಂಕಾಲ ಆರು ಗಂಟೆಯಾದರೂ ನಮ್ಮನ್ನು ಕೇಳಲು ಯಾರೂ ಬರಲಿಲ್ಲ. ನಿರಾಶರಾಗದೆ ಮಾರನೆದಿನ ಬೆಳಿಗ್ಗೆ ಅದೇ ಜಾಗದಲ್ಲಿ ಧರಣಿ ಮುಂದುವರೆಸಿದವು. ಹಾಸ್ಟಲ್‌ನ ಸಿಬ್ಬಂದಿಯವರು ನಮ್ಮ ಮೇಲೆ, ನಮ್ಮವರೇ ಆಗಿದ್ದ ಕೆಲವು ಪೋಲಿಸರನ್ನು ಬಿಟ್ಟು ಹೆದರಿಸಿದರು! ನಮ್ಮ ಜನಾಂಗದ ರಿಟೈರ್ಡ್ ರೆವಿನ್ಯೂ ಅಧಿಕಾರಿಯೊಬ್ಬರಿಂದ ಸಮಜಾಯಷಿ ಹೇಳಿಸಿದರು! ಆದರೆ ನಾವು ಮಾತ್ರ ಧರಣಿ ಮಾಡುವುದನ್ನು ಬಿಡಲಿಲ್ಲ. ನಾವು ಸಹಿಹಾಕಿರುವ ಹಣ ಸಂಪೂರ್ಣವಾಗಿ ನಮ್ಮ ಕೈಗೇ ಬರಬೇಕು; ಇಲ್ಲವೇ ಸರ್ಕಾರಕ್ಕೆ ವಾಪಾಸ್ ಕಟ್ಟಬೇಕು ಎಂಬುದೇ ನಮ್ಮ ಬೇಡಿಕೆಯಾಗಿತ್ತು.

ನಮ್ಮ ನಿರ್ಧಾರ ಅಚಲವೆಂಬುದನ್ನರಿತ ಕಾಲೇಜಿನ ಪ್ರಿನ್ಸಿಪಾಲರು ಸಂಧಾನಕ್ಕಾಗಿ ನಮ್ಮನ್ನು ಕರೆಸಿದರು. ಸಂಧಾನದ ಮಧ್ಯಸ್ತಿಕೆ ವಹಿಸಿದ್ದವರು ನಮ್ಮೆಲ್ಲರ ಮೆಚ್ಚಿನ ಮೇಸ್ಟ್ರು ಎಂ. ಕೃಷ್ಣರಾವ್ (ಎಂ.ಕೆ.ಆರ್) ಎಂಬುವರು. ಇವರ ಸಮ್ಮುಖದಲ್ಲಿ ಮಾತುಕತೆಯಾದ ಮೇಲೆ ನಾವು ಸಹಿಮಾಡಿದ್ದನ್ನು ಹರಿದುಹಾಕಿದೆವು. ಅಂದಿಗೆ ನನ್ನ ಹಾಸ್ಟಲ್ ಜೀವನ ಕೊನೆಗೊಂಡಿತ್ತು.

ಇದರಿಂದಾಗಿ ನಮ್ಮೂರಿನಿಂದ ಕೊರಟಗೆರೆಗೆ ಮತ್ತೆ ದಾರಿಸವೆಸಲು ಪ್ರಾರಂಭಿಸಿದೆ. ಕೊರಟಗೆರೆಯ ಕಾಲೇಜಿಗೆ ಬೆಳಿಗ್ಗೆ ಬಂದು ಸಾಯಂಕಾಲ ಆದಮೇಲೆ ಊರಿಗೆ ಮರಳುತ್ತಿದ್ದೆ. ಮಧ್ಯಾಹ್ನದ ಹೊತ್ತಲ್ಲಿ ಕತ್ತಿನಾಗೇನಹಳ್ಳಿ ರಂಗಸ್ವಾಮಯ್ಯ, ರಾಮಯ್ಯ ಮತ್ತು ಭದ್ರಯ್ಯ ಮೂವರೂ ಸೇರಿ ಮಾಡಿದ್ದ ಬಾಡಿಗೆ ರೂಮಿಗೆ ಬಂದು ಓದಿಕೊಂಡು, ಮಧ್ಯಾಹ್ನ ಅಲ್ಲೇ ಊಟಮಾಡಿ ಊರಿಗೆ ಸಾಯಂಕಾಲ ಬರುತ್ತಿದ್ದೆ. ರಂಗಸ್ವಾಮಯ್ಯ ಮತ್ತು ರಾಮಯ್ಯ ತಿಗಳರ ಹುಡುಗರು. ನನ್ನನ್ನು ಪ್ರೀತಿಯಿಂದ ಕಾಣುತ್ತಿದ್ದರು. ಊರಿನಿಂದ ತರಕಾರಿಗಳನ್ನು ತಂದು ಅಚ್ಚುಕಟ್ಟಾಗಿ ಅಡಿಗೆ ಮಾಡುತ್ತಿದ್ದರು. ಹೀಗಾಗಿ ನನ್ನ ಮಧ್ಯಾಹ್ನದ ಊಟ ಅಲ್ಲೇ ಖಾಯಂ ಆಗಿತ್ತು. ನಮ್ಮ ಮನೆಗಳಲ್ಲಿ ಕರೆಂಟ್ ಇಲ್ಲದಿದ್ದನ್ನು ತಿಳಿದಿದ್ದ ನಮ್ಮ ಪಕ್ಕದ ಕುರುಡುಗಾನ ಹಳ್ಳಿಯವರಾದ ಗೋವಿಂದರಾಜು ಎಂಬ ನನ್ನ ಸಹಪಾಠಿ, ಅವರ ಮನೆಗೆ ನನ್ನನ್ನೂ ಓದಿಕೊಳ್ಳಲು ಕರೆದುಕೊಳ್ಳಲು ಕರೆದುಕೊಂಡು ಹೋಗುತ್ತಿದ್ದರು. ಅವರ ಊರು ನಮ್ಮೂರಿಗೆ ಬಹಳ ಹತ್ತಿರವಿತ್ತು. ರಾತ್ರಿಯೆಲ್ಲಾ ಗೋವಿಂದರಾಜು ಮನೆಯಲ್ಲಿ ಓದಿಕೊಂಡು, ಬೆಳ್ಳಿಗ್ಗೆ ಎದ್ದು ಊರಿಗೆ ಬರುತ್ತಿದ್ದೆ. ಇಂಥ ಪಡುಪಾಟಲುಗಳಲ್ಲೇ ಓದು ಮುಂದುವರೆಸಿದೆ.

ಪರೀಕ್ಷೆಗಾಗಿ ಸ್ನೇಹಿತರ ಸಹಕಾರದಿಂದ ಚೆನ್ನಾಗಿಯೇ ಓದಿಕೊಂಡಿದ್ದೆ. ಆದರೆ ಪರೀಕ್ಷಾ ಸಮಯದಲ್ಲೇ ದುರಾದೃಷ್ಟಕ್ಕೆ ನನಗೆ ಅರದಲೆನೋವು ವಕ್ಕರಿಸಿಕೊಂಡಿತು. ಪರೀಕ್ಷೆ ಪ್ರಾರಂಭವಾಗಿದೆ. ಓದಲು ಕಣ್ಣು ತೆರೆದರೆ ಸಾಕು ತಡೆಯಲಾರದಷ್ಟು ತಲೆನೋವು. ಆಸ್ಪತ್ರೆಗೆ ಹೋಗಲು ಅಂಜಿಕೆ. ಹೇಗೆ ಓದಿಕೊಳ್ಳುವುದೆಂದು ಯೋಚಿಸುತ್ತಿದ್ದೆ. ಒಂದು ಉಪಾಯ ಹೊಳೆಯಿತು. ಆಗ ಪರೀಕ್ಷೆ ನಡೆಯುತ್ತಿದ್ದುದು ಮಧ್ಯಾಹ್ನ ಎರಡರಿಂದ ಸಂಜೆ ಐದು ಗಂಟೆಯವರೆಗೆ. ಹಾಸ್ಟಲ್‌ನಲ್ಲಿ ನನ್ನ ಸಹಪಾಠಿಯಾಗಿದ್ದ ಲಂಬಾಣಿಗರ ಹುಡುಗನೊಬ್ಬ, ಪ್ರತಿದಿನ ಬೆಳಿಗ್ಗೆ ಎಂಟುಗಂಟೆಯ ಹೊತ್ತಿಗೆ ಕಾಲೇಜಿನ ಪಕ್ಕದ ಗುಟ್ಟೆಯ ಹೊಂಗೆಮರದ ನೆರಳಿನಲ್ಲಿ ಕುಳಿತು ಸುತ್ತಲಿನ ನಾಲ್ಕಾರು ಜನಕ್ಕೆ ಕೇಳುವಂತೆ ಗಟ್ಟಿಯಾಗಿ ಓದಿಕೊಳ್ಳುತ್ತಿದ್ದ. ಇದೇ ನನ್ನ ಪಾಲಿಗೆ ವರದಾನವಾಯಿತು. ಆದ್ದರಿಂದ ಅವನು ಓದಲು ಎಲ್ಲಿ ಕುಳಿತುಕೊಳ್ಳುತ್ತಾನೆಂದು ಅಂದಾಜು ಮಾಡಿ, ಅಲ್ಲಿಂದ ಸ್ವಲ್ಪ ದೂರದಲ್ಲಿ ನಾನು ಕಣ್ಣುಮುಚ್ಚಿ ಮಲಗಿಬಿಡುತ್ತಿದ್ದೆ. ಆ ಲಂಬಾಣಿಗರ ಹುಡುಗ ಅಲ್ಲಿಗೆ ಬಂದು ಅವತ್ತಿನ ವಿಷಯವನ್ನು ಗಟ್ಟಿಯಾಗಿ ಓದಿಕೊಳ್ಳುತ್ತಿದ್ದ. ನಾನು ಅದನ್ನೆಲ್ಲಾ ಕೇಳಿಸಿಕೊಂಡು ಪರೀಕ್ಷೆಗೆ ಹೋಗಿ ಬರೆಯುತ್ತಿದ್ದೆ.

ವರ್ಷಪೂರ್ತಿ ಗಲಾಟೆಯಲ್ಲಿ ಮುಳುಗಿದ್ದ ನಾವೆಲ್ಲ ಪಾಸಾಗುದಿಲ್ಲವೆಂದು ಬಹಳ ಜನ ಊಹಿಸಿದ್ದರು. ಆದರೆ ನಾವು ಅವರ ಊಹೆಯನ್ನು ಸುಳ್ಳಾಗಿಸಿ, ಧರಣಿ ಕುಳಿತಿದ್ದ ನಮ್ಮ ನಾಲ್ವರ ಪೈಕಿ (ರಾಮಚಂದ್ರನನ್ನು ಬಿಟ್ಟು) ಮೂವರು ಮೊದಲ ದರ್ಜೆಯಲ್ಲಿ ಪಾಸಾಗಿದ್ದೆವು. ನಾನು ಮುಂದಿನ ಓದಿಗಾಗಿ ತುಮಕೂರಿನಲ್ಲಿ ಬಿ.ಎ.ಗೆ ಸೇರಬೇಕಾಗಿತ್ತು. ಇದರಿಂದಾಗಿ ಟಿ.ಸಿ ಮಾರ್ಕ್ಸ್‌ಕಾರ್ಡ್ ಪಡೆಯಲು ಪ್ರಿನ್ಸಿಪಾಲರ ರೂಮಿಗೆ ಹೋದೆ. ನನ್ನ ಮುಖ ಕಂಡ ಕೂಡಲೆ ಪ್ರಿನ್ಸಿಪಾಲರು ಉರಿದು ಬಿದ್ದರು. 'ಇಷ್ಟು ದಿನ ನೀನು ನನ್ನನ್ನು ಬಯ್ಯುತ್ತಿದ್ದೆ. ಅದೇ ಕಾರಣದಿಂದ ನಿನ್ನ ಟಿ.ಸಿ.ಯಲ್ಲಿ ಬ್ಯಾಡ್‌ಕ್ಯಾರೆಕ್ಟ್ರರ್ ಅಂತ ಬರೆದುಬಿಡುತ್ತೇನೆ' ಎಂದು ಬಲು ಜೋರಾಗಿಯೇ ಹೇಳಿದರು. ಅಲ್ಲಿಯೇ ಟಿಸಿ. ಬರೆಯುತ್ತಾ ಕುಳಿತಿದ್ದ ಇಂಗ್ಲಿಷ್ ಮೇಸ್ಟ್ರನ್ನು ಕುರಿತು 'ರೀ ಇಲಿಯಾಜ್, ಇವನ ಕ್ಯಾರಕ್ಟರ್ ಬ್ಯಾಡ್ ಅಂತ ಬರೆದ ಬಿಡ್ರಿ' ಅಂದರು ಯಾವತ್ತೂ ಹೀಗೆ ಮಾತಾಡದಿದ್ದ ಪ್ರಿನ್ಸಿಪಾಲರ ಮಾತುಕೇಳಿ ನನ್ನ ಜಂಘಾಬಲವೇ ಉಡುಗಿಹೋಯಿತು. ಏನಪ್ಪಾ ಮಾಡುವುದು, ಕಷ್ಟಪಟ್ಟು ಪಾಸುಮಾಡಿದ್ದಕ್ಕೇ ಹೀಗಾಯ್ತಲ್ಲ! ಅಂದುಕೊಂಡು ತಲೆತಗ್ಗಿಸಿ ನಿಂತೆ. ಆದರೆ ಟಿ.ಸಿ. ಬರೆಯುತ್ತಿದ್ದ ಇಂಗ್ಲಿಷ್ ಮೇಸ್ಟ್ರು ಮಾತ್ರ ಮುಗುಳು ನಗುತ್ತಾ ಟಿ.ಸಿ ಬರೆಯುತ್ತಿದ್ದನ್ನು ನೋಡಿದ ನನಗೆ ಸ್ವಲ್ಪ ಧೈರ್ಯ ಬಂತು. ಅಷ್ಟರಲ್ಲಿ ಪ್ರಿನ್ಸಿಪಾಲರು 'ಏ ರಾಮಯ್ಯ, ಬಾ ಇಲ್ಲಿ' ಎಂದು ಹತ್ತಿರ ಕರೆದರು. ನಾನು ಭಯದಿಂದಲೇ ಅವರ ಹತ್ತಿರ ಹೋದೆ. ನಾನು ಹತ್ತಿರ ಹೋದಂತೆ ಬಾಚಿ ನನ್ನನ್ನು ತಬ್ಬಿಕೊಂಡರು. ಈ ಅನಿರೀಕ್ಷಿತ ಘಟನೆಯಿಂದ ನನಗಂತೂ ಬಹಳ ಸಂತೋಷವಾಯಿತು. ಟಿ.ಸಿ.ಯನ್ನು ನನ್ನ ಕೈಗೆ ಕೊಡುತ್ತಾ 'ನೀನು ನನಗೆ ಬಯ್ದರೂ ನನಗೆ ನಿನ್ನ ಮೇಲೆ ಪ್ರೀತಿಯೆ! ಮುಂದೆ ಚೆನ್ನಾಗಿ ಓದು. ನಿಜಕ್ಕೂ ನೀನು ಉದ್ಧಾರವಾಗುತ್ತಿಯಾ' ಎಂದು ಬೀಳ್ಕೊಟ್ಟರು.

## ೨. ಕನಸು

**ಆಶಯ :**

### ನಾನೊಂದು ಕನಸ ಕಂಡೆ

**– ಅಕ್ಕಮಹಾದೇವಿ**

ಅಕ್ಕ ಕೇಳವ್ವ ಅಕ್ಕಯ್ಯ ನಾನೊಂದು ಕನಸ ಕಂಡೆ !
ಆಕ್ಕಿಯಡಕೆ ಓಲೆ ತೆಂಗಿನಕಾಯಿ ಕಂಡೆ !
ಚಿಕ್ಕ ಚಿಕ್ಕ ಸುಲಿಪಲ್ಲ ಗೊರವನು,
ಭಿಕ್ಷಕ್ಕೆ ಮನೆಗೆ ಬಂದುದ ಕಂಡೆನವ್ವ !
ಮಿಕ್ಕುಮೀರಿ ಹೋಹನ ಬೆಂಬತ್ತಿ ಕೈವಿಡಿದೆನು
ಚೆನ್ನಮಲ್ಲಿಕಾರ್ಜುನಯ್ಯನ ಕಂಡು ಕಣ್ದೆರೆದೆನು !

# ಕನಸಿನ ಹುಡುಕಾಟ

**– (ಸಂ) ಎ.ಕೆ ರಾಮಾನುಜನ್**

ಒಬ್ಬ ರಾಜನಿಗೆ ಮೂರು ಜನ ಗಂಡು ಮಕ್ಕಳಿದ್ದರು. ಅವರಲ್ಲಿ ಇಬ್ಬರು ಶತ ಮೂರ್ಖರು. ಕೊನೆಯ ಮಗ ಮಾತ್ರ ಬುದ್ಧಿವಂತನಾಗಿದ್ದ. ರಾಜನಿಗೆ ಅವನು ಮೆಚ್ಚಿಕೆಯಾಗಿದ್ದ. ಅದರಿಂದ ರಾಜ ಮಗನಿಗೇ ರಾಜ್ಯವನ್ನು ವಹಿಸಿಕೊಡಲು ತೀರ್ಮಾನಿಸಿದ.

ಒಂದು ರಾತ್ರಿ ರಾಜನಿಗೆ ಒದು ವಿಚಿತ್ರವಾದ ಕನಸು ಬಿತ್ತು. ಆ ಕನಸಿನಲ್ಲಿ ಒಂದು ಸುಂದರವಾದ ಕೈತೋಟವಿತ್ತು. ಆ ತೋಟದ ನಡುವಿನಲ್ಲಿ ಚಿನ್ನದ ಕವಲುಗಳಾಗಿದ್ದವು. ಆ ಮರದ ಮೇಲೆ ಒಂದು ಪಚ್ಚೆ ಹರಳಿನ ಗಿಳಿ ಹಾಡುತ್ತಾ ಮೆಲ್ಲಗೆ ಹಾರಾಡುತ್ತಿತ್ತು. ಕನಸಿನೊಳಗೆ ರಾಜ ಒಂದು ನಾಗಮಣಿಯನ್ನು ಹಿಡಿದುಕೊಂಡು ಗಿಳಿಗೆ ಹೊಡೆದಾಗ ಆ ಇಡೀ ತೋಟವೆಲ್ಲ ಒಂದೇ ಸಾರಿಗೆ ಕಣ್ಮರೆಯಾಗಿ ಬಿಟ್ಟಿತು.

ರಾಜನಿಗೆ ನಿಜವಾದ ಬದುಕಿನಲ್ಲಿ ಇದರ ಅರ್ಥವೇನು ಎಂದು ತಿಳಿಯುವ ಆಸೆಯಾಯಿತು. ಅವನು ತನ್ನ ಮೂರು ಗಂಡು ಮಕ್ಕಳನ್ನು ಕರೆದು ತನ್ನ ಕನಸನ್ನು ವರ್ಣಿಸಿದ. “ಒಂದು ವೇಳೆ ನಿಮ್ಮಲ್ಲಿ ಯಾರಾದ್ರು ಸರಿ ನಾನು ನೋಡಿದ ಕನಸಿನ ನಿಜರೂಪವನ್ನು ಸರಿಯಾಗಿ ತಿಳಿಸಿದರೆ ನಿಮಗೆ ರಾಜ್ಯವನ್ನೆಲ್ಲ ಕೊಟ್ಟುಬಿಡುತ್ತೇನೆ.” ಎಂದ. ಎಲ್ಲರೋ ಅದಕ್ಕೆ ಒಪ್ಪಿಕೊಂಡರು. ಅವರಿಗೆ ಬೇಕಾದ ಸಕಲ ಸಿದ್ಧತೆಗಳನ್ನು ರಾಜ ಮಾಡಿಕೊಟ್ಟ ಅವರು ಕನಸಿನ ಮೂಲವನನ್ನು ಹುಡುಕಲು ಪ್ರಯಾಣ ಬೆಳೆಸಿದರು. ಹಿರಿಯ ಮಕ್ಕಳಿಬ್ಬರು ಒಂದು ದಿಕ್ಕಿನಲ್ಲಿ ಪ್ರಯಾಣ ಹೊರಟರೆ ಕಿರಿಯವನು ಅದರ ವಿರುದ್ಧ ದಿಕ್ಕಿನನಲ್ಲಿ ಪಯಣ ಕಿರಿಯವನು ಅದರ ವಿರುದ್ಧ ದಿಕ್ಕಿನಲ್ಲಿ ಪಯಣ ಬೆಳೆಸಿದ.

ಐದಾರು ದಿನ ಪ್ರಯಾಣ ಮಾಡಿದ ಹಿರಿಯ ಗಂಡುಮಕ್ಕಳಿಗೆ ಬೇಸರ ಶುರುವಾಯಿತು. ಕಲ್ಲು ಮತಿಳ್ಳು, ಕೊರಕಲು, ಕಾಡು ಮೇಡುಗಳುಳ್ಳ ದಾರಿಗಳಿಗಿಂತ ಪಟ್ಟಣವೇ ಆಕರ್ಷಿಸುತ್ತಿತ್ತು. ಒಂದು ಒಳ್ಳೆಯ ಸ್ಥಳ ಸಿಕ್ಕಿದ ಕೂಡಲೇ ಅವರು ಪ್ರಯಾಣ ನಿಲ್ಲಿಸಿದರು. ಇದ್ದ ಹಣ ಖರ್ಚಾಗುವವರೆಗೆ ಚೆನ್ನಾಗಿ ಕಾಲ ಕಳೆದರು. ನಂತರ ಅರಮನೆಗೆ ಬಂದು ತಮಗೆ ಯಾವ ತೋಟವಾಗಲೀ, ಗಿಳಿಯಾಗಲೀ ಕಾಣಿಸಲಿಲ್ಲ ಎಂದು ತಂದೆಗೆ ಹೇಳಿದರು. ಈ ನಡುವೆ ಕಿರಿಮಗ ಒಂದು ವಯಸ್ಸಾದ ಅಜ್ಜಿಯನ್ನು ಹುಡುಕಿ ಅವಳ ಜೊತೆ ಸೇರಿಕೊಂಡ. ಅವನು ಮೂರೇ ದಿನಗಳಲ್ಲಿ ಅಜ್ಜಿಗೆ ಒಳ್ಳೆಯ ಹುಡುಗನಾಗಿ ಕಂಡ. ಅವನನ್ನು ಅವಳು ಬಹಳವಾಗಿ ಮೆಚ್ಚಿಕೊಂಡಳು. ಇಬ್ಬರಿಗೂ ಚೆನ್ನಾಗಿ ಪರಿಚಯವಾದ ನಂತರ ತಾನು ಬಂದ ಕಾರಣವನ್ನು ತಿಳಿಸಿದ. ಅವಳಿಗೆ ಇದರ ಬಗ್ಗೆ ಗೊತ್ತಿತ್ತು. ಅವಳು ಅವನಿಗೆ “ನೀನು ಈ ಪಟ್ಟಣದ ಉತ್ತರ ದಿಕ್ಕಿಗೆ ಪ್ರಯಾಣ ಬೆಳೆಸಿದರೆ ಅಲ್ಲಿ ಒಂದು ಅಮೃತಶಿಲೆಯ ಕೋಟೆ ಕಾಣುತ್ತದೆ. ಅದರ ಒಳಗಡೆ ಹೋದರೆ ಒಂದು ತೋಟವಿದೆ. ಅಲ್ಲಿಗೆ ಹೋಗೋದು ಬಹಳ

ಕಷ್ಟ. ಆದರೆ ನಾನು ಅಲ್ಲಿಗೆ ಹೇಗೆ ಹೋಗೋದು ಅಂತ ಹೇಳ್ತೀನಿ. ಮೊದಲು ಒಂದು ದೊಡ್ಡ ಅರಳಿ ಮರ ಕಾಣುತ್ತದೆ. ಅದರ ಕೆಳಗೆ ಹುತ್ತ ಇದೆ. ಒಂದು ದೈತ್ಯ ವಿಷ ಸರ್ಪ ಅಲ್ಲಿ ವಾಸಮಾಡುತ್ತದೆ. ಅದು ಪ್ರತಿ ರಾತ್ರಿ ಹುತ್ತದಿಂದ ಈಚೆ ಬರುತ್ತದೆ. ಅದರ ಹಣೆಯ ಮೇಲಿರುವ ಪವಿತ್ರವಾದ ನಾಗಮಣಿಯನ್ನು ತೆಗೆದು ಆ ಮರದ ಕೆಳಗೆ ಇಟ್ಟು ಅದರ ಬೆಳಕಿನಲಿ ಆಹಾರವನ್ನು ಹುಡುಕುತ್ತದೆ. ನೀನು ಹೇಗಾದ್ರು ಮಾಡಿ ಆ ಮಣಿಯನ್ನು ಪಡೆದುಕೊಂಡರೆ ಅದು ನಿನಗೆ ತೋಟಕ್ಕೆ ಹೋಗುವ ದಾರಿಯನ್ನು ತೋರಿಸುತ್ತದೆ. ಅಲ್ಲಿ ನಿನಗೆ ನಾಲ್ಕು ಜನ ರಾಜಕುಮಾರಿಯರು ಸಿಗುತ್ತಾರೆ. ರಾತ್ರಿಯಾದ ಮೇಲೆ ಅವರಲ್ಲಿ ಒಬ್ಬಳು ಬೆಳ್ಳಿಯ ಮರವಾಗುತ್ತಾಳೆ. ಇನ್ನೊಬ್ಬಳು ಪಚ್ಚೆಮಣಿಯ ಎಲೆಗಳಾಗುತ್ತಾಳೆ. ಇನ್ನೊಬ್ಬಳು ಕೆಂಪು ಹರಳಿನ ಹಣ್ಣಾಗುತ್ತಾಳೆ. ಮತ್ತೊಬ್ಬಳು ಆ ಮರದ ಚಿನ್ನದ ಕವಲುಗಳಾಗಿ ಬದಲಾಗುತ್ತಾಳೆ. ನೀನು ಪಚ್ಚೆ ಮಣಿಯ ಗಿಣಿಯ ಜೊತೆ ಮಾತಾಡಬೇಕು. ಅದರ ಬಗ್ಗೆ ಮುಂದೆ ನನಗೇನು ತಿಳಿದಿಲ್ಲ. ಆದರೆ ನನಗೊಬ್ಬಳು ಅಕ್ಕ ಇದ್ದಾಳೆ. ಅವಳು ಮುಂದಿನ ಪಟ್ಟಣದಲ್ಲಿದ್ದಾಳೆ. ಹೋಗಿ ಅವಳನ್ನು ಕೇಳು. ಅವಳಿಗೆ ಅದರ ಬಗ್ಗೆ ಗೊತ್ತಿರಬಹುದು." ಎಂದು ಹೇಳಿ ಕಳಿಸಿದಳು.

ಯುವ ರಾಜಕುಮಾರ ಕೃತಜ್ಞತೆಯಿಂದ ಅವಳಿಗೆ ಕೈಮುಗಿದು ಉತ್ತರದಿಕ್ಕಿಗೆ ಪ್ರಯಾಣ ಬೆಳೆಸಿದ ಮೂರು ದಿನ ಹಗಲು ರಾತ್ರಿ ಪ್ರಯಾಣ ಮಾಡಿದ ಮೇಲೆ ಅವನಿಗೆ ಅಮೃತಶಿಲೆಯ ಕೋಟೆ ಕಂಡಿತು. ಅದರ ಬಾಗಿಲು ಮುಚ್ಚಿತ್ತು. ಅವನು ರಾತ್ರಿಯಾಗುವವರೆಗೆ ಕಾದನು. ರಾತ್ರಿಯಾದಾಗ ಕೋಟೆ ಬಾಗಿಲುಗಳು ತೆರೆದುಕೊಂಡವು. ತಕ್ಷಣ ಇವನು ಒಳಗೆ ಹೋದ. ಅಲ್ಲೊಂದು ದೊಡ್ಡ ಅರಳಿಮರ ಕಾಣಿಸಿತು. ಅದರ ಕೆಳಗೆ ನಿಜವಾಗಿಯೂ ಒಂದು ಹುತ್ತವಿತ್ತು. ಅವನು ಮರಹತ್ತಿ ಎಲೆಗಳ ಮರೆಯಲ್ಲಿ ಅಡಗಿ ಕುಳಿತ. ಹುತ್ತದಿಂದ ಹಾವು ಹೊರಗೆ ಬರುವುದನ್ನು ಕಾದ. ಭಯಾನಕವಾದ ದೈತ್ಯಕಾರದ ಹಾವು ಈಚೆ ಬಂದಿತು. ಅದು ಒಂದು ಗಡಿಗೆಯನ್ನು ಹುಡುಕಿ ಅದರಲ್ಲಿ ತನ್ನ ಹಣೆಯಲ್ಲಿದ್ದ ನಾಗಮಣಿಯನ್ನು ಕಳಚಿ ಇಟ್ಟಿತು. ಅದರ ಬೆಳಕು ಸುತ್ತ ಮುತ್ತ ಹರಡಿತು. ಆಗ ಆ ಬೆಳಕಿನ ನಡುವೆ ತನ್ನ ಆಹಾರವನ್ನು ಹಾವು ಹುಡುಕುತ್ತಿತ್ತು. ಆಗ ರಾಜಕುಮಾರ ತನ್ನ ಬೊಗಸೆ ತುಂಬಾ ಅರಳಿ ಎಲೆಗಳನ್ನು ಕಿತ್ತು ತಂದು ಆ ಮಣಿಯ ಬೆಳಕು ಕಾಣದಂತೆ ಆ ಗಡಿಗೆಯೊಳಗೆ ಹಾಕಿದ. ಕತ್ತಲಾಗಿಬಿಟ್ಟಿತು. ಆ ಹಾವು ತನ್ನ ಮಣಿಗಾಗಿ ಕತ್ತಲೆಯಲ್ಲೇ ಬಹಳ ಹೊತ್ತು ತಡಕಾಡಿತು. ಅದಕ್ಕೆ ಕೋಪ ಬಂದು ಕೆರಳಿತು. ಕೋಪ ಹೆಚ್ಚುತ್ತಲೇ ಹೋಯಿತು. ಬಹಳಷ್ಟು ಸಾರಿ ಹೆಡೆಯೆತ್ತಿ ಬುಸುಗುಡುತ್ತಾ ಬಂಡೆಗೆ ಬಡಿಯುತ್ತಿತ್ತು. ಆಗ ಅದು ರಕ್ತಕಾರಿಕೊಂಡು ಸತ್ತು ಹೋಯಿತು.

ಆಗ ರಾಜಕುಮಾರ ಬೇಗ ಹೋಗಿ ಆ ನಾಗಮಣಿಯನ್ನು ಕೈಗೆ ತೆಗೆದುಕೊಂಡ. ಅದರ ಬೆಳಕಿನಲ್ಲಿ ಅವನ ಮುಂದೆ ಒಂದು ಸುಂದರವಾದ ಕೈತೋಟವಿರುವುದು ಕಾಣಿಸಿತು. ಅವನು ಅದರೊಳಕ್ಕೆ ಕಾಲಿಟ್ಟಾಗ ಅಲ್ಲಿ ಒಂದು ಬೆಳ್ಳಿಯ ಮರ, ಅದರಲ್ಲಿದ್ದ ಪಚ್ಚೆಮಣಿ

ಎಲೆಗಳು, ಕೆಂಪುಬಣ್ಣದ ಮಣಿಯಿಂದ ಕೂಡಿದ ಹಣ್ಣುಗಳು ಮತ್ತು ಚಿನ್ನದ ಕವಲುಗಳು ಕಂಡವು. ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ ಅವನು ಮಣಿಯ ಬೆಳಕನ್ನು ಅವುಗಳ ಕಡೆ ತಿರುಗಿಸಿದನೋ ಅಷ್ಟೇ ಬೇಗ ಅಲ್ಲಿದ್ದ ಮರ ಮಾಯವಾಗಿ ಆ ಸ್ಥಳದಲ್ಲಿ ನಾಲ್ವರು ರಾಜಕುಮಾರಿಯವರು ನಿಂತಿದ್ದರು. ಒಬ್ಬರು ಇನ್ನೊಬ್ಬರನ್ನು ಮೀರಿಸುವಂತಿದ್ದರು. ಅಪ್ರತಿಮೆ ಸುಂದರಿಯಾಗಿದ್ದರು. ಒಬ್ಬಳು ಇನ್ನೊಬ್ಬಳಿಗೆ ತಾನೂ ಆ ರಾಜಕುಮಾರನನ್ನು ಮದುವೆಯಾಗುವುದಾಗಿ ಹೇಳುತ್ತಿದ್ದರು. ಆದರೆ ಅವನನ್ನು ಅವರು ಈ ಬಗ್ಗೆ ಹೇಳಿದಾಗ ಅವನು ತನ್ನ ಮುಂದಿನ ಕೆಲಸ ಮುಗಿಸಿಕೊಂಡು ಬಂದು ತಮ್ಮನ್ನು ಕಾಣುವುದಾಗಿ ಭರವಸೆಕೊಟ್ಟು, ಕೆಲವು ದಿನಗಳವರೆಗೆ ಕಾಯಲು ಹೊರಟ.

ರಾಜಕುಮಾರ ಈಗ ಹಸಿರುಮಣಿಯ ಗಿಣಿಯನ್ನು ಹುಡುಕಿಕೊಂಡು ಹೊರಟ ಪಕ್ಕದ ಪಟ್ಟಣಕ್ಕೆ ಹೋಗಿ ತಾನೂ ಒಳ್ಳೆಯ ಹೆಸರು ಸಂಪಾದಿಸಿ ಎರಡನೆಯ ಮುದುಕಿಯ ಹತ್ತಿರ ಹೋಗಿ ಮೂರೇ ದಿನದಲ್ಲಿ ಒಳ್ಳೆಯವನು ಎನಿಸಿಕೊಂಡ. ಅವಳು ಅವನನ್ನು ನಂಬಿಕೆಯಿಂದ ವಿಶ್ವಾಸದಿಂದ ಕಂಡ ಮೇಲೆ ಅವಳನ್ನು "ನಿನಗೆ ಯಾರಾದರೂ ಅಣ್ಣ ತಂಗಿಯರಿದ್ದಾರ" ಎಂದು ಕೇಳಿದ. ಅವಳು "ಹೌದು, ನನಗೆ ಒಬ್ಬಳು ತಂಗಿ ಇದ್ದಾಳೆ. ಅವಳು ಇನ್ನೊಂದು ಪಟ್ಟಣದಲ್ಲಿದ್ದಾಳೆ" ಎಂದಳು. ಆಗ ಅವನು ಅವಳನ್ನು ಭೇಟಿಯಾಗಿದ್ದು, ಆಕೆ ಇವನಿಗೆ ಸಹಾಯ ಮಾಡಿದ್ದು, ಮತ್ತೆ ನಾನು ಹಸಿರು ಗಿಣಿಗಾಗಿ ಬಂದಿರುವುದರ ಕಥೆಯನ್ನು ಹೇಳಿದ. ಆಗ ಆ ಮುದುಕಿ ಅದರ ಬಗ್ಗೆ ತನಗೆ ಗೊತ್ತಿದ್ದುದೆಲ್ಲವನ್ನು ಅವನಿಗೆ ಹೇಳಿದಳು. "ಏಳು ಸಮುದ್ರದಾಚೆ ಒಂದು ಕೊಳ ಅದೆ. ಅದರೊಳಗೆ ಒಂದು ತಾವರೆ ಗಿಡವಿದೆ. ರಾಜಕುಮಾರನಾದ ನೀನು ಅದರ ಜೊತೆ ಒಂದು ದಿನವೆಲ್ಲಾ ಆಟವಾಡಿದರೆ ಅದು ರಾತ್ರಿಯ ಹೊತ್ತಿಗೆ ಹಸಿರುಮಣಿಯ ಗಿಳಿಯಾಗಿ ಬದಲಾಗುತ್ತದೆ."

"ಅಲ್ಲಿಗೆ ಹೇಗೆ ಹೋಗುವುದು?" ಎಂದು ಕೇಳಿದ ರಾಜಕುಮಾರ.

"ಅದು ನಿನಗೆ ಈಗ ಗೊತ್ತಿದೆ. ಭಕ್ತಿಯಿಂದ ನಿನ್ನ ಹತ್ತಿರವಿರುವ ನಾಗಮಣಿಯನ್ನು ಪೂಜಿಸು. ಆಗ ಒಂದು ಗರುಡ ಪಕ್ಷಿ ಕಾಣಿಸಿಕೊಳ್ಳುತ್ತದೆ. ಅದು ನಿನ್ನನ್ನು ಏಳು ಸಮುದ್ರದಾಚೆ ಕರೆದುಕೊಂಡು ಹೋಗುತ್ತದೆ."

ರಾಜಕುಮಾರ ಅವಳು ಹೇಳಿದಂತೆಯೇ ಮಾಡಿದ. ಆಗ ಒಂದು ದೊಡ್ಡ ಗರುಡಪಕ್ಷಿ ನಿಯತ್ತಿನಿಂದ ಬಂದು ಅವನನ್ನು ತನ್ನ ಬೆನ್ನ ಮೇಲೆ ಕೂರಿಸಿಕೊಂಡು ಹಾರುತ್ತ ಏಳು ಸಮುದ್ರ ದಾಟಿ ಆ ಕೊಳದ ಹತ್ತಿರಕ್ಕೆ ತಂದು ಅವನನ್ನು ಬಿಟ್ಟಿತು. ಆಗ ಆತ ತನ್ನ ಮುಂದೆ ಇದ್ದ ತಾವರೆ ಗಿಡವನ್ನು ನೋಡಿದ. ಆ ದೊಡ್ಡ ತಾವರೆ ಗಿಡದ ಹಾಸಿಗೆ ಮೇಲೆ ಸುಂದರವಾದ ರಾಜಕುಮಾರಿ ಮಲಗಿ ನಿದ್ದೆ ಮಾಡುತ್ತಿದ್ದಳು. ಅವನು ತನ್ನಲಿದ್ದ ನಾಗಮಣಿಯಿಂದ ಅವಳು ಕಡೆಗೆ ಬೆಳಕು ಹರಿಸಿದಾಗ ಅವಳು ನಿದ್ದೆಯಿಂದ ಎದ್ದು ಬಂದು ರಾಜಕುಮಾರನ ಮುಂದೆ ಬಂದು ನಿಂತಳು. ರಾಜಕುಮಾರ ಅವಳನ್ನೇ ಬಹಳ ಹೊತ್ತು ನೋಡುತ್ತಿದ್ದುದನ್ನು ಗಮನಿಸಿದ. ಅವಳು ನಾಚಿಕೆಯಿಂದ ತಲೆತಗ್ಗಿಸಿದಳು. ಆಗ

ರಾಜಕುಮಾರ ಅವಳನ್ನು "ಗಾಂಧರ್ವ ವಿವಾಹಕ್ಕೆ ಸಮ್ಮತಿಯೇ?" ಎಂದು ಕೇಳಿದಾಗ ಒಪ್ಪಿಗೆಯೆಂಬಂತೆ ಆಕೆ ತಲೆ ಅಲ್ಲಾಡಿಸಿದಳು.

ನಂತರ ಇಬ್ಬರೂ ಗರುಡ ವಾಹನದ ಮೇಲೆ ಕುಳಿತು ಮರಳಿ ಏಳು ಸಮುದ್ರ ದಾಟಿದರು. ಆ ಮುದುಕಿ ಇಬ್ಬರನ್ನು ಆಶೀರ್ವದಿಸಿ ಕಳಿಸಿಕೊಟ್ಟಳು. ಅವರು ಮತ್ತೆ ಅಮೃತಶಿಲೆಯಿಂದ ಆವೃತವಾದ ಕೋಟೆಯ ಅರಮನೆಗೆ ಬಂದರು. ಅಲ್ಲಿದ್ದ ನಾಲ್ವರು ರಾಜಕುಮಾರಿಯರು ರಾಜಕುಮಾರನನ್ನು ಮತ್ತು ಅವಳನ್ನು ನೋಡಿ ಸಂತಸಪಟ್ಟರು. ಆಗ ಅವರಿಗೆ ತನ್ನ ತಂದೆಗೆ ಬಿದ್ದ ಕನಸನ್ನು ವಿವರಿಸಿ ಹೇಳಿದನು. ಆಗ ಅವರು "ನಾವು ಐದೂ ಜನ ಅಕ್ಕ ತಂಗಿಯರು. ಒಬ್ಬ ಕೆಟ್ಟ ದೆವ್ವ ನಮ್ಮ ಹಿರಿಯ ಅಕ್ಕನನ್ನು ಎತ್ತಿಕೊಂಡು ಹೋಗಿ ಮಲಗುತ್ತಿತ್ತು. ಅಲ್ಲಿಗೆ ಬಂದವರನ್ನು ಸಾಯಿಸದೆ ಬಿಡುತ್ತಿರಲಿಲ್ಲ. ಆದರೆ ನೀನು ಎಲ್ಲರಿಗಿಂತ ಧೈರ್ಯಶಾಲಿ. ನೀನು ಹೋಗಿ ನಮ್ಮಕ್ಕನನ್ನು ಅದರ ಬಂಧನದಿಂದ ಬಿಡಿಸಿಕೊಂಡು ಬಂದಿರುವೆ. ನಾವು ನಿನ್ನನ್ನು ಬಿಡುವುದಿಲ್ಲ. ನಮ್ಮೆಲ್ಲರನ್ನು ನೀನು ಮದುವೆಯಾಗಬೇಕು."

ಅವರು ಅವನಿಗೆ ಹೇಳಿದರು. "ನಮ್ಮನ್ನು ಸಾಲಾಗಿ ನಿಲ್ಲಿಸು. ಐದು ಜನರ ತಲೆಗಳನ್ನು ಒಂದೇ ಏಟಿಗೆ ಕತ್ತರಿಸು. ಆಗ ನಿಮ್ಮ ತಂದೆಯ ಕನಸು ನಿಜವಾಗುತ್ತದೆ. ಅದೇ ರೀತಿ ನಮ್ಮನ್ನು ಬದುಕಿಸಲು ನಾಗಮಣಿಯಿಂದ ಗಿಳಿಯನ್ನು ಹೊಡೆದಾಗ ನಾವು ಮೊದಲಿನ ರೂಪ ಪಡೆಯುತ್ತೇವೆ."

ರಾಜಕುಮಾರ ತಾನು ಕಷ್ಟ ಪಟ್ಟಿದ್ದಕ್ಕೂ ಸಾರ್ಥಕವಾಯಿತು ಎಂದು ತಿಳಿದು ಸಂತೋಷ ಪಟ್ಟ. ಅವರೆಲ್ಲರನ್ನು ಮೊದಲಿನ ಅಜ್ಜಿಯ ಮನೆಗೆ ಕರೆದುಕೊಂಡು ಹೋದ. ಆದರೆ ಅವಳು ಒಂದು ಆಸೆ ಪಟ್ಟಳು. ತನ್ನ ಅಕ್ಕನ ಜೊತೆ ಇರಲು ಅಪೇಕ್ಷೆ ಪಟ್ಟಳು. ರಾಜಕುಮಾರ ನಾಗಮಣಿಯನ್ನು ಭಕ್ತಿಯಿಂದ ಪೂಜಿಸಿದ. ಆಗ ಗರುಡ ಕಾಣಿಸಿಕೊಂಡಿತು. ಅದು ಅಜ್ಜಿಯನ್ನು ಅವಳ ಅಕ್ಕನ ಮನೆಗೆ ಹೊತ್ತುಕೊಂಡು ಹೋಯಿತು.

ರಾಜಕುಮಾರ ರಾಜಕುಮಾರಿಯರೊಂದಿಗೆ ರಾಜ್ಯಕ್ಕೆ ಪ್ರಯಾಣ ಬೆಳೆಸಿದ. ಅರಮನೆಗೆ ಬಂದ. ಅವನ ತಂದೆ "ನಾನು ನನ್ನ ಕನಸನ್ನು ನಿಜ ಮಾಡು ಎಂದು ಹೇಳಿದೆ. ನೀನು ನಿನ್ನ ಸ್ವಂತಿಕೆಯಿಂದ ಈ ರಾಜಕುಮಾರಿಯರನ್ನು ಸಂಪಾದಿಸಿರುವೆ" ಎಂದು ಹೇಳಿ ಮೆಚ್ಚಿಕೆಯಿಂದ ಮಗನ ಬೆನ್ನು ತಟ್ಟಿದ. ನಂತರ ರಾಜಕುಮಾರ ಐವರನ್ನು ಸಾಲಾಗಿ ನಿಲ್ಲಿಸಿ ತನ್ನ ಖಡ್ಗದಿಂದ ಒಂದೇ ಸಾರಿ ಅವರ ತಲೆ ಕತ್ತರಿಸಿದನು. ಅದೇ ಕ್ಷಣ ಅದ್ಭುತವೆಂಬಂತೆ ರಾಜನ ಕನಸು ಅವನ ಕಣ್ಮುಂದೆ ಬಂದು ನಿಂತಿತು. ಅದೇ ಮರ; ಹಸಿರು, ಕೆಂಪು, ಹೊನ್ನ ಬಣ್ಣದಿಂದ ಮರ ಮತ್ತು ಗಿಳಿ.

ರಾಜಕುಮಾರ ಈಗ ನಾಗಮಣಿಯಿಂದ ಗಿಳಿಗೆ ಹೊಡೆದಾಗ ರಾಜಕುಮಾರಿಯರು ಮೊದಲಿನ ರೂಪದಲ್ಲಿ ಕಾಣಿಸಿಕೊಂಡರು. ರಾಜ ದಂಗಾಗಿ ನೋಡಿದ! ರಾಜ ಬಹಳ ವೈಭವದಿಂದ ತನ್ನ ಮಗನ ಮದುವೆಯನ್ನು ಐದು ಜನ ರಾಜಕುಮಾರಿಯರ ಜೊತೆ

ನೆರವೇರಿಸಿ, ತನ್ನ ರಾಜ್ಯವನ್ನು ಅವನಿಗೆ ವಹಿಸಿದ. ಆ ಯುವರಾಜ ಚೆನ್ನಾಗಿ ಆಡಳಿತ ನಡೆಸುತ್ತಾ ಎಲ್ಲರನ್ನು ಸುಖವಾಗಿ ನೋಡಿಕೊಂಡ. ಅದೇ ರೀತಿ ಮಂದಬುದ್ಧಿಯ ಮೂರ್ಖ ಅಣ್ಣಂದಿರನ್ನೂ ನೋಡಿಕೊಂಡ. ಎಲ್ಲರೂ ಬಹಳ ವರ್ಷ ಸುಖ ಸಂತೋಷದಿಂದ ಬಾಳಿದರು.

# ಕಲ್ಕಿ

**– ಕುವೆಂಪು**

ನಿದ್ದೆಯ ಲೋಕದಿ ಕನಸಿನ ಬೀದಿ,
ತಿರುಗಿದೆ, ತೊಳಲಿದೆ, ತಪ್ಪಿತು ಹಾದಿ !
ಮುಂದೆ ಕಾಣಿಸಿತೊಂದು ಅರಣ್ಯ,

ಅನಂತವಾದುದು ವನ ವಿಸ್ತೀರ್ಣ,
ಹೆಮ್ಮರಗಳು ಕಿಕ್ಕಿರಿದವು ಅಲ್ಲಿ,
ಬಿಡುವಿಲ್ಲದೆ ಹೆಣೆದಿದ್ದವು ಬಳ್ಳಿ:
ಮುಳ್ಳಿನ ಪೊದೆಗಳು ಗರಗಸವಳ್ಳಿ,
ಪ್ರೇತದಂತೆ ಪಾಪಾಸಿನ ಕಳ್ಳಿ !

ನುಗ್ಗಿದೆ ನಾನಾ ಹಳುವಿನಲಿ,
ಆ ಕನಸಿನ ಹೆಗ್ಗಾಡಿನಲಿ,

ಅಲ್ಲಿದ್ದುದು ಬೆಳಕೆಂಬುವುದಲ್ಲ,
ಕತ್ತಲು ಅಲ್ಲ !
ಬೆಳಕೋ ಕತ್ತಲೋ ಶಿವನೇ ಬಲ್ಲ !
ಶಿವನೇ ಬಲ್ಲ !

ಪ್ರೇತಗಳಂದದಿ ಭೀತಿಯ ಛಾಯೆ
ಸುಳಿಸುಳಿದಾಡಿತು ಅಲ್ಲಿ,
ಆ ಘೋರ ಕಾನನದಲ್ಲಿ !

ನಡೆದೇ ನಡೆದೇ ನಡೆದೂ ನಡೆದೆ.
ಸಾಹಸ ಬಿಡದೆ ಎದೆಗೆಡದೆ.
ಸುತ್ತಲು ಮೌನ !
ಸ್ಮಶಾನ ಮೌನ !
ಕಾಡನು ದಾಟಿದೆ: ಮುಂಗಡ ಬೆಟ್ಟ:
ಶಿಖರವೊ ನಿಂತಿದೆ ಮುಗಿಲಿನ ಮುಟ್ಟ !

ಹತ್ತೀ ಹತ್ತೀ ಹತ್ತೀ ಹತ್ತೀ,

ಕಡೆಯಲಿ ಸಿಕ್ಕಿತು ನಡುನೆತ್ತಿ !
ನೋಡಿದೆನಲ್ಲಿ,
ನಡುನೆತ್ತಿಯಲಿ !–

ಯಾವುದೊ ಊರು ? ಆ ಊರು ?
ಬರಿ ಮಾಯದ ಊರು !
ಧನಿಕರ ಮನೆ ಒಂದೆಡೆ ನಿಂತಿದೆ,
ಬಡವರ ಗುಡಿಸಲು ಒಂದೆಡೆ ನಿಂತಿದೆ,

ಜ್ಯೋತಿಯ ಮಣಿದೀಪಗಳಲ್ಲಿ ;
ಕತ್ತಲು ಕಗ್ಗತ್ತಲು ಇಲ್ಲಿ !
ಹಾಡಿನ ನುಣ್ದನಿಯತ್ತ,
ಗೋಳಿನ ನೀಳ್ದನಿಯತ್ತ

ಕೂಳನು ಹೆಮ್ಮೆಗೆ ಬಿಸುಡುವರಲ್ಲಿ
ಹೊಟ್ಟೆಗೆ ಇಲ್ಲದೆ ಕೊರಗುವರಿಲ್ಲಿ !
ಆ ಕಡೆ ಉದ್ಯಾನ
ಈ ಕಡೆ ಸ್ಮಶಾನ !

ಪೀತಾಂಬರಗಳ ಹೊದೆಯುವರಲ್ಲಿ,
ಕೌಪೀನಕೆ ಚಿಂದಿಯು ಸಿಗದಿಲ್ಲಿ !
ನೋಡುತ ನೋಡುತ ನೋಡುತ್ತಿದ್ದೆ;
ನೋಡುತ್ತಿರೆಯಿರೆ ಬೆಚ್ಚಿ ಬಿದ್ದೆ :
ಬಡಬಗ್ಗರ ಜಠರಾಗ್ನಿಯು ಎದ್ದು
ಗುಡಿಸಿಲುಗಳಿಗೇ ಬೆಂಕಿಯು ಬಿದ್ದು

ಧಗಧಗ ಧಗಧಗ ಹೊತ್ತಿದುದು
ಭುಗಿಭುಗಿಲೆನ್ನುತ ಮುತ್ತಿದುದು!
ಮುಗಿಲಿನ ವರೆಗೂ ಬಾನಿನವರೆಗೂ

ದಿಕ್ಕು ದಿಕ್ಕುಗಳ ಜುಟ್ಟಿನವರೆಗೂ
ಬಡವರ ಬೆಂಕಿಯು ನಾಲಗೆ ಚಾಚಿ !

ಶ್ರೀಮಂತರನಪ್ಪಿತು ಬಾಚಿ !
ಬಡವರ ಸಿಟ್ಟದು ಏನು ಪಿಶಾಚಿ ?
ಬಡಬಾಗ್ನಿಯೆ ತಲೆತಗ್ಗಿತು ನಾಚಿ !
ಶ್ರೀಮಂತರ ಸೌಧಂಗಳ ನೆತ್ತಿ
ಸಿದುದು ಬಡಹೊಟ್ಟೆಯ ಉರಿಹತ್ತಿ !
ದೂರದ ಆ ಗಿರಿಶಿಖರದ ಮೇಲೆ
ನನಗೂ ತಟ್ಟಿತು ಬೆಂಕಿಯ ಜ್ವಾಲೆ !
ಕೇಳಿಸಿತೊಡನೆಯೆ ಹಾಹಾಕಾರ !

ಮಕ್ಕಳು ಮರಿಗಳ ಚೀತ್ಕಾರ !
ಗರ್ಭಿಣಿ ಸ್ತ್ರೀಯರು, ಬಾಣಂತಿಯರು;
ನವ ವಧುಗಳು ಮೇಣ್ ಶ್ರೀಮಂತೆಯರು;
ಹುಡುಗರು, ಮುದುಕರು, ಕುಂಟರು, ಕಿವುಡರು :
ಬಡವರ ಗೋಳನು ಕೇಳದ ಕಿವುಡರು :
ಹೊಟ್ಟೆಯ ಪಾಡಿಗೆ ಕಾವಿಯನ್ನುಟ್ಟು
ಬಡವರ ಹಸಿವಿಗೆ ಮೌಢ್ಯವ ಕೊಟ್ಟು

ಸುಖಸಂಪತ್ತನು ಕೊಂಡವರು
ಮೃಷ್ಟಾನ್ನವನೇ ಉಂಡವರು ;
ಗುರುಗಳು, ಶಿಷ್ಯರು, ಮನೆಗಳು, ಮಠಗಳು,
ಎಲ್ಲರು ಬೆಂದರು ಬಡಬಾಗ್ನಿಯಲಿ,
ಬಡವರ ಬಗ್ಗರ ಜಠರಾಗ್ನಿಯಲಿ !
ಬಡವರ ಜಠರಾಗ್ನಿಯೆ ಬಡಬಾಗ್ನಿ !
ಬಡವನೆ ಕಲಿಯುಗದಂತ್ಯದ ಕಲ್ಕಿ !

ನೋಡುತಲಿದ್ದೆ !
ನೋಡುತಲಿದ್ದೆ !
ಕಣ್ಣರೆಯಾಯಿತು ಆ ದೃಶ್ಯ !

ಏನಿದು ಈ ದೃಶ್ಯ ?
ರಕ್ತದ ಜಲಪಾತ !
ನರಮಾಂಸದ ನಾತ !

ಧುಮುಧಮುಕುತಲಿದೆ ರಕ್ತದ ರಣಧುನಿ !
ಹೊರ ಹೊಮ್ಮುತ್ತಿದೆ ನರರಾರ್ತಧ್ವನಿ !
ಗಗನವು ರಕ್ತ ! ಭೂಮಿಯು ರಕ್ತ !
ನೋಡಿದರೆತ್ತಲು ರಕ್ತ ! ರಕ್ತ !
ಅಯ್ಯೋ ರಕ್ತ !
ಧುಮುಕುವ ಶೋಣಿತ ಗಿರಿಝರಿಯಲ್ಲಿ

ನರ ರುಂಡಗಳು
ನರ ಮುಂಡಗಳು
ಮುಂಗಾರ್ಗಾಲದ ಬಲ್ಸರಿಯಲ್ಲಿ
ಆಲಿಯ ಕಲ್ಲುಗಳುರುಳುರುಳ್ವಂತೆ

ಧುಮುಕುತಲಿರುವುವು ! ಬಂಡೆಗಳಂತೆ
ಧುಡುಂ ಧುಡುಂ ಧುಘುಮ್ಮನೆ ಬಿದ್ದು
ಹಾರುತಲಿರುವೆ ಬಿಸಿನೆತ್ತರು, ಸದ್ದು !
ಸುಂದರಿಯರ ತಲೆಮುಂಡೆಗಳು,
ಶ್ರೀಮಂತರ ನೆಣದುಂಡೆಗಳು,
ಪಾಪದ ದೇಹ, ಪುಣ್ಯದ ದೇಹ,
ಗುಡಿಗೋಪುರಗಳು, ಧರ್ಮದ ಗೇಹ,
ತೇಲಿ, ತೇಲಿ, ತೇಲಿ, ತೇಲಿ,
ನುಗ್ಗತಲಿವೆ ಕಸಕಡ್ಡಿಯ ಹೋಲಿ !
ಯಾರವನಲ್ಲಿ ? ದೂರದಲಿ,
ಧಾವಿಸಿ ಬರುವನು ಕ್ರೌರ್ಯದಲಿ !
ಅಸ್ಥಿಪಂಜರದಶ್ವವನೇರಿ,
ಬೆಳ್ಳಗೆ ಚಿಲಿಯುವ ದಾಡೆಯ ತೋರಿ,
ಅಸ್ಥಿಪಂಜರದಾಳವನು !
ಪ್ರೇತಸ್ವರೂಪಿ ಅದಾರದವನು ?

ಬಲಗಡೆ ಕೈಯಲಿ ಮಿಂಚಿನ ಕತ್ತಿ !
ಬಡಗಡೆ ಕೈಯಲಿ ಸಿಡಿಲಿನ ಬುತ್ತಿ !
ಎಲುಬಿನ ಕುದುರೆ ! ಎಲುಬಿನ ಆಳು !
ಇವನೆಯೆ ಕಲ್ಕಿ ? ಬಡವರ ಬಾಳು ?
ಮೂರ್ತಿವೆತ್ತಿಹ ಬಡವರ ಗೋಳು !
ನೋಡುತಲಿದ್ದೆ,
ಕೇಳುತಲಿದ್ದೆ !

“ಹಸಿವೇ ! ದಾಹ !” ಎನ್ನುತ ಬಂದು,
“ರಕ್ತಾ ! ರಕ್ತಾ ! ರಕ್ತಾ !” ಎಂದು
ನೆತ್ತರು ಹೊಳೆಯಲಿ ಧುಮುಕಿದನು,
ಕುಡಿದನು ರಕ್ತವ ಮೊಗೆಮೊಗೆದು,
ತಿಂದನು ತಲೆಗಳ ತೆಗೆತೆಗೆದು !
ಎಲುಬಿನ ಕುದುರೆಯು ಕೆನೆಯುತ್ತಿತ್ತು;
ನಾದವು ಬೊಮ್ಮನ ಬಿರಿವಂತಿತ್ತು!
ಎಲುಬಿನ ಮೂರ್ತಿಯು ಗಹಗಹಿಸಿತ್ತು;
ಗುಡುಗಿನ ಮಾಲೆಯ ಪೊರಮಡುತ್ತಿತ್ತು !
ಕುದುರೆಯು ಕುಡಿದೂ, ಆಳೂ ಕುಡಿದೂ,
ತಿಂದರು ಶವಗಳ ಲರಿಲರಿ ಕಡಿದೂ !
ಬತ್ತಿತು ರಣಧುನಿ : ಇನ್ನೂ ದಾಹ !
ಮುಗಿದುವು ಹೆಣಗಳು : ಇನ್ನೂ ಹಸಿವೆ !
ಬಡವರ ಗಂಟಲ ಬೇಗೆಯ ದಾಹ !
ಬಡವರ ಹೊಟ್ಟೆಯ ಬೆಂಕಿಯ ಹಸವೆ !

ತುಂಬದು ಹೊಟ್ಟೆ ;
ತುಂಬದೊ ಹೊಟ್ಟೆ !. . . .
ಕಟ್ಟೇ ! ಕಟ್ಟೇ !
ನೋಡಿದನ್ನೆನಂ ಬೆಟ್ಟದ ಮೇಲೆ !
ಬರುತಿಹನಯ್ಯೋ ! ಒಲ್ಲೇ ! ಒಲ್ಲೇ !
ನೋಡುತಲಿದ್ದೆ!
ಕಂಪಿಸಿ ಬಿದ್ದೆ !

"ಕಲ್ಕೀ ! ಕಲ್ಕೀ !" ಎನ್ನುತ ಚೀರಿ
ಕನಸೊಡೆದೆದ್ದೆ !
ಇನ್ನೆಲ್ಲಿಯ ನಿದ್ದೆ ?

# ಒಂದು ಹುಡುಗನಿಗೆ ಬಿದ್ದ ಕನಸು

**– ಬೆಸಗರಹಳ್ಳಿ ರಾಮಣ್ಣ (ಕಥೆ)**

ಇತ್ತೀಚೆಗೆ ಒಂದು ದಿನ ಹೀಗಾಯಿತು. ಸ್ಥಳ: ಭಾರತದ ಒಂದು ರಾಜ್ಯದ ಹಳೆಯ ನಗರ. ಹಳೆಯ ನಗರ ಎಂದಮೇಲೆ ಅನೇಕ ಗತಿಸಿಹೋದ ಸಾಮ್ರಾಜ್ಯಗಳ, ಈ ಸಾಮ್ರಾಜ್ಯಗಳ ವಂಶೀಕರ ಕತೆಗೋ ಇತಿಹಾಸಕ್ಕೋ ಸಂಬಂಧಿಸಿದಂತೆ ದೇವಸ್ಥಾನಗಳು, ಅರಮನೆಗಳು, ಗುರುಮನೆಗಳು ಇತ್ಯಾದಿಗಳನ್ನು ವಿಫುಲವಾಗಿ ಪಡೆದೋ ಅಥವಾ ಹಿಂದೆ 'ಹಾಗೆ ಇತ್ತು – ಹೀಗೆ ಇತ್ತು' ಎಂಬ ಮಾತಿಗೆ ವಸ್ತುವಾಗಿತ್ತು. ಈ ನಗರ ಈಗ ಹಾಳಾಗಿ ಹೋಗಿಲ್ಲ. ಬದುಕಿದೆ. ಇದು ಅನೇಕ ರಾಜವಂಶಸ್ಥರ ಮೂಲಸ್ಥಳ ಅಥವಾ ಅವರ ಮೂಳೆಗಳನ್ನು ಅಡಗಿಸಿಟ್ಟುಕೊಂಡು ಬುಸುಗುಡುತ್ತಿರುವ ಅನೇಕ ಸಮಾಧಿಗಳನ್ನು ಪಡೆದಿರುವ ಪವಿತ್ರ ಸ್ಥಳ ಎಂಬ ಪರಿಮಿತಿಯನ್ನೂ ಮೀರಿ ಬೆಳೆದಂತಹ ನಗರ. ಇಲ್ಲೊಂದು ವಿಶ್ವವಿದ್ಯಾನಿಲಯ, ಬೆಟ್ಟದ ಮೇಲೊಂದು ದೇವಾಲಯ, ಜೊತೆಗೆ ಒಂದು ಪ್ರಾಣಿ ಸಂಗ್ರಹಾಲಯ (Zoo Garden) ಮತ್ತು ಇನ್ನೂ ಅನೇಕ ಚಿಕ್ಕ ಆಕರ್ಷಣೆಗಳಿಗೂ ಉಂಟು.

'ಇತ್ತೀಚೆಗೆ ಒಂದು ದಿನ ಹೀಗಾಯಿತು' ಎಂದು ಹೊರಟು ಏನನ್ನೋ ಹೇಳುತ್ತಾ ಹೋಗುವುದು ನಮ್ಮ ಸಾಮಾಜಿಕ ಬದುಕಿನ ಅವಿಭಾಜ್ಯ ಅಂಗವಾದುದರಿಂದ, ಯಾರೂ ನನ್ನ ನಡೆಯನ್ನು ಟೀಕಿಸುವುದಿಲ್ಲ ಎಂಬ ಖಾತ್ರಿಯಿಂದ ಈಗ ಸರಿಯಾಗಿ ವಿಷಯಕ್ಕೆ ಬರುತ್ತೇನೆ.

## 2

ಹಳೆಯ ನಗರದ ಸುತ್ತಮುತ್ತ ಅನೇಕ ತಾಲ್ಲೂಕು ಕೇಂದ್ರಗಳು. ಬೆರಳಲ್ಲಿ ಎಣಿಸಬಲ್ಲ ಜಲ್ಲಾಕೇಂದ್ರಗಳು, ಅಸಂಖ್ಯಾತ ಹಳ್ಳಿಗಳೂ ಉಂಟು. ಈ ಅಸಂಖ್ಯಾತ ಹಳ್ಳಿಗಳಲ್ಲಿ ಒಂದು ಹಳ್ಳಿಯ ಸಂಸಾರದಲ್ಲಿ ಹೀಗಾಯಿತು. ಈ ಸಂಸಾರದಲ್ಲಿ ತಂದೆ–ತಾಯಿ, ಅಣ್ಣ–ತಂಗಿ ಇಷ್ಟೇ. ಕುಟುಂಬ ಯೋಜನೆಯ ಮಿತಿಯನ್ನು ಮೀರಿದ, ರಾಷ್ಟ್ರದ ಜನ ನಿಯಂತ್ರಣ ನೀತಿಗೆ ಬದ್ಧವಾದ ಕುಟುಂಬ. ತಂದೆಗೆ ಸುಮಾರು ನಲವತ್ತನಾಲ್ಕು ವರ್ಷಗಳು; ತಾಯಿಗೆ ಇಪ್ಪತ್ತೆಂಟೋ ಇಪ್ಪತ್ತೊಂಬತ್ತೋ ಎಂದಿಟ್ಟುಕೊಳ್ಳಿ. ಹುಡುಗನಿಗೆ ಹನ್ನೆರಡು ವರ್ಷಗಳು, ಹುಡುಗಿಗೆ ಆರು ವರ್ಷಗಳು.

ಹಳೆಯ ನಗರದ ಇತಿಹಾಸ ಕೇಳಿ ತಾಯಿಗೆ ತುಂಬ ಕುತೂಹಲ ಉಂಟಾಗಿ, ಮಗನನ್ನು ಪ್ರಚೋದಿಸಿ ತನ್ನ ಗಂಡ ಹಳೆಯನಗರಕ್ಕೆ ಸಂಸಾರ ಸಮೇತ ಭೇಟಿಕೊಡಲು ಒಪ್ಪಿಸಿದಳು.

ಇಡೀ ಕುಟುಂಬ ಬಸ್ಸಿನಲ್ಲಿ ಬಂದು ಹಳೆಯ ನಗರದ ಬಸ್ ನಿಲ್ದಾಣದಲ್ಲಿ ಇಳಿಯಿತು. ಬಸ್ ನಿಲ್ದಾಣಕ್ಕೆ ಅಂಟಿಕೊಂಡಂತೆಯೇ ಬಾಣಕ್ಕೆ ತನ್ನ ಕೊಂಬುಗಳನ್ನು ನಿಗುರಿಸಿ ನಿಂತಿರುವ ಒಂದು ದೊಡ್ಡ ಭವನವನ್ನು ಕಂಡ ಮಕ್ಕಳು ಬೆರಗಾಗಿ ಹೋದುವು. ಹುಡುಗ ಕುತೂಹಲ ತಡೆಯದೆ ಪ್ರಶ್ನೆಗಳ ಮೇಲೆ ಪ್ರಶ್ನೆಗಳನ್ನು ಕೇಳತೊಡಗಿದ.

"ಅಪ್ಪಾ! ಅಪ್ಪಾ!! ಇದೇನಪ್ಪಾ...?"

"ಅರಮನೆ ಕಣೋ. ನಮ್ಮನ್ನು ಆಳುತ್ತಿದ್ದ ಅರಸರು ಇದ್ದ ಮನೆ."

"ಇಂಥ ಮನೇಲಿ ಎಷ್ಟು ಜನ ಇರಬೋದು. ಎಷ್ಟು ಜನ ಅರಸರು ಇದ್ದರು ಇಲ್ಲಿ..."

"ಹೋಗೋ ಕಮಂಗಿ! ಒಬ್ಬರೇ. ಇನ್ನೇನು ಒಂದು ರಾಜ್ಯಕ್ಕೆ ಒಂದು ಸಾವಿರ ರಾಜರು ಇರ್ತಾರೆ ಎಂದುಕೊಂಡ...." ಈ ಉತ್ತರದಿಂದ ಹುಡುಗನ ಉತ್ಸಾಹ ಕುಗ್ಗಬಹುದೆಂದು ಭಾವಿಸಿದ್ದ ಅಪ್ಪನ ನಿರೀಕ್ಷೆ ತಪ್ಪಾಯಿತು.

"ಒಂದು ರಾಜ್ಯಕ್ಕೆ ಒಬ್ಬ ರಾಜ ಸರಿ. ಆದರೆ ಅವನಿಗೆ ಲೆಕ್ಕವಿಲ್ಲದಷ್ಟು ಜನ ಹೆಂಡತೀರು ಇರಬೇಕು, ಅಲ್ವ?"

"ಹೂಂ! ನೂರಾರು ಜನದ ಅಂತಃಪುರವೇ ಉಂಟು." ಹುಡುಗರಿಗೆ ಅಪ್ಪನ ಈ ಉತ್ತರ ಸ್ವಲ್ಪ ಗೊಂದಲವನ್ನುಂಟುಮಾಡಿತು. ತಮ್ಮ ಅಪ್ಪನಿಗೆ ಅವ್ವ ಒಬ್ಬಳೇ ಹೆಂಡತಿ. ರಾಜನಿಗೇಕೆ ನೂರಾರು ಜನ ಹೆಂಡಂದಿರು? ಥೂ! ತುಂಬ ಕೆಟ್ಟ ರಾಜನಿರಬೇಕು. ಇತ್ಯಾದಿ ಅಭಿಪ್ರಾಯಗಳು ಮೂಡಿದರೂ ಈ ವಿಷಯವನ್ನು ಇಲ್ಲಿಗೇ ಮೊಟಕುಗೊಳಿಸಿ ಅರಮನೆಯನ್ನು ನೋಡಲು ಇಡೀ ಸಂಸಾರವೇ ಸರಸರನೆ ಹೆಜ್ಜೆ ಹಾಕಿತು. ಅಪ್ಪನಿಗೆ ಅರಮನೆಯ ನೋಟದಲ್ಲಿ ಅಷ್ಟೇನೂ ಕುತೂಹಲವಿರಲಿಲ್ಲ. ಅವ್ವ ಮತ್ತು ಮಕ್ಕಳು ರೆಪ್ಪೆ ಅಡಿಸದೆ ತೆರೆದ ಬಾಯಿ ಮುಚ್ಚದೆಯೇ ಅರಮನೆಯನ್ನು ನೋಡಿದರು. ಒಳಕ್ಕೆ ಹೋಗುವ ಬಾಗಿಲ ಬಳಿ ಕುದುರೆಗಳ ಮೇಲೆ ಕುಳಿತ ಬಂಧೂಕಧಾರಿ ಜನರನ್ನು ಕಂಡು ಸ್ವಲ್ಪ ಕಸಿವಿಸಿ ಎನ್ನಿಸಿ ಮನಸ್ಸಿನ ಒಳಗೊಳಗೇ ಬೆಚ್ಚಿದರೂ ಅರಮನೆಯ ವೈಭವಕ್ಕೆ ಮೆಚ್ಚಿ ತಲೆದೂಗಿದರು. ಹುಡುಗ ತಮ್ಮ ಮನೆಗೂ ಅರಮನೆಗೂ ಹೋಲಿಸಿ ಮನಸ್ಸಿನಲ್ಲಿಯೇ – ಇದ್ದರೆ ಇಂಥ ಅರಮನೆಯಲ್ಲಿರಬೇಕು ಎನ್ನಿಸಿ: ಒಂದಿಷ್ಟು ಕ್ಷಣಗಳು ತನ್ನ ಅಪ್ಪ-ಅವ್ವ 'ರಾಜ – ರಾಣಿ'ಯರಂತೆ ತಾನೂ ಮತ್ತು ತನ್ನ ತಂಗಿ ರಾಜಕುಮಾರ–ರಾಜಕುಮಾರಿ ಎಂದು ಭ್ರಮಿಸಿ ಆನಂದಿಸಿದ. ಕಲ್ಪನಾಲೋಕ ಅಳಿಸಿಹೋದಮೇಲೆ ಕೇಳಿದ: "ಅಪ್ಪ, ಈ ಅರಮನೆಯನ್ನು ರಾಜರೇ ಕಟ್ಟಿದರೆ?"

"ಇಲ್ಲ ಕಣೋ ಜನರು ಕಟ್ಟಿದರು."

"ಯಾಕೆ?"

"ರಾಜಬೊಕ್ಕಸದಿಂದ ಜನರಿಗೆ ಕೂಲಿ ಕೊಟ್ಟು ದುಡಿಸಿ ಕಟ್ಟಿಸಿದರು."

"ರಾಜ ಬೊಕ್ಕಸಕ್ಕೆ ಹಣ ಎಲ್ಲಿಂದ ಬಂತಪ್ಪ?"

"ಜನರಿಂದ: ತೆರಿಗೆ ಅಂದರೆ ನಾವೆಲ್ಲ ಭೂಕಂದಾಯ ಕೊಡ್ತೀವಿ ನೋಡು ಶ್ಯಾನುಭೋಗರಿಗೆ; ಅಂಥ ದುಡ್ಡಿನಿಂದ!"

"ಅಂಗಾದ್ರೆ ಇದು ಜನರ ದುಡ್ಡಿನಿಂದ ಕಟ್ಟಿಸಿದ್ರು. ಅಂಗಾದ್ರೆ ಮತ್ತೆ ಇದು ಜನರದ್ದೇ ಆಯಿತಲ್ಲ; ರಾಜರದ್ದು ಹೇಗಾಯಿತಪ್ಪ!"

"ನೋಡೋ ಮಗ. ಮೆಲ್ಲಗೆ ಮಾತಾಡು. ದುಡ್ಡು ಯಾರದೇ ಆದ್ರೂ ಅರಮನೆ ರಾಜರ ಆಸ್ತಿ..."

"ಅಪ್ಪಾ! ರಾಜ ಬೆವರ ಸುರಿಸೋಲ್ಲ. ಇಂಥ ದೊಡ್ಡ ಮನೆ ಅಂದ್ರೆ ನನಗೆ ನಂಬೋಕೆ ಆಗೋಲ್ಲ. ನಮ್ಮ ಪುಸ್ತಕದಲ್ಲಿ ಬಸವಣ್ಣನವರು: 'ಕಾಯಕವೇ ಕೈಲಾಸ' ಎಂದು ಹೇಳವರಲ್ಲ."

ಮಗನ ಈ ಪ್ರಶ್ನೆಗಳು ತುಂಬ ಜಟಿಲತೆಯ ಕಡೆ ಒಯ್ಯುತ್ತಿರುವುದನ್ನು ಗಮನಿಸಿದ ಅಪ್ಪ ವಿಷಯವನ್ನೇ ಬದಲಾಯಿಸಿಬಿಟ್ಟ: "ಲೋ! ಅರಮನೆ ವಿಷಯ ಈಗ ನಮಗ್ಯಾಕೋ! ರಾಜರ ಕಾಲ ಮುಗಿಯಿತು. ಈಗ ನಮ್ಮ ದೇಶದಲ್ಲಿರೋದು ನಮ್ಮ ರಾಜ್ಯ!"

'ನಮ್ಮ ರಾಜ್ಯ' ಎಂಬ ಪದ ತನ್ನ ಕಿವಿಯ ಮೇಲೆ ಬಿದ್ದುದೇ ತಡ ಹುಡುಗ ಖುಷಿ ಆಗಿಹೋದ: "ಹಂಗಾದ್ರೆ ಈ ಅರಮನೆ ನಮ್ಮದು! ನೀನು ರಾಜ. ಅವ್ವನೇ ರಾಣಿ; ನಾವಿಬ್ಬರೂ ರಾಜಕುಮಾರ, ಕುಮಾರಿಯರು" ಎಂದು ಠೀವಿಯಿಂದ ಎದೆ ಉಬ್ಬಿಸಿ ಮೀಸೆ ತಿರುಗಿಸುವವನಂತೆ ನಟಿಸಿ: "ಭಲಾ ಭಲಿರ ಭುವನ ಈ ಧರೆಯೊಳು ಎನಗೆ ಸಮಾನರಾರು ಇಹರೈ..... ಮಂತ್ರಿವರ್ಯ. ನಮ್ಮ ರಾಜ್ಯದಲ್ಲಿ ಮಳೆಬೆಳೆಗಳು ಚೆನ್ನಾಗಿ ಕಾಲ ಕಾಲಕ್ಕೆ ಆಗುತ್ತಿರುವುವೋ ತಿಳಿಸುವಂತನಾಗು" ಎಂದು ಗ್ರಾಮ್ಯನಾಟಕಗಳು ಅವನ ಮೇಲೆ ಮಾಡಿರುವ ಪರಿಣಾಮವನ್ನು ಅಭಿನಯಿಸಿ ತೋರಿಸಿಯೇ ಬಿಟ್ಟ. ಅವನ ತಂಗಿ ಖುಷಿಪಟ್ಟು ಬಿದ್ದು ಬಿದ್ದು ನಕ್ಕುಬಿಟ್ಟಳು. ಅಪ್ಪ-ಅವ್ವನಂತೂ ಮಗನ ಪ್ರತಿಭಾ ಪ್ರದರ್ಶನಕ್ಕೆ ಖುಷಿಪಟ್ಟಿದ್ದೇ ಪಟ್ಟಿದ್ದು. ಅಪ್ಪ ಸರ್ರನೆ ಮತ್ತೆ ವಿಷಯಕ್ಕೆ ಬಂದುಬಿಟ್ಟ: "ಲೋ! ಕೋತಿ, ನಮ್ಮ ರಾಜ್ಯ ಅಂದ್ರೆ ನಮ್ಮ ಮನೆದಲ್ವೋ! 'ಜನರ ರಾಜ್ಯ' ಅಂತ. ನೀನು ಇಷ್ಟು ದಡ್ಡ ಅಂತ ನಾನು ತಿಳ್ಕೊಂಡಿರಲಿಲ್ಲ. ದಡ್ಡ ಕಣೋ ನೀನು. ಪ್ರತಿ ವರ್ಷ ಆಗಸ್ಟ್ ಹದಿನೈದನೇ ತಾರೀಕು ನಾವು ಏನನ್ನ ಆಚರಿಸುತ್ತೀವಿ? ಹೇಳುವಂತೆ. ನಿನ್ನ ಬುದ್ಧಿವಂತಿಕೆ ಬೇಳೆಕಾಳೆಲ್ಲ ಗೊತ್ತಾಯ್ತದೆ!"

"ಆಗಸ್ಟ್ ಹದಿನೈದನೇ ತಾರೀಖ.... ಹಾ! ಓ ಓ! ಅದು ಏನಪ್ಪಾ ಅಂದ್ರೆ ಸ್ವತಂತ್ರ ದಿನಚಾರಣೆ... ಅಲ್ವಾ!"

"ರೈಟ್! ಅವತ್ತಿನಿಂದ ಪರಂಗಿಯೋರು ನಮ್ಮ ದೇಶದಿಂದ ತೊಲಗೋದ್ರು. ಈ ಅರಮನೆ ರಾಜರೆಲ್ಲ ಮೂಲೆ ಸೇರಿದ್ದು. ನಮ್ಮ ದೇಶಕ್ಕೆ ಸ್ವತಂತ್ರ ಬಂತು. ಇದನ್ನು ಪಡೀಬೇಕಾದ್ರೆ ತಿಲಕ್, ಮಹಾತ್ಮ ಗಾಂಧಿ, ಪಟೇಲ್, ರಾಜೇಂದ್ರ ಪ್ರಸಾದ್ ಇನ್ನೂ ಲಕ್ಷ ಲಕ್ಷ ಜನ ಹೋರಾಡಿದರು. ಜೈಲು ಅನುಭವಿಸಿದರು. ಎಷ್ಟೋ ಜನ ಗುಂಡಿಗೆ ಬಲಿಯಾದರು; ಗಲ್ಲಿನ ನೇಣುಗಂಬಗಳಿಗೆ ತಲೆ ಒಡ್ಡಿದರು... ನಿನಗೆ ಆವತ್ತು ಹೇಳಲಿಲ್ವ? ಭಗತ್ ಸಿಂಗ್, ರಾಜಗುರು, ಸುಖದೇವ್, ಚಂದ್ರಶೇಖರ ಆಜಾದ್ ಆಮೇಲೆ ಮದನ್‌ಲಾಲ್ ಡಿಂಗ್ರ;

ಜಲಿಯನ್ ವಾಲಾಬಾಗ್ ಪ್ರಕರಣ ಎಲ್ಲಾನೂ... ನೋಡು ಅಲ್ಲಿ ಏನು ಕಾಣಿಸ್ತಾ ಅದೆ ಅಂತ" ಎಂದು ಅಪ್ಪ ಅರಮನೆಯ ಮುಂಭಾಗದಲ್ಲಿ ಸುಮಾರು ಒಂದು ಫರ್ಲಾಂಗ್ ದೂರದಲ್ಲಿ ಒಂದು ಮಂಟಪದ ಕೆಳಗೆ ಪ್ರತಿಷ್ಠಾಪನೆ ಮಾಡಿರುವ ಒಂದು ವಿಗ್ರಹದ ಕಡೆ ಕೈತೋರಿಸಿದ.

"ಯಾವುದೋ ದೇವರ ಮಂಟಪ ಇರಬೇಕು!"

"ನಿನ್ನ ತಲೆ ನಡಿ. ಅಲ್ಲೊಂದು ನಯವಾದ ಅಮೃತದ ಕಲ್ಲಿನ ಮೇಲೆ ಕನ್ನಡದಲ್ಲಿ ಇಂಗ್ಲಿಷಿನಲ್ಲಿ ಆ ಮಂಟಪಾನ್ನ, ವಿಗ್ರಹಾನ ಯಾಕೆ, ಯಾವತ್ತು ಕಟ್ಟಿಸಿದರು ಅಂತ ಕೆತ್ತು ನಿಲ್ಲಿಸವ್ರೆ. ಓದಿ ತಿಳ್ಕೋವಂತೆ"

ಇದ್ದಕ್ಕಿದ್ದಂತೆಯೇ ಪ್ರಸ್ತಾಪಕ್ಕೆ ಬಂದ ಈ ವಿಷಯದಿಂದ ತಾಯಿ–ಮಕ್ಕಳ ಎದೆಯಲ್ಲಿ ಹೊಸ ಉತ್ಸಾಹ, ಕುತೂಹಲ 'ಭುಗಿಲ್' ಎಂದು ಉರಿಯತೊಡಗಿದವು. ಸರಸರನೆ ಮಂಟಪದ ಕಡೆ ಹೆಜ್ಜೆ ಹಾಕಿ ಅದರ ಮುಂದೆ ನಿಂತರು; ನೋಡಿದರು. ಅದು ಒಂದು ಹುಡುಗ ಗಾಂಧಿ ಟೋಪಿಯನ್ನು ಹಾಕಿಕೊಂಡು, ದಾಪುಗಾಲು ಹಾಕಿಕೊಂಡು, ಕೈಯಲ್ಲಿ ಬಾವುಟ ಹಿಡಿದುಕೊಂಡು ನಿಂತಿರುವ ವಿಗ್ರಹ. ಅದರ ಪಕ್ಕದಲ್ಲೆ ಅಮೃತಶಿಲೆಯ ಮೇಲೆ ಹೀಗೆ ಬರೆದಿತ್ತು. ಅಪ್ಪ ಓದಲು ಯತ್ನಿಸಿದ. ಹುಡುಗ ನಾನೇ ಓದಿ ತಿಳಿಸುವುದಾಗಿ ಓದತೊಡಗಿದ: "ಈ ಸ್ಮಾರಕದ ಹಿಂದೆ ನಮ್ಮ ದೇಶದ ಸ್ವಾತಂತ್ರ್ಯ ಹೋರಾಟದ ಕತೆಯ ಮೈನವಿರೇಳುವ ಘಟನೆ ಇದೆ. ಈ ವಿಗ್ರಹ: ಕರುಣಾಕರ ಎಂಬ ಹುಡುಗನದು. ಮಹಾತ್ಮ ಗಾಂಧಿಯವರು:– 'ಬ್ರಿಟಿಷರೇ, ಭಾರತವನ್ನು ಬಿಟ್ಟು ತೊಲಗಿ' ಎಂದು ಕರೆ ಕೊಟ್ಟಾಗ, ಸ್ವಾತಂತ್ರ್ಯ ಹೋರಾಟದ ಮುಂಚೂಣಿಯಲ್ಲಿದ್ದ ಕಾಂಗ್ರೆಸ್ ಪಕ್ಷದ ಧ್ವಜವನ್ನು ಅರಮನೆಯ ಗೋಪುರದ ಮೇಲೆ ಹಾರಿಸಲೆಂದು ಹೊರಟಿದ್ದ ಜನರ ಗುಂಪನ್ನು ಬ್ರಿಟಿಷ್ ಹಾಗೂ ದೇಶೀಯ ರಾಜರ ಪೊಲೀಸ್ ಪಡೆಗಳು ತಡೆದು ಲಾಠೀಪ್ರಹಾರ ಮಾಡಿದರು. ರಕ್ತ ಚೆಲ್ಲಿ ಅನೇಕರು ಮೂರ್ಛೆ ಹೋದರು. ಆದರೆ ಒಬ್ಬ ದಿಟ್ಟ ಹುಡುಗ ಅಸಾಧಾರಣ ಧೈರ್ಯದಿಂದ ಬಾವುಟವನ್ನು ಹಿಡಿದುಕೊಂಡು ಪೊಲೀಸರ ಕಣ್ಣು ತಪ್ಪಿಸಿ ಅರಮನೆಯ ಅರಮನೆಯ ಕಡೆ ಓಡತೊಡಗಿದಾಗ ಬ್ರಿಟಿಷ್ ಸೈನಿಕರ ಗುಂಡುಗಳ ಸುರಿಮಳೆಗೆ ತುತ್ತಾಗಿ ಇಲ್ಲಿ ಪ್ರಾಣಬಿಟ್ಟ. ಪರತಂತ್ರದಿಂದ ನಮ್ಮ ವಿಶಾಲ ದೇಶ ಬಿಡುಗಡೆ ಹೊಂದಿ, ನಮ್ಮ ಜನರೆಲ್ಲ ಹಸಿವಿನಿಂದ, ಬಡತನದಿಂದ, ಅಜ್ಞಾನದಿಂದ, ಅನಕ್ಷರತೆಯಿಂದ ವಿಮುಕ್ತರಾಗಿ ಜೊತೆಗೆ ತಮ್ಮ ತಮ್ಮ ಅಭಿಪ್ರಾಯಗಳನ್ನು ಯಾವ ಭೀತಿ ಇಲ್ಲದೆಯೇ ವ್ಯಕ್ತಪಡಿಸಲು ಕರುಣಾಕರನಂತ ಅಸಂಖ್ಯಾತ ಜನ ತಮ್ಮ ರಕ್ತವನ್ನು ಇಲ್ಲಿ ಚೆಲ್ಲಿದ್ದಾರೆ. ದೇಶದ ಮೂಲೆ ಮೂಲೆಯಲ್ಲೂ ಕರುಣಾಕರನಂತ ಬಾಲಕರು ಬಲಿದಾನ ಮಾಡಿದ್ದಾರೆ. ಕರುಣಾಕರ ಸದಾ ನಮ್ಮ ಯುವಕರ ಶಕ್ತಿಯ ಸಂಕೇತ."

ಹುಡುಗ ಓದಿ ಮುಗಿಸಿದಾಗ ಅವನ ಕಣ್ಣಾಲಿಗಳು ನೀರಿನಲ್ಲಿ ಮುಳುಗಿ, ಗಂಟಲಿನಿಂದ ಸದ್ದು ಸ್ಪಷ್ಟವಾಗಿ ಹೊರಡುವುದೇ ಕಷ್ಟವಾಯಿತು. ಅವನ ತಂಗಿಯಂತೂ ಬಿಕ್ಕಿ ಬಿಕ್ಕಿ ಅತ್ತುಬಿಟ್ಟಳು. ಅವ್ವ ಕರುಣಾಕರನ ವಿಗ್ರಹವನ್ನು ತನ್ನ ಮಗನ ವಿಗ್ರಹಕ್ಕಿಂತಲೂ ಹೆಚ್ಚು

ಪ್ರೀತಿಯಿಂದ ಮುಖವನ್ನು, ಧ್ವಜವನ್ನು ಹಿಡಿದು ನಿಂತಿರುವ ಅವನ ಕೈಗಳನ್ನು ನೇವರಿಸಿದಳು. ಹುಡುಗ ಧ್ವಜವನ್ನು ಅತ್ಯಂತ ಗೌರವದಿಂದ ಮುಟ್ಟಿ ಕಣ್ಣಿಗೊತ್ತಿಕೊಂಡ.

ಒಂದಷ್ಟು ನಿಮಿಷಗಳು ಅವರ ಸುತ್ತಲಿನ ವಾತಾವರಣ ಮೌನವಾಗಿತ್ತು. ಅಪ್ಪ ಹೇಳಿದ: "ತಿಳಿದುಕೊಂಡ್ಯಾ ನಮ್ಮ ಸ್ವಾತಂತ್ರ್ಯಕ್ಕೆ ಎಂಥೆಂಥವರು ತಮ್ಮ ಪ್ರಾಣವನ್ನು ಬಲಿಕೊಟ್ಟಿದ್ದಾರೆ ಅಂತ." ಹುಡುಗ 'ಹೂಂ' ಎನ್ನುವಂತೆ ತಲೆ ಆಡಿಸಿದ. ಅವ್ವ ಕಣ್ಣೊರಸಿಕೊಂಡಳು. ಹುಡುಗಿಯಂತೂ ಇನ್ನೂ ಬಿಕ್ಕುತ್ತಿದ್ದಳು.

ಅರಮನೆ ನೋಡಿದಾಗ ಮಕ್ಕಳಿಗಿದ್ದ ಉತ್ಸಾಹ ಕರುಣಾಕರನ ಸ್ಮಾರಕ ಮಂಟಪದಲ್ಲಿ ಅಳಿಸಿಹೋದುದನ್ನು ಕಂಡು, ತಾನು ಇವರಿಗೆ ಮೊದಲು ಪ್ರಾಣಿ ಸಂಗ್ರಹಾಲಯವನ್ನು ತೋರಿಸಿದ್ದರೆ ಅಲ್ಲಿರುವ ವಿಚಿತ್ರ ಜೀವಂತ ಪ್ರಾಣಿಗಳನ್ನು ಕಂಡು ತುಂಬ ಆನಂದಿಸಿ ಕುಪ್ಪಳಿಸುತ್ತಿದ್ದರು ಎನ್ನಿಸಿತು. ತನ್ನ ತಪ್ಪಿಗೆ ತಾನೇ ಒಳಗೊಳಗೆ ನಾಚಿಕೆಪಟ್ಟು "ಇನ್ನು ನಡೀರಿ ಜೂಗಾರ್ಡನ್‌ಗೆ ಹೋಗುವ. ಅಲ್ಲಿ ನಿಮಗೆ ಒಳ್ಳೆ ತಮಾಷೆ ಸಿಗ್ತದೆ" ಎಂದು ಮಂಟಪವನ್ನು ತ್ಯಜಿಸಿ ಭಾರವಾದ ಹೆಜ್ಜೆಗಳಿಂದ ಕಾಲುಹಾದಿಯಲ್ಲಿ ಜೂಗಾರ್ಡನ್ ಕಡೆ ಹೆಜ್ಜೆ ಹಾಕಿದರು.

ಹಿಂಗೆ ಒಂದು ಐದು ನಿಮಿಷ ನಡೆದಿರಬಹುದು. ಹುಡುಗನ ದೃಷ್ಟಿ ಒಂದು ವಿಶಾಲವಾದ, ವಿಚಿತ್ರವಾದ ಕಲ್ಲು ಹಾಗೂ ಸರಳುಗಳು ಎದ್ದು ಕಾಣುವ ಒಂದು ದೊಡ್ಡ ಕಟ್ಟಡದ ಮೇಲೆ ಬಿತ್ತು. ಅದರ ಮುಂದೆಯೇ ಒಂದು ಬೋರ್ಡನ್ನು ತೂಗಿಹಾಕಿತ್ತು. "ಬಂದಿಖಜಾನೆ.... Jail" ಎಂದು ಓದಿದ. "ಅಪ್ಪಾ! ಜೈಲಿನಲ್ಲಿ ಅಲ್ವ ಕಳ್ಳತನ ಮಾಡಿದೋರ ಕಾಡಿಹಾಕೋದು.... ಆಮ್ಯಾಲೆ ಗಲ್ಲಿಗೇರಿಸೋದು"

"ಹೂಂ! ಸುಮ್ಮನೆ ಬಾ ಮರಿ. ಅದೆಲ್ಲ ಯಾಕೆ ತಲೆ ಕೆಡಿಸ್ಕೋತಿ" ಎಂದು ಅಪ್ಪ ಜೈಲಿನ ಸುದ್ದಿ ಎತ್ತುತ್ತಲೇ ಬೇಸರದಿಂದ ಉತ್ತರಿಸಿದ.

## 3

'ಜೂಗಾರ್ಡನ್ನು' ಹೊಕ್ಕಿದುದೇ ತಡ ಮಕ್ಕಳಿಗೆ ಒಂದು ಹೊಸ ಪ್ರಪಂಚವನ್ನೇ ಕಂಡಂತಾಯಿತು. ಹಾವು, ಮೊಲ, ವಿಚಿತ್ರಪಕ್ಷಿಗಳು, ನರಿ, ತೋಳ, ಕರಡಿ, ಜಿರಾಫೆ, ನೀರುದ್ಗುರೆ, ಮೊಸಳೆ, ಹಲಿ, ಸಿಂಹ, ಒಂಟೆ, ಆನೆ, ಅವುಗಳ ಮರಿ, ಚಿರತೆ ಮತ್ತು ಅದರ ಕುಟುಂಬ, ವಿಚಿತ್ರ ಕೋತಿಗಳು, ಕಾಡುಮನುಷ್ಯ... ಒಂದೇ ಎರಡೇ. ಹುಡುಗನಿಗೆ ಕರುಣಾಕರನ ಮಂಟಪದಲ್ಲಿ ಇದ್ದ ದುಃಖ, ಜೈಲನ್ನು ಕಂಡಾಗ ಆದ ಭಯ ಎಲ್ಲ ಮಾಯವಾಗಿ ಮನಸ್ಸು ಉಲ್ಲಾಸಗೊಂಡಿತು. ಉಲ್ಲಾಸದೊಡನೆ ಅವನ ಬುದ್ಧಿಯೂ ಸ್ವಲ್ಪ ಚುರುಕಾಗಿ ಕೆಲಸ ಮಾಡತೊಡಗಿತು.

"ಅಪ್ಪಾ" ಎಂದ.

"ಏನೋ! ತಿರ್ಗ ನಿನ್ನ ರಗಳೆ ಪ್ರಾರಂಭವಾಯಿತು!" ಎಂದು ಅಪ್ಪ ನಕ್ಕ.

"ಜೂಗಾರ್ಡನ್ ಒಂದು ಥರ ಜೈಲು ಇದ್ದಂಗಲ್ವ! ಇಲ್ಲಿ ಪ್ರಾಣಿಗಳೆಲ್ಲಾನೂ ಬೋನಿನಲ್ಲಿ, ಪಂಜರದಲ್ಲಿ, ಗುಹೆಗಳಲ್ಲಿ ಮಡಗವ್ರೆ! ಇವು ಏನು ತಪ್ಪುಮಾಡವೆ? ಜೈಲಿನಲ್ಲಾದ್ರೂ ಕಳ್ಳ–ಕಾಕರ ಮಡಗವ್ರಪ್ಪ. ನ್ಯಾಯ!"

"ಇಲ್ಲಿ ಈ ಪ್ರಾಣಿಗಳನ್ನೆಲ್ಲ ಬಂಧಿಸಿ ಇಡದೇ ಹೋಗಿದ್ರೆ ನೀನು ಏನು ಮಣ್ಣು ನೋಡುತ್ತಿದ್ದೆ... ವಯಸ್ಸಿಗೆ ಮೀರಿದ ಮಾತು ಆಡಬಾರ್ದು ಸುಮ್ಮನಿರು."

"ಅಲ್ಲಪ್ಪಾ! ಬೇಕಾದ್ರೆ ಹುಲಿ, ಸಿಂಹ, ಕರಡಿ, ಚಿರತೆ, ತೋಳ ಇವುಗಳನ್ನು ಹಿಡೀಲಿ. ಈ ರೀತಿ 'ಕೂಡುಹಾಕಲಿ' ಇನ್ನೂ ಬೇಕಾದ್ರೆ ಈ ಆನೆಗಳನ್ನೂ ಹಿಡಿದುಹಾಕಲಿ... ಆದ್ರೆ ಈ ನವಿಲು, ಮೊಲ, ಈ ಹಕ್ಕಿಗಳು, ಜಿಂಕೆಗಳು ಇವೆಲ್ಲಾನೂ ಸಮ್ನೆಯಿಡ್ಡು ಕೂಡಾಕೋದು ಅಂದ್ರೆ ಯಾವ ನ್ಯಾಯ?" ಎಂದು ಹುಡುಗ ಅಪ್ಪನಿಗೆ ಮರುಸವಾಲು ಎಸೆದೇಬಿಟ್ಟ.

"ನೋಡು ಈಗ ಕೆಲವು ಪಕ್ಷಿಧಾಮಗಳು ಮತ್ತು ಅಭಯಾರಣ್ಯಗಳು ಅಂತ ಮಾಡವ್ರೆ. ಅಲ್ಲಿ ಪ್ರಾಣಿಗಳಿಗೆ ಯಾವ ಭಯವೂ ಇಲ್ಲ. ಪಂಜರದ ನೋವು, ಗುಹೆಯ ಹಿಂಸೆ ಏನೇನೂ ಇಲ್ಲ. ಆನಂದವಾಗಿರ್ತವೆ. ಬೇಕಾದ್ರೆ ಮುಂದಿನ ಸಲ ನಿಮ್ಮ ಮೇಷ್ಟರಿಗೆ ಹೇಳಿ ಅಲ್ಲಿಗೊಂದು 'ಟೂರು' ಇಡಿಸ್ತೀನಿ ಸುಮ್ನಿರು. ಈಗ ಸುಮ್ನೆ ನೋಡು. ನೋಡು, ನೋಡು ಹುಲಿ ಹೇಗೆ ನಮ್ಮನ್ನೇ ಬೋನಿನ ಸಂದಿನಿಂದ ನೋಡ್ತಾ ಇದೆ."

"ಪಾಪ! ಮುಂಡೇದು ಬಡಕಲು ಬಡಕಲು ಆಗೋಗಿದೆ. ಅಪ್ಪಾ! ಈ ಕಾಡುಮನುಷ್ಯ, ಮನುಷ್ಯನ ತಾತಮುತ್ತಾತ ಅಂತ ಪುಸ್ತಕದಲ್ಲಿ ಹೇಳದಲ್ಲ. ನಾವೆಲ್ಲ ಈ ಕಾಡುಮನುಷ್ಯನ ತರವೇ ಇದ್ದುಬುಟ್ಟಿದ್ರೆ ಚನ್ನಾಗಿತ್ತಲ್ವೆ. ಯಾವ ಕಾಟವೂ ಇರ್ತಿರಲಿಲ್ಲ... ಇಡೀ ದೇಶದ ತುಂಬ; ಏಕೆ ಇಡೀ ಪ್ರಪಂಚದ ತುಂಬ ಕಾಡುಮನುಷ್ಯರು; ಎಷ್ಟು ಚೆನ್ನಾಗಿರ್ತಿತ್ತು. ಅರಮನೆಗಳು, ದೇವಸ್ಥಾನಗಳು, ಜೈಲು, ಈ ಜೂಗಾರ್ಡನ್, ನಮ್ಮಂಥ ಹುಡುಗರು ಮೇಷ್ಟರ ಕೈಲಿ ಏಟು ತಿನ್ನೋದು, ಕರುಣಾಕರನಂಥ ಹುಡುಗ ಸಾಯೋದು... ಯಾವುದೂ ಇರ್ತಿರಲಿಲ್ಲ" ಎಂದು ತನ್ನ ಕಲ್ಪನೆಯ ಸಾಮ್ರಾಜ್ಯವನ್ನು ಕಣ್ಣಲ್ಲಿ ಮೂಡಿಸುವಂತೆ ಕಣ್ಮುಚ್ಚಿ ತಲೆದೂಗಿದ.

"ಅಯ್ಯೋ ನಡಿಯೋ ಕೋತಿ ನನ ಮಗನೆ. ನಿನಗೆ ಮೈಲಿ ಮಾಂಸ ಇಲ್ದೆ ಇದ್ರು ಅದೇನು ಮಾತೋ ಅದೇನು ಕತೆಯೋ, ಮುಂದೆ ಅದೇನು ಆಗ್ತೀಯೋ" ಎಂದು ತನ್ನ ಮಗನ ಆಲೋಚನೆಗಳ ಸರಪಳಿಯನ್ನು ಕಂಡು ಒಳಗೊಳಗೇ ಆನಂದಿಸಿದ.

## 4

ಇಡೀ ಕುಟುಂಬ ಊರಿಗೆ ಹಿಂದಿರುಗಿತು.

ಆ ರಾತ್ರಿ ಹುಡುಗನಿಗೊಂದು ಕನಸು ಬಿತ್ತು.

ತನ್ನ ಸ್ಕೂಲಿನ ಹುಡುಗರೊಡನೆ, ತನ್ನ ಮೇಷ್ಟ್ರುಗಳ ನೇತೃತ್ವದಲ್ಲಿ ಪಕ್ಷಿಧಾಮ ಹಾಗೂ ಅಭಯಾರಣ್ಯವನ್ನು ನೋಡಿಕೊಂಡು ಬರಲು ಹೊರಟಿದ್ದಾನೆ. ಬಸ್ಸು ಗುಂಯ್‌ಗುಡುತ್ತ,

ಇಳಿಜಾರು ಇಳಿದು, ಬೋರೆ ಹತ್ತಿ ಮಧ್ಯಾಹ್ನದ ಹೊತ್ತಿಗೆ ಪಕ್ಷಿಧಾಮವನ್ನು ತಲುಪಿತು. ಹುಡುಗರೆಲ್ಲ ಪಕ್ಷಿಗಳ ಜೊತೆಯಲ್ಲಿ ಪಕ್ಷಿಗಳಾಗಿ ಓಡಾಡಿದರು. ಮೇಷ್ಟ್ರುಗಳು ತಮ್ಮ ಅರೆಬರೆ ಜ್ಞಾನವನ್ನು, ಪಕ್ಷಿಗಳ ಹುಟ್ಟುಸಾವಿನ ಬಗ್ಗೆ ಪ್ರದರ್ಶಿಸಿದಾಗ ಕೇಳಿ ಖುಷಿಪಟ್ಟರು. ನಂತರ ಊರಿನಿಂದ ಮಾಡಿಸಿಕೊಂಡು ಹೋಗಿದ್ದ ಮೊಸರನ್ನ, ಹುಳಿಅನ್ನ ತಿಂದು, ಅಲ್ಲೇ ಹರಿಯುತ್ತಿದ್ದ ನದಿಯ ನೀರು ಕುಡಿದು ತೇಗಿದರು.

ಪಕ್ಷಿಧಾಮದಿಂದ ಅಭಯಾರಣ್ಯಕ್ಕೆ ಸುಮಾರು ಹನ್ನೆರೆಡು ಮೈಲಿಗಳು. ಬಸ್ಸು ಆ ಕಡೆಗೆ ಪ್ರಯಾಣ ಬೆಳೆಸಿತು.

ಅಭಯಾರಣ್ಯವನ್ನು ತಲುಪಿದ್ದೂ ಆಯಿತು. ಹುಡುಗರು ಜಿಂಕೆ, ಕಾಡುಕುರಿ, ಕಾಡುದನ ಮತ್ತು ವಿವಿಧ ಬಗೆಯ ಕೋತಿಗಳನ್ನು ಕಾಡನಲ್ಲಿಯೇ ನೋಡಲು ಸಿಕ್ಕಿದ್ದ ಅವಕಾಶಕ್ಕಾಗಿ ಆನಂದದಿಂದ ಕೆಳಕ್ಕಿಳಿದರು. ಮೇಷ್ಟರು ಎಚ್ಚರಿಕೆಯಿಂದ ಇರುವಂತೆ ಹುಡುಗರಿಗೆಲ್ಲ ತಿಳಿಸುತ್ತಿದ್ದಂತೆಯೇ ಅಭಯಾರಣ್ಯವನ್ನು ಕಾಯುತ್ತಿದ್ದ ಕೆಲವು ಅಧಿಕಾರಿಗಳು ಬಂದು ಮೇಷ್ಟರುಗಳಿಗೆ ಮತ್ತು ಹುಡುಗರಿಗೆ ಒಂದು ಬೋರ್ಡು ತೋರಿಸಿ; ಓದಿಕೊಳ್ಳುವಂತೆ ಹೇಳಿದರು. ಅಲ್ಲಿ ಹೀಗೆ ಬರೆದಿತ್ತು: "ನಶಿಸಿ ಹೋಗುತ್ತಿರುವ ವನ್ಯಮೃಗಗಳನ್ನು ಕಾಪಾಡಿ ನಮ್ಮ ಮುಂದಿನ ಜನಾಂಗಕ್ಕೆ ಈ ಪ್ರಾಣಿಗಳನ್ನು ನೋಡುವ ಆನಂದಿಸಿದ ಅವಕಾಶವನ್ನು ಉಳಿಸಿಕೊಳ್ಳಲು ಈ ಅಭಯಾರಣ್ಯವನ್ನು ರಚಿಸಲಾಗಿದೆ. ಪ್ರಾಣಿಗಳಿಗೆ ಯಾರೂ ಯಾವ ಬಗೆಯ ಹಿಂಸೆ ಮಾಡಬಾರದು. ಯಾರಾದರೂ ಷಿಕಾರಿಗಳು ಅಪ್ಪಿ–ತಪ್ಪಿ ಪ್ರಾಣಿಗಳನ್ನು ಬೇಟೆ ಆಡಿ ಸಿಕ್ಕಿಕೊಂಡರೆ; ಅಂಥವರಿಗೆ ಉಗ್ರ ಕಾರಾಗೃಹ ಶಿಕ್ಷೆಯನ್ನು ಕೊಡಲಾಗುವುದು." ಈ ಬೋರ್ಡಿನ ಪಕ್ಕದಲ್ಲಿಯೇ ಮತ್ತೊಂದು ಬೋರ್ಡು, ಅದರಲ್ಲಿ: "ಅಹಿಂಸೆಯೇ ಧರ್ಮ; ಸತ್ಯವೇ ದೇವರು" – ಮಹಾತ್ಮ ಗಾಂಧಿ– ಎಂದು ಬರೆದಿತ್ತು.

ಇವೆಲ್ಲವನ್ನು ಓದಿಮುಗಿಸಿ ಅಭಯಾರಣ್ಯವನ್ನು ಹೊಕ್ಕರು. ಗರಿಕೆ ಎಸಳುಗಳನ್ನು ಕುರುಕಿ ತಿನ್ನುವ ಮೊಲಗಳನ್ನು ನೋಡಿ ಆನಂದಿಸಿದರು. ಅಲ್ಲೇ ಜುಳ ಜುಳನೆ ಹರಿಯುತ್ತಿದ್ದ ಪುಟ್ಟ ನದಿಯಲ್ಲಿ ನೀರು ಕುಡಿಯುತ್ತಿರುವ ಜಿಂಕೆಗಳನ್ನು ನೋಡಿ: "ಹೋ... ಓ!" ಎಂದು ಅವುಗಳನ್ನು ಅಟ್ಟಿಸಿಕೊಂಡು ಹೋದರು. ಸುಮಾರು ದೂರ ಓಡಿ ಸಾಕಾಗಿ ನೀರು ಕುಡಿದು ಅಲ್ಲಿಯೇ ಕುಳಿತು ದಣಿವಾರಿಸಿಕೊಂಡರು. ಹೀಗೆ ಕುಳಿತಿದ್ದಾಗ ಕೋತಿಗಳ ಹಿಂಡೊಂದು ಬಂದು ಇವರನ್ನು ಅಣಕಿಸತೊಡಗಿದವು. ಇವರು ಅವನ್ನು ಅಣಕಿಸಿದರು. ಅವು ಹಲ್ಲು ಗಿಂಜಿದವು; ಇವರೂ ಹಲ್ಲುಗಿಂಜಿದರು. ಇದ್ದಕ್ಕಿದ್ದಂತೆಯೇ ಏನೋ ಭಾರಿ ಸದ್ದು ಕೇಳಿಸಿತು. ಕೋತಿಗಳು ಚದುರಿದವು. ಹುಡುಗರು ಬೆಚ್ಚಿದರು. ಒಂದಷ್ಟು ನಿಮಿಷಗಳ ನಂತರ ಹುಡುಗರಲ್ಲಿ ಉತ್ಸಾಹ ಮತ್ತೆ ಮೂಡಿತು. ಕೋತಿಗಳು ಓಡಿದ ಜಾಡನ್ನೇ ಹಿಡಿದು ನಡೆದರು. ಸುಮಾರು ದೂರ ನಡೆದ ಮೇಲೆ: "ಇಲ್ಲಿಂದ ಮುಂದಕ್ಕೆ ಯಾರಿಗೂ ಪ್ರವೇಶವಿಲ್ಲ" ಎಂಬ ಬೋರ್ಡು ಕಣ್ಣಿಗೆ ಬೀಳಲು: ಹುಡುಗರು ತೀವ್ರ ಕುತೂಹಲಿಗಳಾಗಿ ಮೆಲ್ಲ ಮೆಲ್ಲಗೆ ಯಾರ ಕಣ್ಣಿಗೂ ಬೀಳದಂತೆ ಮರಗಳ ಮರೆಯಲ್ಲಿ, ಪೊದೆಗಳ ಗುಂಪಿನ ನಡುವೆ ನುಸುಳಿಕೊಂಡು

ಕಣ್ಣು ಮುಚ್ಚಾಲೆ ಆಡುತ್ತ ಬಹಳ ದೂರ ಹೋದರು. ಆಗಲೇ ಸೂರ್ಯ ಮುದುಕನಾಗತೊಡಗಿದ್ದ. ಒಬ್ಬ ಹುಡುಗ "ಅಲ್ಲಿ" ಎಂದು ತೋರಿಸಿದ. ಉಳಿದವರೆಲ್ಲರೂ ನೋಡಿದರು. ದೂರದಲ್ಲಿ ಕೆಲವು ಸಾಲುಮರಗಳು. ಅವುಗಳ ಕೊಂಬೆಗೆ ತೊಲೆ ಹಕ್ಕಿಗಳಂತೆ ಏನೋ ತೂಗಾಡುತ್ತಿವೆ. ಹುಡುಗರಿಗೆ ಈ ಪ್ರಾಣಿಗಳು ಯಾವ ಜಾತಿಯವು ನೋಡಿಯೇ ತೀರಬೇಕೆಂಬ ದೃಢ ನಿರ್ಧಾರ ಎದೆಯಲ್ಲಿ ಹುಟ್ಟಿ ಮುಂದುವರಿದರು. ತೂಗಾಡುತ್ತಿರುವ ವಸ್ತುಗಳಿಗೆ ಕಾಲು, ಕೈಗಳಿವೆ ಎನ್ನಿಸಿತು. ಹೋ! ಹೋ!! ಕೋತಿಗಳು ಸರ್ಕಸ್ ಮಾಡುತ್ತಿರಬೇಕು ಎನ್ನಿಸಿ ಇನ್ನೂ ಮುಂದುವರಿದರು. ಒಬ್ಬ ಹುಡುಗ: "ಲೇ! ಸದ್ದುಮಾಡದೆ ಅಲ್ಲಿ ನೋಡಿ" ಎಂದ. ಆ ಮರಗಳ ಸುತ್ತ ಮೈಗೆ ಕಪ್ಪು ಉಡುಪು ಧರಿಸಿ, ಮುಖವಾಡ ತೊಟ್ಟ ವ್ಯಕ್ತಿಗಳು ಓಡಾಡುತ್ತಿದ್ದರು. ಹುಡುಗರಿಗೆ ಮೈ 'ಜುಂ' ಎಂದಿತು. ಕೆಲವರು ನಡುಗತೊಡಗಿದರು. ಹುಡುಗರನ್ನು ಹಿಂಬಾಲಿಸಿ ಬಂದ ಮೇಷ್ಟರೊಬ್ಬರನ್ನು ಮುಖವಾಡ ಧರಿಸಿದ್ದ ವ್ಯಕ್ತಿ ಒಂದು ಗಬಕ್ಕನೆ ಹಿಡಿದುಕೊಂಡಿತು. ಮೇಷ್ಟರು ಕೊಸರಾಡಿದರು. ಹುಡುಗರು ಬೆದರಿ ಪೊದೆಗಳಲ್ಲಿ ಅಡಗಿಕೊಂಡರು. ಮೇಷ್ಟರು ಕೇಳಿದರು: "ನೀವು ಯಾರ್ರೀ. ನನ್ನ ಯಾಕೆ ಹಿಡ್ಕೊಂಡಿದೀರಿ? ನಾನು ಏನು ತಪ್ಪು ಮಾಡಿದ್ದೀನಿ? ಅಭಯಾರಣ್ಯದಲ್ಲಿ ನಿಮ್ಮಂಥ ದರೋಡೆಕೋರರೆಲ್ಲ ಸೇರ್ಕೊಂಡು ನಮ್ಮಂಥ ಪ್ರವಾಸಿಗಳ ತಲೆ ಹೊಡೆದು ದುಡ್ಡು ಕಿತ್ಕೊಳ್ಳೋಕೆ ನಿಂತಿದ್ದೀರ. ಇದನ್ನು ನಾನು ಅರಣ್ಯ ಇಲಾಖೆಯವರಿಗೆ ಬರೆದು ನಿಮಗೆಲ್ಲ ಶಿಕ್ಷೆ ಮಾಡಿಸದೇ ಹೋದರೆ..." ಮೇಷ್ಟರ ಮುಖಕ್ಕೆ ಉತ್ತರವಾಗಿ ರಪರಪನೆ ನಾಲ್ಕಾರು ಏಟುಗಳು ಬಿದ್ದವು. "ನೋಡು ಅಲ್ಲಿ ತೂಗಾಡ್ತಾ ಇರೋವು ಏನು ಅಂಥ ತಿಳಿದಿದ್ದೀ! ಅದೇ ಗತಿ ನಿನಗೂ ಆಯ್ತದೆ!" ಅಷ್ಟೊತ್ತಿಗೆ ಇನ್ನಿಬ್ಬರು ಮುಖವಾಡ ಧರಿಸಿದ ವ್ಯಕ್ತಿಗಳು ಬಂದರು. ಏನೇನೋ ಮಾತಾಡಿಕೊಂಡು ಮೇಷ್ಟರನ್ನು 'ನಡಿ' ಎಂದರು. ಮೇಷ್ಟರಿಗೆ ಕೋಪ ಉಕ್ಕಿ ಉಕ್ಕಿ ಬಂತು.

"ನೀವು ಯಾರ್ರೀ? ಅದನ್ನ ಮೊದಲು ಬೊಗಳಿ ! ನನ್ನ ಎಲ್ಲಿಗೆ ಕರ್ಕೊಂಡು ಹೋಯ್ತೀರಿ ಹೇಳಿ ! ನನ್ನಂಥ ನಿರಪರಾಧಿ ಮೇಲೆ ಕೈಮಾಡೋಕೆ ನಿಮಗೆ ನಾಚಿಕೆ ಎನಿಸೋಲ್ಲ?"

"ಲೇ! ನಿನ್ನ ಇಲ್ಲೆ ಒದ್ದು ಸಾಯಿಸಿಬುಡ್ತೀವಿ."

"ಸಾಯಿಸ್ರಿ, ಈಗ ನಾನು ಬದುಕಿ ಏನು ಮಾಡಬೇಕಾಗಿದೆ."

"ನಡೀಮಂತೆ ಮಾತಾಡ್ದೆ. ಯಾಕೆ ಕೊಸರಾಡ್ತಾಯಿದ್ದೀ ಮಂತೆ."

"ಸಾವು ಮನುಷ್ಯನಿಗೆ ಬರೋದು ಒಂದೇ ಒಂದು ಸಲ–ಸಾವಿರ ಸಲ ಅಲ್ಲ."

"ತತ್ವ ಹೇಳಬೇಡ ನಡಿಯೋ..." ಎಂದು ಮೇಷ್ಟರನ್ನು ದರದರನೆ ಎಳೆದುಕೊಂಡು ಹೋದರು. ಹುಡುಗರೆಲ್ಲ "ನಮ್ಮ ಮೇಷ್ಟರನ್ನು ಬುಟ್ಟುಬುಡಿ" ಎಂದು ಕಿರುಚಿಕೊಂಡರೂ ಲೆಕ್ಕಕ್ಕೇ ತೆಗೆದುಕೊಳ್ಳಲಿಲ್ಲ.

ಎಳೆದುಕೊಂಡು ಹೊರಟು ಹೋದರು. ಸ್ವಲ್ಪ ಹೊತ್ತು ಹಾಗೆಯೇ ಹೆಪ್ಪು ಗಟ್ಟಿಕೊಂಡತು. ನಂತರ ಬಹುದೂರದಿಂದ 'ಢಂ' ಎಂಬ ಸದ್ದಿನೊಡನೆ, ಯಾವುದೋ ಮನುಷ್ಯಧ್ವನಿಯ ಚೀತ್ಕಾರ ಕೇಳಿಸಿತು.

ಹುಡುಗ "ನಮ್ಮ ಮೇಷ್ಟ್ರನ್ನ ಸಾಯಿಸಬೇಡ. ಅವರು ಒಳ್ಳೆಯೋರು ತುಂಬಾ ಒಳ್ಳೆಯೋರು. ದೇಶ ಎಂದ್ರೆ ಪ್ರಾಣ ಬಿಟ್ಕೋತಾರೆ" ಎಂದು ಕಿರುಚುತ್ತ ಹಾಸಿಗೆಯ ಮೇಲೆ ದಿಢೀರನೆ ಕುಳಿತುಕೊಂಡು ಬಿಕ್ಕಿ ಬಿಕ್ಕಿ ಅಳಲಾರಂಭಿಸಿದ.

## ಓದು ಪಠ್ಯ : ಬೆಳಕೂ ಇಲ್ಲ ಕನಸೂ ಇಲ್ಲ

**– ನಾಗತಿಹಳ್ಳಿ ಚಂದ್ರಶೇಖರ್**

ಮುಬಾರಕ್ ಅಜ್ಜ ಇಪ್ಪತ್ತೇಳು ವರ್ಷಗಳಿಂದ ಈಜಿಪ್ಟ್ ಆಳುತ್ತಿರಬಹುದು. ಈಜಿಪ್ಟ್ ಮುಸ್ಲಿಂ ಬಹುಸಂಖ್ಯಾತ ದೇಶವೂ ಆಗಿರಬಹುದು.

ಆದರೆ ಈಜಿಪ್ಟ್‌ನಲ್ಲಿ ಮತಾಂಧತೆ ಇಲ್ಲ. ಒಂದು ವೇಳೆ ಈಜಿಪ್ಟ್ ದೇಶವು ತಾಲಿಬಾನ್‌ಗಳ, ಮಜಾಹಿದ್‌ಗಳ ಮತ್ತಾವುದೇ ಮೂಲಭೂತವಾದಿಗಳ ಪ್ರಭಾವಕ್ಕೆ, ಕ್ರೂರ ಹಿಡತಕ್ಕೆ ಸಿಕ್ಕಿದ್ದರೆ, ಪ್ರಾಯಶಃ ಸಾವಿರಾರು ವರ್ಷಗಳ ಸ್ಫಿಂಕ್ಸ್‌ಗಳನ್ನು, ವಿಗ್ರಹಗಳನ್ನು, ದೇವಾಲಯಗಳನ್ನು ನಾಶ ಮಾಡುತ್ತಿದ್ದರೇನೋ. ಆಫ್‌ಘನ್‌ನಲ್ಲಿ ಧೂಳೀಪಟವಾದ ಬುದ್ಧ ಪ್ರತಿಮೆಗಳ ದುರಂತ ಸ್ಥಿತಿ ಈಜಿಪ್ಟ್‌ನಲ್ಲಿರುವ ಸಾವಿರಾರು ಸ್ಮಾರಕಗಳಿಗೆ ಒದಗುತ್ತಿತ್ತೇನೋ. ಈ ದಿಕ್ಕಿನಲ್ಲಿ ಈಜಿಪ್ಟ್ ದೇಶದ ರಾಜಕೀಯ ಪ್ರಜ್ಞೆ ಎಚ್ಚರವಾಗಿದ್ದು, ಪ್ರವಾಸಿಗರನ್ನೇ ಪ್ರವಾಸೋದ್ಯಮವನ್ನೇ ನಂಬಿರುವ ದೇಶವೆಂಬ ವಾಸ್ತವ ಸತ್ಯ ಅರಿತು, ಪುರಾತನವಾದುದೆಲ್ಲವನ್ನೂ ರಕ್ಷಿಸಿಕೊಂಡು ಬರಲಾಗಿದೆ. ಜಗತ್ತಿನ ಏಳು ಅದ್ಭುತಗಳಲ್ಲೊಂದಾದ, ಖುಫು ದೊರೆ ಕಟ್ಟಿಸಿದನೆನ್ನಲಾದ ಗ್ರೇಟ್ ಪಿರಮಿಡ್ ಸೇರಿದಂತೆ ಎಲ್ಲವೂ ಬದುಕಿ ಉಳಿದಿವೆ. ಬಡತನ, ಭ್ರಷ್ಟತೆಗಳ ಕಪ್ಪು ಚುಕ್ಕೆಗಳ ನಡುವೆಯೂ ಯುಗಾಂತರದ ನೆನಪುಗಳ ದಾಖಲೆಯಂತಿರುವ ಈಜಿಪ್ಟ್‌ನ ಸ್ಮಾರಕಗಳು ಮನುಕುಲದ ಚರಿತ್ರೆಗೆ ಮೂಕ ಸಾಕ್ಷಿಗಳಾಗಿವೆ.

ಮೆಚ್ಚುವ ಮತ್ತೊಂದು ಅಂಶವೆಂದರೆ ಮಹಿಳೆಯರು ಕ್ರಿಯೆಶೀಲವಾಗಿರುವುದು. ಉದ್ದಿಮೆಗಳಲ್ಲಿ ತೊಡಗಿರುವುದು. "ಈಜಿಪ್ಟ್ ಪ್ಲಸ್" ಎಂಬ ನಾನು ಆರಿಸಿಕೊಂಡಿದ್ದ ಟ್ರಾವೆಲ್ ಏಜೆನ್ಸಿಯ ಮಾಲೀಕಳೂ ಕೂಡಾ ಮಹಿಳೆಯೇ. ನನ್ನ ಕೆಲವು ಗೈಡ್‌ಗಳು ಹೆಂಗಸರಾಗಿದ್ದರು. ಅತ್ಯುತ್ತಮ ಇಂಗ್ಲಿಷ್ ಬಲ್ಲವರಾಗಿದ್ದರು. ಪಧವೀಧರರಾಗಿದ್ದರು. ಪಿರಮಿಡ್ಡುಗಳನ್ನು ತೋರಿಸಿದ, ವಿವರಿಸಿದ ಮತ್ತು ನನ್ನಿಂದ ಬಹಳ ಕಿಚಾಯಿಸಿಕೊಂಡ ಹೆಣ್ಣು ಗೈಡಿನ ಹೆಸರು ಎಮಾನ್ ಎಲ್‌ಸೊಕರಿ ಅಂತ. "ಯಾಮಿ ಅಂದರೆ ಸಾಕು" ಅಂತ ಹೇಳಿದಳು, ಈ ಈಜಿಪ್ಟ್ ಪ್ಲಸ್ ಸಂಸ್ಥೆಯ ಉದ್ಯೋಗಿ. ತಲೆಗೆ ಸುತ್ತಿಕೊಂಡ ಸ್ಕಾರ್ಫ್ ಬಿಟ್ಟರೆ ಭಾರತೀಯ ಹೆಣ್ಣು ಮಕ್ಕಳಂತೆಯೇ. ನೀವು ಪಿರಮಿಡ್ ಒಳಗೆ ನೋಡುವುದೇನೂ ಇಲ್ಲ ಅಂದರೂ ಕೇಳದೆ ಪಿರಮಿಡ್‌ನ ಒಳಗೂ ಹೋದೆ. ಬೇಡ ಅಂದದ್ದನ್ನು ಮಾಡದಿದ್ದರೆ ಈ ಜೀವಕ್ಕೆಲ್ಲಿ ಸಮಾಧಾನ? ಮೆಟ್ಟಿಲಿಳಿಯುತ್ತಾ ಗೂನು ಬೆನ್ನು ಮಾಡಿಕೊಂಡು ತಡವರಿಸುತ್ತಾ ಸಾಗಿದೆ. ಕಿರಿದಾದ ಸುರಂಗ. ಎದುರಿನಿಂದ ಬರುವವರಿಗೂ ಜಾಗವಿಲ್ಲ. ಭುಜ ಸವರಿಕೊಂಡೇ ಬರುತ್ತಾರೆ. ಕತ್ತಲು ಬೇರೆ. ಅಮೆರಿಕನ್ನರ ಕೈಗೆ ಇಂಥ ಪ್ರಾಚೀನ ಸ್ಮಾರಕ ಸಿಕ್ಕಿದ್ದರೆ ಏನೆಲ್ಲ ಮಾಡುಬಿಡುತ್ತಿದ್ದರು. ಇನ್ನೂರು ವರ್ಷಗಳ ಚರಿತ್ರೆಯನ್ನಿರಿಸಿಕೊಂಡು ಅವರಾಡುವ

ಚೇಷ್ಟೆಗಳಿಗೆ ಮಿತಿ ಇಲ್ಲ. ಚಿಕ್ಕಪುಟ್ಟ ಪ್ರವಾಸಿತಾಣಗಳನ್ನೂ ಗ್ಲೋರಿಫೈ ಮಾಡಿ ಬಿಂಬಿಸುತ್ತಾರೆ. ಒಂದು ಕಡೆಯಿಂದ ದಡ ಕುಸಿಯುತ್ತಿರುವ ಪಿರಮಿಡ್ ಅನ್ನು, ತುದಿಯನ್ನು ಹೊರತುಪಡಿಸಿ ಹೊದಿಕೆ ಎಲ್ಲಾ ಉದುರಿ ಹೋಗಿರುವ ಪಿರಮಿಡ್ ಅನ್ನು ಕೊಂಚವಾದರೂ ಪುನರುಜ್ಜೀವಗೊಳಿಸುವುದರಲಿ, ಈಜಿಪ್ಷಿಯನ್ನರು ಪಿರಮಿಡ್‌ಗೆ ಹೋಗುವ ದಾರಿಯನ್ನೂ, ಸುಂಕದ ಕಟ್ಟೆಯನ್ನೂ, ವಾಹನಗಳ ನಿಲ್ದಾಣವನ್ನೂ ಸರಿಯಾಗಿ ರಿಪೇರಿ ಮಾಡಿಕೊಂಡಿಲ್ಲ. ಇನ್ನು ಒಳಗಿನ ದುಸ್ತರ ಸುರಂಗ ಮಾರ್ಗವನ್ನು ದೀಪ ಹಾಕಿ ಸರಿ ಮಾಡಿಯಾರೆ?

ಪುನರುಜ್ಜೀವಗೊಳಿಸುವುದೆಂದರೆ ಪ್ರಾಚೀನತೆಯನ್ನು ಕೆಡಿಸುವುದಿಲ್ಲ. ಅದು ಹಾಳಾಗದಂತೆ ಕಾದಿರಿಸುವುದು. ಪಿರಮಿಡ್‌ನ ಒಳಗೆ ಕೊಂಚ ದೂರ ಸಾಗಿದಂತೆ ನನಗೆ ಬಹಳ ಸುಸ್ತಾಗತೊಡಗಿತು. ತೆವಳಿದಂತೆ ನಡೆಯುವುದು ಆರೋಗ್ಯವಂತರಿಗೇ ಕಷ್ಟ. ಡುಮ್ಮ ಹೊಟ್ಟೆಯನ್ನು ಹೊತ್ತು, ಮಂಡಿ ನೋವೇಶ್ವರನೂ ಆಗಿ ನಡೆಯುವುದು ಬಲು ಬಲು ಕಷ್ಟ. ಎದುರಿನಿಂದ ಬರುವವರ ಢಿಕ್ಕಿಗಳು ಬೇರೆ. ಒಳಗೆ ಅವರಿಗೆ ನಿರಾಶೆಯಾಯಿತೇನೋ ಅವರು ಜೋರಾಗಿಯೇ ಢಿಕ್ಕಿ ಹೊಡೆಯುತ್ತಿದ್ದರು. ಸುರಂಗ ಮಾರ್ಗದಲ್ಲಿ ನಡೆಯುವುದೊಂದು ಕೌಶಲ್ಯ. ಪಾದಗಳನ್ನು ಎತ್ತಿ ಇಡದೆ ನೆಲವನ್ನು ಸವರುತ್ತಾ ಗೋಡೆಯನ್ನು ಆತು ಹಿಡಿದು ನಡೆಯಬೇಕು. ಅಲ್ಲಿ, ಇಲ್ಲಿ, ಆಗ ಈಗ ಕಾಣುವ ಮಂಕು ಬೆಳಕಿನಲ್ಲಿ ಏನಾದರೂ ರೋಮಾಂಚನಗೊಳಿಸುವುದು ಕಂಡೀತೇ ಎಂಬ ಆಸೆಯಿಂದ ನಡೆಯಬೇಕು. ಕಾರ್ನಾಡರು ಯಯಾತಿ ನಾಟಕದಲ್ಲಿ ಹೇಳುವ 'ಬೆಳಕಿಲ್ಲದ ದಾರಿಯಲ್ಲಿ ನಡೆಯಬಹುದು. ಕನಸುಗಳಿಲ್ಲದ ದಾರಿಯಲ್ಲಿ ಹೇಗೆ ನಡೆಯಲಿ?' ಎಂಬ ಮಾತು ನೆನಪಾಯಿತು. ವಿಪರ್ಯಾಸವೆಂದರೆ ಪಿರಮಿಡ್‌ನ ಸುರಂಗದಲ್ಲಿ ಬೆಳಕೂ ಇಲ್ಲ, ಕನಸೂ ಇಲ್ಲ. ಕೊನೆಗೆ ನಡೆಯುತ್ತಿರುವುದು ದಾರಿಯೂ ಅಲ್ಲ!

ಇದು ಕೊನೆಯಿಲ್ಲದ ಪ್ರಯಾಣ, ಇನ್ನು ನಡೆಯಲಾರೆ ಅನ್ನಿಸಿ ಮುಕ್ಕಾಲು ಭಾಗ ಹೋಗಿದ್ದವನು ಈಗಾಗಲೇ ದುಮುದುಮನೆ ವಾಪಸ್ಸಾಗುತ್ತಿರುವವನ್ನು ಕೇಳಿದೆ. "ಅಯ್ಯಾ ದೊರೆಯೆ, ನೀನು ಕಂಡ ದೃಶ್ಯ ವೈಭವವನ್ನು ಕೊಂಚ ವಿವರಿಸುವೆಯಾ? ನಾನಿನ್ನೂ ಎಷ್ಟು ದೂರ ನಡೆಯಬೇಕು? ಈ ಪಾತಾಳ ಪಯಣದಲ್ಲಿ ಅಂಥ ರೋಮಾಂಚನಗಳೇನಾದರೂ ಇವೆಯೆ?"

ಅವನಿಗೆ ರೇಗಿ ಹೋದಂತಿತ್ತು. ಜೋರಾಗಿ ಉಸಿರುಕಟ್ಟಿ ಹೇಳಿದ, "ನಾನು ಮುಠ್ಠಾಳನಾದ್ದು ಸಾಕು. ಸುಮ್ಮನೆ ವಾಪಾಸ್ ಬಾ.... ಅಲ್ಲೇನೂ ಇಲ್ಲ. ಹೀಗೆ ಇನ್ನೂ ಬಹಳ ದೂರ ನಡೀಬೇಕು. ಕೊನೆಯಲ್ಲೊಂದು ಸಮಾಧಿ ಇದೆ. ಬೋಳು ಸಮಾಧಿ. ಅದನ್ನು ಕಂಡಾಗ ಎಷ್ಟು ಜುಗುಪ್ಸೆಯಾಗುತ್ತದೆ ಎಂದರೆ ಆತ್ಮಹತ್ಯೆ ಮಾಡಿಕೊಂಡು ಆ ಸಮಾಧಿಯಲ್ಲಿ ಮಲಗಿಬಿಡೋಣ ಅನ್ನಿಸುತ್ತದೆ. ಯಾಕೆ ಗೊತ್ತಾ? ಮತ್ತೆ ಇದೇ ದಾರಿಯಲ್ಲಿ ಅಷ್ಟು ದೂರ ಗೂನುಬೆನ್ನು ಮಾಡಿಕೊಂಡು ವಾಪಾಸ್ ನಡೆಯಬೇಕಲ್ಲಾ, ಅದನ್ನು ನೆನೆದು! ಇದನ್ನೆಲ್ಲಾ

ಚರಿತ್ರೆ ಅಂತ ಯಾವ ಮೂರ್ಖ ಹೇಳಿದ? ಇದು ಹುಚ್ಚುತನ.... ಇದು ಬೆಪ್ಪುತನ......" ಸುಮ್ಮನೆ ಅವನ ಬೆನ್ನು ಹಿಡಿದು ಮರಳಿ ಬಂದೆ....

ಯಾಮಿ "ನಾನು ಮೊದಲೇ ಹೇಳಲಿಲ್ಲವಾ? ನಿಮಗೆ ನಿರಾಶೆಯಾಗಿರಬೇಕು" ಎಂದಳು. "ಹಾಗೇನಲ್ಲ.... ಬಹಳ ಸೊಗಸಾಗಿತ್ತು. ಅನೇಕ ತಲೆಬುರುಡೆಗಳು ನಗುನಗುತ್ತಾ ಸ್ವಾಗತಿಸುತ್ತಿದ್ದವು. ಆ ಅಸ್ತಿಪಂಜರಗಳ ಸೊಗಸು ಅವರ್ಣನೀಯ. ಅವುಗಳ ಸುತ್ತ ಚಿನ್ನಾಭರಣಗಳು, ಸಿಂಹಾಸನ, ಖಡ್ಗ. ಫೆಂಟಾಸ್ಟಿಕ್" ಎಂದು ಮಾರ್ಮಿಕವಾಗಿ ಹೇಳಿದೆ. ಅವಳು ನಗುತ್ತಾ.... "ಅವೆಲ್ಲ ಮುಂಚೆ ಇದ್ದವು. ಲೂಟಿಕೋರರು ಕದ್ದೊಯ್ದರು. ಈಗ ಅಳಿದುಳಿದವುಗಳನ್ನು ಮ್ಯೂಸಿಯಂನಲ್ಲಿ ರಕ್ಷಿಸಲಾಗಿದೆ. ಅಲ್ಲಿ ಮಮ್ಮಿಗಳನ್ನೂ, ಅವುಗಳ ಜತೆ ಇರಿಸಲಾಗಿದ್ದ ತುಂಬಾ ಬೆಲೆ ಬಾಲುವ ಆಭರಣಗಳನ್ನೂ ನೋಡಬಹುದು" ಎಂದಳು. ಆಭರಣ ಕದಿಯಲು ಈ ಸುರಂಗಮಾರ್ಗದಲ್ಲಿ ನಡೆದ ಲೂಟಿಕೋರರ ಬಗ್ಗೆ ಅಪಾರ ಅನುಕಂಪ ಮೂಡಿತು. ಆಭರಣವನ್ನಾದರೂ ಪಡೆದ ಅವರು ಅದೃಷ್ಟವಂತರೋ? ಪ್ರವೇಶ ಧನ ತೆತ್ತು ಯಮಸಾಹಸದಿಂದ ನಡೆದು ಬೋಳು ಸಮಾಧಿ ನೋಡಿ ನಿರಾಶರಾಗಿ ಮರಳುವ ನಾವು ಅದೃಷ್ಟವಂತರೋ?

## 3. ಮಳೆ

**ಆಶಯ:**

### ಮಳೆಯ ಮುಸ್ಸಂಜೆ

**– ಪ್ರತಿಭಾ ನಂದಕುಮಾರ್**

ನನ್ನ ಕಣ್ಣ ರೆಪ್ಪೆಯ ಮೇಲೆ
ಮುತ್ತಿನಂತೆ ಹೊಳೆಯುವ
ಮಳೆಹನಿಯನ್ನು ಕಂಡು
ಅಸೂಯೆಪಟ್ಟ ಹುಡುಗ
ಮಳೆಗೆ ಶಾಪ ಕೊಟ್ಟ

ಮಾಗಿದ ಹಣ್ಣ ಮೇಲೆಲ್ಲ
ಮತ್ತ ಹೆಣ್ಣ ಮೇಲೆಲ್ಲ
ಮಳೆ ಹನಿಯ ಧಾಳಿ
ತಂಪು ಗಾಳಿಯ ಚಳಿ
ಕಂಡವರಲ್ಲಿ ಮಾತ್ರ
ಆಸೆ ಬಿಸಿ

ಹೆಣ್ಣಿನ ಕೋಮಲ ಅಂಗಗಳಲ್ಲಿ
ಯುವಕರ ಕಲ್ಲಿನ ಖಂಡಗಳಲ್ಲಿ
ಎಳೆ ಕಂದನ ಹಾಲ್ಗೆನ್ನೆಯ ಸುಳಿಯಲ್ಲಿ
ಮುದಿ ಮುಖಗಳ ನೂರೆಂಟು
ಮಡಿಕೆಯಲಿ
ಥಟ್ಟನುದುರುವ ಸಣ್ಣ ಹನಿಗಳು
ಮಳೆರಾಯನ ತುಂಟ ಕೈಗಳು.

# ಇತಿಹಾಸದ ಭೀಕರ ಕ್ಷಾಮ – ವಿಸ್ಮಯ ವಿಶ್ವ

**– ಕೆ.ಪಿ. ಪೂರ್ಣಚಂದ್ರ ತೇಜಸ್ವೀ**

ಕ್ಷಾಮ ಪೀಡಿತ ಸೋಮಾಲಿಯ ದೇಶದ ಹುಡುಗನೊಬ್ಬ ಸ್ವಯಂಸೇವಾ ಸಂಘಟನೆಗಳು ಆಹಾರ ಪದಾರ್ಥಗಳನ್ನು ಕೊಡಬಹುದೆಂದು ರಸ್ತೆ ಪಕ್ಕ ಕಾಯುತ್ತಾ ಕುಳಿತಿದ್ದಾನೆ. ಸಹರಾ ಸುತ್ತಮುತ್ತ ಕ್ಷಾಮಪೀಡೆ ಒಂದಲ್ಲಾ ಒಂದು ದೇಶದಲ್ಲಿ ಇದ್ದೇ ಇರುತ್ತದೆ. ಜನಸಂಖ್ಯಾ ಹೆಚ್ಚಳದಿಂದ ಮನುಷ್ಯರು ವಾಸಕ್ಕೆ ಯೋಗ್ಯವಲ್ಲದ ಜಾಗಗಳಲ್ಲೆಲ್ಲಾ ಮನುಷ್ಯರು ವಲಸೆ ಹೋಗಿ ಬದುಕುತ್ತಿರುವುದೂ ಇದಕ್ಕೆ ಕಾರಣ.

ಸಹರಾದ ಅಂಚಿನಲ್ಲಿರುವ ಇಥಿಯೋಪಿಯಾ ಸೋಮಾಲಿಯ, ಚಾಡ್, ಸುಡಾನ್ ದೇಶಗಳಲ್ಲಿ ಕ್ಷಾಮ, ಅನಾವೃಷ್ಟಿ ಹೊಸದೇನೂ ಅಲ್ಲ. ಈಚಿನ ದಿನಗಳಲ್ಲಿ ಸಹ ಅಂತರ್ಯುದ್ಧ ಮತ್ತು ಕ್ಷಾಮಗಳೆರಡಕ್ಕೂ ತುತ್ತಾಗಿ ಸಾವಿರಾರು ಮುಗ್ಧ ಆಫ್ರಿಕನ್ನರು ಅಸು ನೀಗಿದ ಸುದ್ದಿ ಪತ್ರಿಕೆಗಳಲ್ಲಿ ನಾವು ನೋಡಿದ್ದೇವೆ. ಆದರೆ ಈ ದೇಶಗಳಲ್ಲಿ ಈಜಿಪ್ಟ್ ಮಾತ್ರ ಇಂಥ ಅನಾಹುತಕ್ಕೆ ತುತ್ತಾಗದಿರುವುದನ್ನು ನೀವು ಗಮನಿಸಿರಬಹುದು. ಈಜಿಪ್ಟ್ ಸಹ ಸಹರಾದ ಅಂಚಿನಲ್ಲಿರುವ ರಾಜ್ಯವೇ ಆದರೂ ಈ ರಾಜ್ಯದಲ್ಲಿ ನೈಲ್ ನದಿ ಹರಿಯುವುದರಿಂದ ಉತ್ತರ ಆಫ್ರಿಕಾದ ಇತರ ರಾಷ್ಟ್ರಗಳಲ್ಲಿರುವ ಕ್ಷಾಮಡಾಮರಗಳ ಭೀಕರ ದುರಂತಗಳಿಂದ ಈಜಿಪ್ಟ್ ಪಾರಾಗಿದೆಯೆಂದೇ ಹೇಳಬಹುದು. ಆದರೆ ಎರಡು ಸಾವಿರ ವರ್ಷಗಳ ಚರಿತ್ರೆಯನ್ನು ಗಮನಿಸಿದಾಗ ಈಜಿಪ್ಟ್ ಸಹ ಭೀಕರ ಕ್ಷಾಮಕ್ಕೆ ತುತ್ತಾಗಿರುವುದು ಕಂಡು ಬರುತ್ತದೆ.

ಅಬುದ್ ಅಲ್ ಲತೀಫ್ ಎಂಬೊಬ್ಬ ಪ್ರಖ್ಯಾತ ವೈದ್ಯ ಈಜಿಪ್ಟಿನ ಕೈರೋದಲ್ಲಿ ಬದುಕಿದ್ದ. 1162ರಲ್ಲಿ ಬಾಗ್ದಾದ್ ನಗರದಲ್ಲಿ ಹುಟ್ಟಿದ ಈತ ತತ್ವಶಾಸ್ತ್ರ, ಚರಿತ್ರೆ, ಕಾನೂನು ಶಾಸ್ತ್ರ ಮೊದಲಾದವುಗಳಲ್ಲಿ ಪ್ರಖ್ಯಾತ ವಿದ್ವಾಂಸನಾಗಿದ್ದ. ಇವನು ಕೊನೆಗೆ ಕೈಗೊಂಡಿದ್ದು ವೈದ್ಯ ವೃತ್ತಿ. ಲತೀಫ್ ಇಪ್ಪತ್ತೆಂಟನೆ ವಯಸ್ಸಿನಲ್ಲಿ ಪ್ರವಾಸಿಯಾಗಿ ಟರ್ಕಿ ದೇಶಕ್ಕೆ ಹೋದ. ಅಲ್ಲಿ ಕೆಲಕಾಲ ಆ ದೇಶ ಪರ್ಯಟನೆ ಮಾಡಿದ್ದಲ್ಲದೆ ಅಲ್ಲಿನ ವಿದ್ಯಾಲಯಗಳಲ್ಲಿ ಭೋಧಿಸುತ್ತಲೂ ಇದ್ದ. ಅನಂತರ ಲತೀಫ್ ಗ್ರೀಸ್, ಸಿರಿಯಾ ಮೊದಲಾದ ದೇಶಗಳಲ್ಲೂ ಪ್ರಾಚೀನ ಆರ್‍ಯಾಬಿಕ್ ವೈದ್ಯಪದ್ಧತಿಯ ಅಧ್ಯಾಪಕನಾಗಿ ಕೆಲಸ ಮಾಡಿದ. ಈತನ ಪಾಂಡಿತ್ಯವನ್ನು ಕೇಳಿ ತಿಳಿದ ಈಜಿಪ್ಟಿನ ಸುಲ್ತಾನ್ ಸಲಾದಿನ್ ಇವನನ್ನು ಈಜಿಪ್ಟಿಗೆ ಆಹ್ವಾನಿಸಿದ. ಈಜಿಪ್ಟಿನಲ್ಲಿ ಮಹಾ ತತ್ವಶಾಸ್ತ್ರಜ್ಞ ಮತ್ತು ವೈದ್ಯನೆಂದು ಪ್ರಖ್ಯಾತನಾಗಿದ್ದ ಜ್ಯೂ ಮೈಮೋನಿಡೆಸ್ ಬಳಿ ಕೆಲಕಾಲ ಈತ ಶಿಷ್ಯವೃತ್ತಿ ಮಾಡಿದ. ಈ ಕಾಲದಲ್ಲೇ ಎಂದರೆ ಸುಮಾರು 1197ನೇ ಇಸ್ವಿಯಲ್ಲಿ ನೈಲ್ ನದಿಯ ಪ್ರವಾಹ ವೈಫಲ್ಯದಿಂದ ಈಜಿಪ್ಟ್ ಕಂಡು ಕೇಳರಿಯದಂಥ ಭೀಕರ ಕ್ಷಾಮಕ್ಕೆ ತುತ್ತಾಯ್ತು.

ಲತೀಫ್ ತುಂಬ ವೈಜ್ಞಾನಿಕ ಮನೋಭಾವದ ವೈದ್ಯ. ತನ್ನ ಕಣ್ಣೆದುರು ಸಂಭವಿಸಿದ ಘೋರ ದುರಂತದ ಚಿತ್ರಣವನ್ನು ದಿನಚರಿಯ ರೂಪದಲ್ಲಿ ಬರೆದಿಟ್ಟಿದ್ದಾನೆ. ಪ್ರಾಚೀನ ಕಾಲದಲ್ಲಿ ಕ್ಷಾಮಕ್ಕೆ ತುತ್ತಾಗುವ ರಾಜ್ಯಗಳ ಬವಣೆ ಹೇಗಿರುತ್ತಿತ್ತೆಂಬುದಕ್ಕೆ ಲತೀಫನ ವರದಿಗಳು ಅಮೋಘ ಉದಾಹರಣೆಗಳಾಗಿವೆ. ಕೈರೋ ಹೊರವಲಯದಲ್ಲಿ ಕ್ಷಾಮದಿಂದ ಸತ್ತವರ ಇಪ್ಪತ್ತು ಸಾವಿರ ಹೆಣಗಳನ್ನು ಎಸೆದಿರುತ್ತಾರೆ. ಮರಣೋತ್ತರ ಪರೀಕ್ಷೆ ಇಸ್ಲಾಂ ಧರ್ಮದ ಪ್ರಕಾರ ನಿಷೇಧಿಸಿದ್ದರೂ ಲತೀಫ್ ಅಲ್ಲಿಗೆ ಹೋಗಿ ಸತ್ತವರ ದೇಹಗಳ ಅಸ್ಥಿಪಂಜರಗಳನ್ನು ಪರೀಕ್ಷಿಸುತ್ತಾನೆ. ಮನುಷ್ಯನ ಕೆಳದವಡೆಯ ಮೂಳೆ ಎರಡು ಮೂಳೆಗಳ ಜೋಡಣೆ ಎಂದು ಅಲ್ಲಿಯವರೆಗೂ ನಂಬಿದ್ದು ಸುಳ್ಳು, ಅದು ಒಂದೇ ಮೂಳೆಯ ರಚನೆ ಎಂದು ಲತೀಫನಿಗೆ ಅಲ್ಲಿ ಗೊತ್ತಾಗುತ್ತದೆ. ಇಸ್ಲಾಮಿಕ್ ಪಂಡಿತರ ತಿಳುವಳಿಕೆಗೆ ವ್ಯತಿರಿಕ್ತವಾಗಿ ಲತೀಫ್ ಮಾತಾಡಿದ್ದರಿಂದ ಅವನ ಮೇಲೆ ಹೆಣಗಳ ಮರಣೋತ್ತರ ಪರೀಕ್ಷೆಯ ಅಪವಾದ ಹೊರಿಸಿ ಆತನನ್ನು ಕೈರೋದಿಂದ ಹೊರಹಾಕಲಾಯ್ತು. ಆತನನ್ನು ಗಡೀಪಾರು ಮಾಡಿದ ಮೇಲೂ ಲತೀಫ್ ತನ್ನ ವಿಶ್ವಪರ್ಯಟನ ಮತ್ತು ಜ್ಞಾನಾರ್ಜನೆಯನ್ನು ಮುಂದುವರಿಸಿದ. ಅಲ್ಲದೆ ಈ ಅವಧಿಯಲ್ಲಿ ಸುಮಾರು ನೂರ ಅರುವತ್ತೈದು ಪುಸ್ತಕಗಳನ್ನು ಬರೆದ. ಮನುಷ್ಯನ ದೇಹ ರಚನೆಯ ಮೇಲೆ ಬರೆದ ಆತನ ಪುಸ್ತಕ ಆಧುನಿಕ ವಿಜ್ಞಾನ ಕಾಲಿಡುವವರೆಗೂ ಎಲ್ಲ ವೈದ್ಯ ಪದ್ಧಿತಿಗಳಿಗೂ ಆಧಾರ ಗ್ರಂಥವಾಗಿತ್ತು. ಇವತ್ತು ಲತೀಫ್ ಪ್ರಖ್ಯಾತನಾಗಿರುವುದು ಈಜಿಪ್ಟಿನ ಕ್ಷಾಮದ ಬಗ್ಗೆ ಅವನು ಕೊಟ್ಟಿರುವ ದಾಖಲೆಗಳಿಗಾಗಿ. ಆತ ರಚಿಸಿದ ಮಿಕ್ಕ ಪುಸ್ತಕಗಳನೆಲ್ಲಾ ಕಾಲಗರ್ಭದಲ್ಲಿ ಕಣ್ಮರೆಯಾಗಿವೆ! ಅಬುದ್ ಅಲ್ ಲತೀಫ್ ತನ್ನ ಅರುವತ್ತೊಂಬತ್ತನೇ ವಯಸ್ಸಿನಲ್ಲಿ ಮೆಕ್ಕಾ ಯಾತ್ರೆ ಹೊರಟಾಗ ದಾರಿಯಲ್ಲೇ ನಿಧನನಾದ.

ಈಜಿಪ್ಟನ್ನು ಚರಿತ್ರಕಾರರು ನೈಲ್ ನದಿಯ ಸೃಷ್ಟಿ ಎಂದೇ ಕರೆಯುತ್ತಾರೆ. ಉತ್ತರ ಆಫ್ರಿಕಾದ ಬಹು ಭಾಗವನ್ನೆಲ್ಲಾ ಆವರಿಸಿದ ಸಹರಾ ಮರುಭೂಮಿಯ ಒಂದು ಭಾಗವಾಗಿರುವ ಈಜಿಪ್ಟ್ ದೇಶ ನೈಲ್ ನದಿ ಇಲ್ಲದಿದ್ದರೆ ಜನವಿಹೀನ ಮರುಭೂಮಿಯ ವಿಸ್ತರಣೆಯಾಗಿ ಪರ್ಯಾವಸಾನವಾಗುತ್ತಿತ್ತು. ಮಧ್ಯ ಆಫ್ರಿಕಾದ ದಟ್ಟ ಕಾಡುಗಳ ನಡುವಿನ ಪರ್ವತಗಳಿಂದ ಉದ್ಭವಿಸುವ ನೈಲ್ ನದಿ ಮಿಕ್ಕ ನದಿಗಳಂತೆ ಎಡಕ್ಕೋ ಬಲಕ್ಕೋ ತಿರುಗಿ ಹರಿದು ಕೆಂಪು ಸಮುದ್ರ ಅಥವಾ ಅಟ್ಲಾಂಟಿಕ್ ಸಮುದ್ರ ಸೇರದೆ ಉತ್ತರಕ್ಕೆ ಹರಿಯುತ್ತಾ ಬಹು ದೂರದ ಮೆಡಿಟರೇನಿಯನ್ ಸಮುದ್ರ ಸೇರುತ್ತದೆ. ಇದು ಜಗತ್ತಿನ ಅತ್ಯಂತ ಉದ್ದವಾದ ನದಿ. ಇತಿಹಾಸಪೂರ್ವ ಕಾಲದಿಂದ ಇಂದಿನವರೆಗೂ ನೈಲ್ ನದಿಯ ದಡದ ಮೇಲೆ ರೂಪುಗೊಂಡ ನಾಗರಿಕತೆಗಳೆಲ್ಲವೂ ನೈಲ್ ನದಿಯ ನೀರಾವರಿಯನ್ನು ಅವಲಂಬಿಸಿಯೇ ರೂಪುಗೊಂಡವು ನೈಲ್ ನದಿಯ ಏರಿಳಿತಗಳು ಈಜಿಪ್ಟ್‌ದೇಶದ ನಾಗರೀಕತೆಯ ಮೇಲೆ ದಟ್ಟವಾದ ಪ್ರಭಾವ ಬೀರಿರುವುದನ್ನು ಇತಿಹಾಸದಾದ್ಯಂತ ನಾವು ಕಾಣಬಹುದು. ಸಹಸ್ರಾರು ವರ್ಷಗಳಿಂದ ಈಜಿಪ್ಟಿನ ಜನರು ನೈಲ್ ನದಿಯ ಉಬ್ಬರವಿಳಿತಗಳನ್ನು ಭಯ ಕಾತರ ಶಂಕೆಗಳಿಂದ ಕಾಯುತ್ತಿದ್ದರು.

ಪ್ರತಿ ವರ್ಷ ನೈಲ್ ನದಿಯ ಮಟ್ಟ ಜೂನ್ ತಿಂಗಳ ಕೊನೆಯ ಹೊತ್ತಿಗೆ ಪ್ರವಾಹದಿಂದ ಏರಲು ಶುರುವಾಗುತ್ತದೆ. ನೈಲ್ ನದಿಯ ಎಡಬಲದ ದಂಡೆಗಳಲ್ಲಿ ಸಹಸ್ರಾರು ಮೈಲಿ ವಿಸ್ತಾರದ ಮಟ್ಟವಾದ ಬಯಲಿದೆ. ಪ್ರವಾಹದಲ್ಲಿ ನೀರಿನ ಮಟ್ಟ ಏರುತ್ತಲೂ ನದಿಯ ನೀರು ಈ ಬಯಲನ್ನು ಆಕ್ರಮಿಸುತ್ತದೆ. ಸೆಪ್ಟೆಂಬರ್‌ವರೆಗೂ ಈ ಬಯಲುಗಳ ಮೇಲೆ ನಿಲ್ಲುವ ನದಿಯ ಅನಂತರ ನದಿಯ ಪ್ರವಾಹ ಇಳಿಮುಖವಾಗುತ್ತಿದ್ದಂತಯೇ ಮೆಲ್ಲಗೆ ಹಿಂದೆ ಸರಿಯಲು ಶುರುವಾಗುತ್ತದೆ. ಹೀಗೆ ಹಿಂದೆ ಸರಿದ ನದಿ ಮಧ್ಯ ಆಫ್ರಿಕಾದಿಂದ ಹೊತ್ತು ತಂದ ಫಲವತ್ತಾದ ಮೆಕ್ಕಲು ಮಣ್ಣನ್ನು ಈಜಿಪ್ಟಿನ ವ್ಯವಸಾಯ ಭೂಮಿಯ ಮೇಲೆ ಕೂರಿಸಿ ಹಿಮ್ಮರಳುವುದರಿಂದ ಸಾವಿರಾರು ವರ್ಷಗಳಿಂದಲೂ ನದಿ ಮುಖಜ ಭೂಮಿಯಾದ ಈಜಿಪ್ಟ್ ಸಂಪದ್ಭರಿತ ದೇಶವಾಗಿದೆ. ರೈತರಿಗೆ ನೈಲ್ ನದಿ ವರಪ್ರಸಾದವಾಗಿದೆ.

ಪ್ರಾಚೀನ ಕಾಲದಲ್ಲಿ ನೈಲ್ ನದಿಯ ಪ್ರವಾಹ ಕೃಷಿ ಭೂಮಿಯ ಮೇಲೆ ಹದಿನಾರು ಮೊಳಗಳಷ್ಟು ಎತ್ತರಕ್ಕೆ ನಿಂತರೆ ಮಾತ್ರ ರೈತರಿಗೆ ಕಂದಾಯ ವಿಧಿಸಲಾಗುತ್ತಿತ್ತು ಎಂದರೆ ಉತ್ತಮ ಬೆಳೆ ಬರಲು ಇಷ್ಟು ಎತ್ತರ ನೀರು ನಿಲ್ಲುವುದು ಕನಿಷ್ಠ ಅಗತ್ಯವಾಗಿತ್ತು. ನೈಲ್ ನದಿ ನೀರು ಹದಿನೆಂಟು ಮೊಳಗಳಷ್ಟು ಎತ್ತರ ನಿಂತರೆ ಇದನ್ನು ಸುಲ್ತಾನ್ ಮಟ್ಟ ಎಂದು ಕರೆಯುತ್ತಿದ್ದರು. ಹದಿನೆಂಟು ಮೊಳ ಎತ್ತರ ನೀರು ನಿಂತಾಗಲೆಲ್ಲಾ ಈಜಿಪ್ಟಿನ ರೈತರು ಒಂದೇ ವರ್ಷಕ್ಕೆ ಎರಡು ವರ್ಷಗಳಿಗಾಗುವಷ್ಟು ದವಸ ಧಾನ್ಯಗಳನ್ನು ಬೆಳೆಯುತ್ತಿದ್ದರು. ಅಷ್ಟು ಎತ್ತರ ನಿಂತಾಗ ನೀರು ನಿಲ್ಲುವ ಹರಹು ಇನ್ನೂ ವಿಸ್ತಾರವಾಗುತ್ತಿದ್ದುದೂ ಆಹಾರದ ಉತ್ಪಾದನೆ ದ್ವಿಗುಣಗೊಳ್ಳುತ್ತಿದ್ದುದ್ದಕ್ಕೆ ಒಂದು ಕಾರಣ. ಆದರೆ ಇಪ್ಪತ್ತು ಮೊಳಕ್ಕಿಂತಲೂ ಹೆಚ್ಚು ಎತ್ತರಕ್ಕೆ ನಿಂತರೆ ಆಗ ಆಹಾರದ ಉತ್ಪಾದನೆ ಕಡಿಮೆಯಾಗುತ್ತದೆ. ಏಕೆಂದರೆ ಪ್ರವಾಹದ ನೀರು ತುಂಬಾ ವಿಸ್ತಾರದಲ್ಲಿ ನಿಲ್ಲುವುದರಿಂದ ಬೇಗ ನೀರು ಇಳಿಯದೆ ರೈತರಿಗೆ ಬಿತ್ತನೆ ಮಾಡುವುದಕ್ಕೆ ಅಡಚಣೆಯಾಗುತ್ತದೆ. ನೈಲ್ ನದಿಯ ನೀರು ಹದಿನಾರು ಮೊಳಕ್ಕಿಂತ ಕಡಿಮೆಯಾದರೆ ಮಾತ್ರ ಈಜಿಪ್ಟ್ ಕ್ಷಾಮದ ದವಡೆಗೆ ಸಿಕ್ಕಿಕೊಳ್ಳುತ್ತಿತ್ತು. ಎರಡು ವರ್ಷ ನಿರಂತರವಾಗಿ ಹದಿನಾರು ಮೊಳಕ್ಕಿಂತಲೂ ಕಡಿಮೆ ಪ್ರವಾಹ ಬಂದರಂತೂ ಈಜಿಪ್ಟ್ ತತ್ತರಿಸುವಂಥ ಕ್ಷಾಮಕ್ಕೆ ಸಿಕ್ಕಿಕೊಂಡು ಆಹಾರದ ಅಭಾವ, ರೋಗ ರುಜಿನಗಳು, ಜನಗಳ ವಲಸೆ, ಅನಾಯಕತ್ವ ಮೊದಲಾದವುಗಳು ಪ್ರಾರಂಭವಾಗುತ್ತಿದ್ದುವು. ನೈಲ್ ನದಿಯನ್ನು ಸಂಪೂರ್ಣವಾಗಿ ಅವಲಂಬಿಸಿದ್ದ ಈಜಿಪ್ಟಿನ ನಾಗರಿಕತೆಯ ಇತಿಹಾಸದಲ್ಲಿ ಇಸ್ಲಾಮಿಕ್ ಶಕೆ ಆರಂಭವಾದಾಗಿನಿಂದ, ಎಂದರೆ (ಕ್ರಿಸ್ತಶಕ 625) ಕೇವಲ ಹತ್ತು ಸಾರಿ ನೈಲ್ ನದಿ ತನ್ನ ಪ್ರವಾಸ ಮಟ್ಟ ಮುಟ್ಟಲು ಅಶಕ್ಯವಾಗಿರುವುದು ಲತೀಫ್ ವಿವರಣೆಗಳಿಂದ ತಿಳಿಯುತ್ತದೆ. ಈಜಿಪ್ಟ್ ಅನುಭವಿಸಿದ ಅತಿ ಘೋರ ಕ್ಷಾಮ ಎಂದರೆ ಇವತ್ತಿಗೆ ಎಂಟು ನೂರು ವರ್ಷಗಳ ಹಿಂದೆ 1200ನೇ ಇಸ್ವಿಯಲ್ಲಿ. ಅಂತರರಾಷ್ಟ್ರೀಯ ನೆರವು ಕೂಡಲೇ ದೊರೆಯುವ ಈಗಿನ

ಕಾಲದಲ್ಲಿ ಹಿಂದೆಲ್ಲಾ ಬರುತ್ತಿದ್ದ ಕ್ಷಾಮಗಳ ಅವರ್ಣನೀಯ ದುರಂತವನ್ನು ಊಹಿಸುವುದು ಕಷ್ಟ. ಸರಕು ಸಾಗಾಣಿಕೆ ಸೌಲಭ್ಯಗಳಾಗಲೀ ಸಂಪರ್ಕ ಸಾಧನಗಳಾಗಲೀ ಬಹಳ ಕಡಿಮೆ ಇದ್ದ ಆ ಕಾಲದಲ್ಲಿ ಈಜಿಪ್ಟ್ ಎಂಥ ಭೀಕರ ಕ್ಷಾಮಕ್ಕೆ ತುತ್ತಾಯ್ತು ಎಂಬುದರ ಸವಿವರ ವರ್ಣನೆ ಆಗ ಈಜಿಪ್ಟಿನಲ್ಲಿ ಬದುಕಿದ್ದ ಪ್ರತ್ಯಕ್ಷದರ್ಶಿ ಅಬುದ್ ಅಲ್ ಲತೀಫ್‌ನ ವರದಿಗಳ ಮುಖಾಂತರವೇ ನೋಡಬಹುದು.

"ಬೇಸಿಗೆ ಎಂದಿನಂತೆ ಈಜಿಪ್ಟಿನಲ್ಲಿ ಶುರುವಾಗಿತ್ತು. ಯಥಾ ಪ್ರಕಾರ ನೈಲ್ ನದಿಯ ಪ್ರವಾಸ ಜೂನ್ ಕೊನೆಯ ಹೊತ್ತಿಗೆ ಏರುವ ಸೂಚನೆಗಳಿದ್ದುವು. ಆದರೆ ಒಂದು ತಿಂಗಳ ಹಿಂದೆ ನೈಲ್ ನದಿಯ ನೀರು ಇದ್ದಕ್ಕಿದ್ದಂತೆ ಹಸುರು ಬಣ್ಣಕ್ಕೆ ತಿರುಗಿದ್ದನ್ನು ಈಜಿಪ್ಟಿನ ಜನರು ಗಮನಿಸಿ ಚಿಂತಾಕ್ರಾಂತರಾಗಿದ್ದರು. ನದಿಯ ನೀರು ಹಸುರಾಗಿದ್ದುದಲ್ಲದೆ ರುಚಿ ಕಳೆದುಕೊಂಡು ಕುಡಿಯಲು ಸಹ ಕಷ್ಟವಾಗಿತ್ತು. ಈಜಿಪ್ಟಿನ ಜನ ನದಿ ನೀರು ಕುಡಿಯುವುದನ್ನು ಬಿಟ್ಟು ಬಾವಿಗಳಿಂದ ನೀರು ಸೇದಿ ಉಪಯೋಗಿಸಲು ಶುರುಮಾಡಿದ್ದರು! ಈಜಿಪ್ಟ್ ದೇಶ ನೈಲ್ ನದಿಯನ್ನು ಎಷ್ಟೊಂದು ಅವಲಂಬಿಸಿತ್ತೆಂದರೆ ನೈಲ್ ನದಿಯಲ್ಲಿ ಏನೇನು ಏರುಪೇರಾದರೂ ಜನ ಕಾತರದಿಂದ ಅವಲೋಕಿಸುತ್ತಿದ್ದರು. ರುಚಿಗೆಟ್ಟು ಬಣ್ಣ ಬದಲಿಸಿ ಹರಿಯುತ್ತಿದ್ದ ನದಿ ನೀರನ್ನು ಕಂಡು ಅನೇಕರು ಇದು ಯಾವುದೋ ಮುಂಬರಲಿರುವ ಅಶುಭದ ಸಂಕೇತವೆಂದು ಚಿಂತಾಕ್ರಾಂತರಾದರು. ತೆಳು ಹಸುರು ಬಣ್ಣಕ್ಕೆ ಶುರುವಾದ ನದಿ ನೀರು ನಿಧಾನವಾಗಿ ಗಾಢ ಹಸುರಾಗುತ್ತಾ ಬಂದು ಕೆಟ್ಟ ವಾಸನೆ ಸಹ ಶುರುವಾಯ್ತು. ಕೆಲವು ವರ್ಷಗಳ ಹಿಂದೆ ಇಲ್ಲಿನ ಅಲ್ ಅಜಾರ್ ಅರ್‍ಯಾಬಿಕ್ ವಿಶ್ವವಿದ್ಯಾಲಯದಲ್ಲಿ ಬೋಧನೆ ಮಾಡಲು ಬಂದಿದ್ದ ನನ್ನ ಬಳಿಗೆ ಈಜಿಪ್ಟಿನ ನಾಗರಿಕರು ದೊಡ್ಡ ಕೊಡಗಳಲ್ಲಿ ನೈಲ್ ನದಿಯ ನೀರನ್ನು ಹೊತ್ತು ತಂದು "ಇದೇಕೆ ಹೀಗಾಗಿದೆ ಪರೀಕ್ಷಿಸಿ ಹೇಳು" ಎಂದು ಕೇಳಿದರು. ನಾನು ಆ ನೀರನ್ನು ಒಯ್ದು ಅನೇಕ ಪ್ರಯೋಗ ನಡೆಸಿದೆ. ಕಾಯಿಸಿದರೂ ಸಹ ಆ ನೀರು ಜನರ ಬಳಕೆಗೆ ಅರ್ಹವಾಗಲಿಲ್ಲ. ಅಲ್ಲದೆ ಆ ನೀರಿನಲ್ಲಿ ಅನೇಕ ಸಸ್ಯಮೂಲ ಕಲ್ಮಶಗಳು ಕರಗಿದಂತೆ ಸೇರಿರುವುದು ನನಗೆ ಕಂಡು ಬಂತು. ಹಾಗಿದ್ದರೆ ಈ ನದಿ ಹರಿದು ಬರುವ ಅಗಾಧ ಜೌಗುಗಳಲ್ಲೂ, ಅದು ಹುಟ್ಟುವ ಜಾಗದಲ್ಲೂ ಅನಾವೃಷ್ಟಿಯಿಂದ ನೀರಿನ ಕೊರತೆಯಾಗಿ ಜಲ ಸಸ್ಯಗಳು ಕೊಳೆಯುತ್ತಿರಬಹುದು ಎಂದು ನಾನು ಊಹಿಸಿದೆ. ನನ್ನ ಊಹೆ ನಿಜವಾಗಿದ್ದ ಪಕ್ಷದಲ್ಲಿ ಈಸಾರಿ ನೈಲ್ ನದಿಯ ಪ್ರವಾಹದಲ್ಲಿ ಏರುಪೇರಾಗ ಬಹುದೆಂದು ಹೇಳಿದೆ. ಆದರೆ ಈಜಿಪ್ಟಿನ ಜನರು ನನ್ನ ಮಾತನ್ನು ನಂಬಲು ತಯ್ಯಾರಿರಲಿಲ್ಲ. ಏಕೆಂದರೆ ತಲೆತಲಾಂತರದಿಂದಲೂ ನೈಲ್ ನದಿಯ ಪ್ರವಾಹ ವಿಫಲವಾಗಿದ್ದ ಒಂದೇ ಒಂದು ದಾಖಲೆಯೂ ಇರಲಿಲ್ಲ.

ಬೇಸಿಗೆ ಮುಂದುವರಿದಂತೆ ನಿಧಾನವಾಗಿ ನೀರಿನ ಬಣ್ಣ ಎಂದಿನ ಸ್ಥಿತಿಗೆ ಮರಳಿತು. ಅಲ್ಲದೆ ನೀರಿನಲ್ಲಿದ್ದ ವಾಸನೆ ಸಹ ಕಡಿಮೆಯಾಯ್ತು. ಕೊಂಚ ದಿನಗಳಲ್ಲೆ ಹಿಂದೆಲ್ಲಾ ಪ್ರವಾಹ

ಬರುತ್ತಿದ್ದಂತೆಯೇ ನೈಲ್ ನದಿ ಪ್ರವಾಹದಲ್ಲಿ ಏರಲು ಶುರುವಾಗಿದ್ದು ನೋಡಿ ಕಾತರರಾಗಿದ್ದ ಜನ ಸಮಾಧಾನದ ನಿಟ್ಟುಸಿರು ಬಿಟ್ಟರು.

ಆದರೆ ಪ್ರವಾಹ ಎಂದಿನಂತೆ ಇರಲಿಲ್ಲ. ನದಿಯ ನೀರಿನ ಮಟ್ಟ ಏರಿದ್ದು ಬಹಳ ನಿಧಾನ! ಅಲ್ಲದೆ ಅದು ಏರಿದ ಗರಿಷ್ಠ ಮಟ್ಟ ಎಂದರೆ ಹನ್ನೆರಡು ಮೊಳ ಇಪ್ಪತ್ತೊಂದು ಗೇಣು ಮಾತ್ರ! ಇನ್ನೂ ಏರಬಹುದೆಂದು ಜನ ನಿರೀಕ್ಷಿಸುತ್ತಿದ್ದಂತೆಯೇ ಅದಕ್ಕೆ ವ್ಯತಿರಿಕ್ತವಾಗಿ ನೀರು ನಿಧಾನವಾಗಿ ಹಿಮ್ಮೆಟ್ಟಿ ಇಳಿಯಲು ಶುರುವಾಯ್ತು! ಮುಂಬರುವ ವರ್ಷ ಕ್ಷಾಮ ಕಟ್ಟಿಟ್ಟ ಬುತ್ತಿ ಎಂದು ಗೊತ್ತಾಗಿದ್ದೇ ತಡ ವ್ಯಾಪಾರಿಗಳು, ರೈತರು ತಮ್ಮ ಬಳಿ ಇದ್ದ ದವಸ ಧಾನ್ಯಗಳನ್ನೆಲ್ಲಾ ಭದ್ರ ಮಾಡಲು ಶುರು ಮಾಡಿದರು. ಇಲ್ಲದವರು ಯದ್ವಾತದ್ವಾ ಬೆಲೆ ಕೊಟ್ಟು ಕೊಳ್ಳಲು ಶುರು ಮಾಡಿದರು. ಕ್ಷಾಮ ಸಂಭವಿಸುವ ಎಷ್ಟೋ ಮೊದಲೇ ಕ್ಷಾಮ ಪರಿಸ್ಥಿತಿ ಕಾಲಿಟ್ಟಿತು. ಬಡಬಗ್ಗರ ಕೈಗೆ ಆಹಾರರ ಮತ್ತು ದವಸ ಧಾನ್ಯಗಳು ಎಟುಕದ ವಸ್ತುಗಳಾದವು. ಗ್ರಾಮಾಂತರಗಳಲ್ಲಿದ್ದ ಹಳ್ಳಿಗರೆಲ್ಲಾ ನಗರಗಳಿಗೆ ವಲಸೆ ಹೋದರೆ ಏನಾದರೂ ಆಹಾರ ಸಕ್ಕೀತೆಂದು ವಲಸೆ ಬರಲಾರಂಭಿಸಿದರು. ಇದಲ್ಲದೆ ಈಜಿಪ್ಟಿನ ನೆರೆಹೊರೆಯಲ್ಲಿದ್ದ ಇತರ ದೇಶಗಳತ್ತ ಅಗಾಧ ಸಂಖ್ಯೆಯಲ್ಲಿ ವಲಸೆ ಶುರುವಾಯ್ತು. ನೂರಾರು ಮೈಲಿ ಪ್ರಯಾಣ ಮಾಡಬೇಕಾಗಿದ್ದ ಅವರಲ್ಲಿ ಅರ್ಧದಷ್ಟು ಜನ ಗುರಿ ಮುಟ್ಟದೆ ಮಾರ್ಗ ಮಧ್ಯೆಯೇ ಸಾಯುತ್ತಿದ್ದರು. ಕೈರೋ ನಗರದಿಂದ ಬಾಗ್ದಾದ್‌ವರೆಗೆ ಇರುವ ದಾರಿಯ ಅಕ್ಕಪಕ್ಕದಲ್ಲಿ ವಲಸೆ ಹೊರಟವರ ಹೆಣಗಳ ಸಾಲುಸಾಲುಗಳೇ ಬಿದ್ದಿರುತ್ತಿದ್ದವು. ಹೆಣಗಳನ್ನು ತಿನ್ನಲು ಹದ್ದು ಗಿಡುಗಗಳು ರಸ್ತೆ ಪಕ್ಕದ ಮರಗಳಲ್ಲಿ ಕಿಕ್ಕಿರಿದಿರುತ್ತಿದ್ದುವು. ನರಿಗಳೂ ತೋಳಗಳೂ ಅಶಕ್ತರಾದವರನ್ನೂ ಬಳಲಿದವರನ್ನೂ ಸಾಯುವ ಮೊದಲೇ ಹಿಡಿದು ತಿನ್ನುತ್ತಿದ್ದುವು. ವಲಸೆ ಹೊರಟ ಜನ ಎಷ್ಟೊಂದು ಕಂಗೆಟ್ಟಿದ್ದರೆಂದರೆ ಇದನ್ನೆಲ್ಲ ನಿಸ್ಸಹಾಯಕವಾಗಿ ನೋಡುತ್ತಿದ್ದರೇ ವಿನಃ ಈ ಪಿಡುಗನ್ನು ನಿವಾರಿಸಲು ಯತ್ನಿಸುತ್ತಿರಲಿಲ್ಲ. ಕೈರೋಗೆ ವಲಸೆ ಬರುತ್ತಿದ್ದ ಬಹು ಜನರು ಅಲ್ಲಿಂದ ದೂರ ದೇಶಗಳಿಗೆ ವಲಸೆ ಹೋಗುವಷ್ಟು ಶಕ್ತರಾಗಿರುತ್ತಿರಲಿಲ್ಲ. ಎಲುಬು ಚಕ್ಕಳವಾಗಿರುತ್ತಿದ್ದ ಅವರು ನಗರದಲ್ಲಿ ಸಿಕ್ಕಿಸಿಕ್ಕಿದ್ದನ್ನೆಲ್ಲಾ ತಿನ್ನುತ್ತಿದ್ದುದನ್ನು ನೋಡಿದೆ. ಕ್ಷಾಮ ತೀವ್ರವಾದಂತೆ ಸತ್ತ ಪ್ರಾಣಿಗಳನ್ನು, ನಾಯಿಗಳನ್ನು, ಮನುಷ್ಯ ಮತ್ತು ಪ್ರಾಣಿಗಳ ಪಾಯಿಖಾನೆಯನ್ನು ಸಹ ತಿನ್ನುತ್ತಿದ್ದುದನ್ನು ನಾನು ನೋಡಿದೆ. ಬಹಳ ಕಾಲ ಹೀಗೇ ನಡೆಯಿತು. ಅನಂತರ ಕ್ಷಾಮದಿಂದ ಕಂಗೆಟ್ಟ ಜನ ಮೃಗಸದೃಶರಾದರು. ಚಿಕ್ಕ ಚಿಕ್ಕ ಮಕ್ಕಳನ್ನೂ ಸತ್ತ ಹೆಣಗಳನ್ನೂ ತಿನ್ನಲು ಶುರು ಮಾಡಿದರು."

"ಕ್ಷಾಮ ಮನುಷ್ಯನನ್ನು ಹಸಿವಿನಿಂದ ಸಾಯಿಸುತ್ತದೆ ಎನ್ನುವ ಸತ್ಯ ವಾಸ್ತವದ ಅತಿ ಸರಳೀಕರಣ. ಹಸಿವಿನಿಂದ ನವೆದು ಕಂಗೆಟ್ಟು ಸಾಯುವವರನ್ನು ನಾನು ನೋಡಿದೆ. ಆದರೆ ಕ್ಷಾಮ ಮುಂದುವರಿದಂತೆ ಅತ್ಯಂತ ಸುಸಂಸ್ಕೃತ ನಾಗರೀಕತೆ ಎಂದು ಹೆಸರಾಗಿದ್ದ ಈಜಿಪ್ಟಿನ ಸಮಾಜದ ಎಲ್ಲ ಹಂತಗಳೂ ರಾಕ್ಷಸೀಯವಾಗಿ ಪರಿವರ್ತನೆಗೊಂಡಿದ್ದು ಕಾಣಿಸಿತು. ಧರ್ಮ,

ನ್ಯಾಯ, ಸಂಸ್ಕೃತಿ ಮೊದಲಾದುವು ಮನುಷ್ಯನ ಮೂಲಭೂತ ಪ್ರವೃತ್ತಿಗಳೆ ಎಂದು ನನಗೀಗ ಸಂಶಯ ಉಂಟಾಗಿದೆ. ಹಸಿವಿನಿಂದ ಕಂಗೆಟ್ಟವರು ನಿರ್ಯೋಚನೆಯಿಂದ ನರಭಕ್ಷಣೆಗೆ ಇಳಿಯುವುದನ್ನು ನಾನು ಕಣ್ಣಾರೆ ನೋಡದೆ ಯಾರು ಹೇಳಿದ್ದರೂ ನಂಬುತ್ತಿರಲಿಲ್ಲ. ಚಿಕ್ಕ ಮಕ್ಕಳನ್ನು ಇಡಿಯಾಗಿ ಹುರಿದು ಇಲ್ಲವೇ ಬೇಯಿಸಿ ತಿನ್ನಲು ಸಿದ್ಧಪಡಿಸುತ್ತಿರುವುದು ಕೈರೋ ಬೀದಿಗಳಲ್ಲಿ ದಿನವೂ ಕಾಣಬಹುದಿತ್ತು. ಒಬ್ಬ ಹುಡುಗನನ್ನು ಇಡಿಯಾಗಿ ಹುರಿದು ಬುಟ್ಟಿಯಲ್ಲಿಟ್ಟು ಒಯ್ಯುತ್ತಿರುವ ಇಬ್ಬರು ದಂಪತಿಗಳನ್ನು ರಾಜಭಟರು ಹಿಡಿದು ತಂದಿದ್ದರು. ಅವರಿಬ್ಬರೂ ಆ ಹುಡುಗನ ತಂದೆ ತಾಯಿಗಳೆಂದು ಅವರು ಹೇಳಿದರು. ನ್ಯಾಯಾಧೀಶರು ಇಂಥ ಕ್ರೂರ ಕೃತ್ಯದಲ್ಲಿ ತೊಡಗಿದ್ದಕ್ಕಾಗಿ ಅವರಿಬ್ಬರಿಗೂ ಜೀವಂತವಾಗಿ ಸುಡುವ ಶಿಕ್ಷೆ ವಿಧಿಸಿದರು.

ಇಷ್ಟು ಕಠೋರ ಶಿಕ್ಷೆ ವಿಧಿಸಿದ್ದರೂ ನರಭಕ್ಷಣೆ ವೇಗವಾಗಿ ದೇಶಾದಾದ್ಯಂತ ಹಬ್ಬಿತು. ಮೊದಮೊದಲಿಲ್ಲ ಇಂಥ ಸಂಗತಿಗಳು ನಡೆದಾಗ ಜನ ಗುಂಪುಗೂಡಿ ಭಯದಿಂದ ಅಸಹ್ಯದಿಂದ ಮಾತಾಡುತ್ತಿದ್ದರು. ಆದರೆ ನಿಧಾನವಾಗಿ ಜನ ಈ ವಾರ್ತೆಗಳಿಗೂ ಒಗ್ಗಿಕ್ಕೊಳ್ಳ ತೊಡಗಿದರು. ಮೊದಲು ವಾರ್ತೆಗೆ ಒಗ್ಗಿಕೊಂಡವರು ಅನಂತರ ಆ ರಾಕ್ಷಸೀಯ ಆಹಾರಕ್ಕೇ ಒಗ್ಗಿಕೊಳ್ಳಲು ಶುರು ಮಾಡಿದರು. ಖಾಲಿಯಾದ ಹಳ್ಳಿಗಳ ಮನೆಗಳೊಳಹೊಕ್ಕು ನೋಡಿದರೆ ಉಗ್ರಾಣಗಳಲ್ಲಿ ಮನುಷ್ಯರ ಮೂಳೆಗಳೂ ಚಿಕ್ಕ ಮಕ್ಕಳ ತಲೆಗಳೂ ರಾಶಿ ಬಿದ್ದಿರುತ್ತಿದ್ದವು. ಸಂತೆಗಳಲ್ಲಿ ಹೆಣ್ಣು ಮಕ್ಕಳನ್ನು ಗುಲಾಮ ವ್ಯಾಪಾರಿಗಳಿಗೆ ತಂದೆ ತಾಯಿಗಳು ಒಪ್ಪಿಸುವುದು ಎಲ್ಲೂ ಕಾಣುವ ದೃಶ್ಯವಾಗಿತ್ತು. ಅವು ಇಲ್ಲೇ ಉಳಿದು ಮನುಷ್ಯರಿಗೆ ಆಹಾರವಾಗುವುದರ ಬದಲು ಗುಲಾಮರಾಗಿಯಾದರೂ ಎಲ್ಲಾದರೂ ಬದುಕಿಕೊಳ್ಳಲಿ ಎಂದೇ ತಂದೆ ತಾಯಿಗಳು ಮಕ್ಕಳು ಮಾರಲು ಮುಂದಾಗುತ್ತಿದ್ದುದು.

ಮನುಷ್ಯರನ್ನು ಬೇಟೆಯಾಡಿದಂತೆ ಅಟ್ಟಾಡಿ ಕೊಲ್ಲುವ ಕ್ರೂರ ಹಂತಕರ ಗುಂಪುಗಳು ಅಲ್ಲಲ್ಲಿ ರೂಪಗೊಂಡಿದ್ದುವು. ಇವರಿಂದೆಲ್ಲಾ ಹೇಗೋ ತಪ್ಪಿಸಿಕೊಂಡು ಜೀವ ಉಳಿಸಿಕೊಂಡರೂ ಹೊಟ್ಟೆಗಿಲ್ಲದೆ ಸಾಯುವ ಅನಿವಾರ್ಯತೆಯನ್ನು ಮಾತ್ರ ತಪ್ಪಿಸಿಕೊಳ್ಳಲು ಸಾಧ್ಯವಿರಲಿಲ್ಲ. ಈಜಿಪ್ಟಿನ ಪ್ರತಿ ನಗರಗಳಲ್ಲೂ ಪ್ರತಿ ದಿನ ನೂರರಿಂದ ಐನೂರು ಜನ ಸಾಯುತ್ತಿದ್ದರು. ಅವರಿಗೆಲ್ಲಾ ಶವಸಂಸ್ಕಾರ ಮಾಡಲು ಯಾರೂ ಇರಲಿಲ್ಲ. ಸುಮ್ಮನೆ ಹೊತ್ತು ಅವರ ಶವವನ್ನು ಊರಾಚೆ ಎಸೆದು ಬರುತ್ತಿದ್ದರು. ಅವರನ್ನು ಹಸಿದ ಮನುಷ್ಯರೇ ತಿಂದರೋ! ನಾಯಿ ನರಿಗಳು ತಿಂದುವೋ ತಿಳಿಯಲು ಯಾರಿಗೂ ಕುತೂಹಲ ಉಳಿದಿರಲಿಲ್ಲ.

ಕೈರೋ ನಗರ ಮತ್ತು ಅದರ ಸುತ್ತಮುತ್ತ ಇರುವ ಊರುಗಳೆಲ್ಲಾ ಕಾಲ ಕಳೆದಂತೆ, ಕ್ಷಾಮ ಮುಂದುವರಿದಂತೆ ನಿಃಶಬ್ದವಾದುವು. ಒಂದೇ ಒಂದು ನರ ಪ್ರಾಣಿಯೂ ಇದಿರಾಗದೆ ಪ್ರವಾಸಿಯೊಬ್ಬ ನಗರಗಳಲ್ಲಿ ಅಡ್ಡಾಡಬಹುದಿತ್ತು. ತೆರೆದ ಬಾಗಿಲುಗಳೊಳಗೆ ಇಣುಕಿದರೆ ಅಸ್ಥಿಪಂಜರಗಳು ಕಾಣುತ್ತಿದ್ದುವು.

1201ನೇ ಇಸ್ವಿ ಏಪ್ರಿಲ್‌ನಲ್ಲಿ ಮತ್ತೆ ನೈಲ್ ನದಿಯ ನೀರು ನಿಧಾನವಾಗಿ ಹಸಿರು ಬಣ್ಣಕ್ಕೆ ತಿರುಗಲು ಶುರುವಾಯ್ತು. ಈಜಿಪ್ಟಿನಲ್ಲಿ ಹೇಗೋ ಎಲ್ಲ ಸರಿ ಹೋದೀತೆಂಬ ಆಶಾಭಾವನೆಯಲ್ಲಿ ಬದುಕಿ ಉಳಿದಿದ್ದ ಜನರು ಮತ್ತೊಮ್ಮೆ ನೈಲ್ ನದಿಯ ನೀರು ಬಣ್ಣಗೆಟ್ಟು ವಾಸನೆ ಬರಲು ಶುರುವಾಗಿದ್ದನ್ನು ನೋಡಿ ಅದುರಿಹೋದರು. ಈಜಿಪ್ಟಿಗೆ ಭಯಂಕರ ಶಾಪ ತಗುಲಿದೆ ಎಂಬುದು ಸ್ಥಿರವಾಯ್ತು. ಎರಡು ತಿಂಗಳ ನಂತರ ಕಳೆದಸರಿಯಂತೆಯೇ ನದಿ ನೀರು ಸ್ವಚ್ಛವಾಗಿ ನಿಧಾನವಾಗಿ ಪ್ರವಾಹ ಏರಲು ಶುರುವಾಯ್ತು. ಆದರೆ ಎಂದಿನಂತೆ ವೇಗವಾಗಿ ಪ್ರವಾಹ ಏರಲಿಲ್ಲ. ಈ ಸಾರಿ ನೈಲ್ ಪ್ರವಾಹ ಮುಟ್ಟಿದ ಗರಿಷ್ಠ ಮಟ್ಟವೆಂದರೆ ಹದಿನಾಲ್ಕು ಮೊಳ ಹದಿನಾರು ಗೇಣು. ನೀರು ಹದಿನಾರು ಮೊಳದೆತ್ತರಕ್ಕೆ ಏರಲೇ ಇಲ್ಲ. ಈ ಸಾರಿಯೂ ಬರ ಪರಿಸ್ಥಿತಿ ಮುಂದುವರಿಯುತ್ತದೆನ್ನುವುದು ಈಜಿಪ್ಟಿನ ಜನರಿಗೆ ಖಚಿತವಾಯ್ತು.

ಸಾಮಾನ್ಯ ಪರಿಸ್ಥಿತಿಯಲ್ಲಾಗಿದ್ದರೆ ಕ್ಷಾಮ ತಡೆಗಟ್ಟುವ ಮಟ್ಟಿಗಾದರೂ ಬೆಳೆ ಬೆಳೆಯುವಷ್ಟು ನೀರಾವರಿಯಾಗಿತ್ತು. ಹಿಂದಿನ ವರ್ಷ ಬಂದ ಘೋರ ಕ್ಷಾಮದ ದೆಸೆಯಿಂದ ಈಜಿಪ್ಟಿನ ರೈತರು ಜರ್ಝರಿತರಾಗಿದ್ದರು. ಬಿತ್ತನೆ ಕಾಳುಗಳನ್ನು ಸಹ ಆಹಾರವಾಗಿ ಉಪಯೋಗಿಸಿ ಜೀವ ಉಳಿಸಿಕೊಂಡಿದ್ದರು. ನೀರಾವರಿಯಾದ ಭೂಮಿಯಲ್ಲೂ ವ್ಯವಸಾಯ ಮಾಡುವಷ್ಟು ತ್ರಾಣವೇ ಅವರಿಗೆ ಇರಲಿಲ್ಲ. ಇನ್ನು ಭೂರಹಿತ ಕೃಷಿ ಕಾರ್ಮಿಕರಂತೂ ಹಸಿವಿನಿಂದ ಸತ್ತೇ ಹೋಗಿದ್ದರು, ಇಲ್ಲವೇ ಹಸಿದವರಿಗೆ ಆಹಾರವಾಗಿದ್ದರು.

ಈ ಸಾರಿಯ ಕ್ಷಾಮದಲ್ಲಿ ನರಭಕ್ಷಣೆಯ ಹಾವಳಿ ಹೋದಸಾರಿಯಷ್ಟು ಇರಲಿಲ್ಲ. ಇಡೀ ಈಜಿಪ್ಟಿನ ಜನಸಂಖ್ಯೆಯೇ ಇನ್ನಿಲ್ಲದಷ್ಟು ಕುಗ್ಗಿಹೋಗಿದ್ದು ಇದಕ್ಕೆ ಬಹು ಮುಖ್ಯ ಕಾರಣವೇ ಹೊರತು ನರಭಕ್ಷಣೆಯ ನಿರಾಕರಣೆಯಲ್ಲ. ಈ ಬಾರಿ ದೇಶದ ಎಲ್ಲಡೆಯಲ್ಲೂ ಉಲ್ಬಣಿಸಿದ ಸಾಂಕ್ರಾಮಿಕ ರೋಗಗಳು ಲೆಕ್ಕವಿಲ್ಲದಷ್ಟು ಜನರನ್ನು ಬಲಿ ತೆಗೆದುಕೊಂಡವು. ಅಲೆಗ್ಸಾಂಡ್ರಿಯ ನಗರ ಒಂದರಲ್ಲೇ ಇಮಾಮರು ದಿನಕ್ಕೆ ಏಳುನೂರು ಶವಸಂಸ್ಕಾರ ಮಾಡುತ್ತಿದ್ದರು. ಈಜಿಪ್ಟ್‌ನ ದೇಶದಲ್ಲಿ ಎರಡು ಕ್ಷಾಮಗಳಿಂದ ಸತ್ತವರ ಸಂಖ್ಯೆ ಹದಿನೇಳುಲಕ್ಷ ಇರಬಹುದೆಂದು ಅಧಿಕೃತ ಅಂದಾಜು ಇದ್ದರೂ ಸರ್ಕಾರದ ಲೆಕ್ಕಕ್ಕೆ ಸಿಕ್ಕದೆ ಸತ್ತವರು ಇದರ ಎರಡರಷ್ಟು ಇರಬಹುದು ಎಂದು ನನಗೆ ಅನ್ನಿಸುತ್ತದೆ.

ಈ ಎಲ್ಲ ದುರಂತಗಳಿಗೆ ಕಲಶವಿಟ್ಟಂತೆ 1202ನೇ ಇಸ್ವಿ ಮೇ ಇಪ್ಪತ್ತನೇ ತಾರೀಖು ಈಜಿಪ್ಟ್ ಇತಿಹಾಸದಲ್ಲೇ ಕೇಳಿಲ್ಲದ ಭಯಾನಕ ಭೂಕಂಪಕ್ಕೆ ತುತ್ತಾಯ್ತು. ಸಿರಿಯಾ ಆರ್ಮೇನಿಯಾವರೆಗೂ ಅದುರಿದ ಭೂಕಂಪದ ಕೇಂದ್ರ ಈಜಿಪ್ಟ್. ದುರಸ್ತಿ ಕಾಣದೆ ಹಾಳು ಬಿದ್ದಿದ್ದ ಊರುಗಳೂ ಮನೆಗಳೂ ಭೂಕಂಪದಲ್ಲಿ ಕುಸಿದು ಬಿದ್ದುವು. ಸಮುದ್ರದಲ್ಲಿ ಭಯಾನಕ ಅಲೆಗಳೆದ್ದು ಆಲೆಗ್ಸಾಂಡ್ರಿಯಾದ ಬಂದರು ನಾಶವಾಯ್ತು. ದಡದಲ್ಲಿ ನಿಂತಿದ್ದ ಹಡಗುಗಳನೇಕವು ಅನೇಕ ಮೈಲಿಗಳವರೆಗೆ ಒಳನಾಡಿಗೆ ತಳ್ಳಲ್ಪಟ್ಟವು. ನೈಲ್ ನದಿಯಂತೂ ಕೆಲವೆಡೆಗಳಲ್ಲಿ ನಡೆದೇ ದಾಟುವಷ್ಟು ತೆಳ್ಳಗೆ ಹರಿಯುತ್ತಿತ್ತು. ಇಂಥ ಸಂದರ್ಭದಲ್ಲೂ

ಮಸೀದಿಗಳಲ್ಲಿ ನಮಾಜು ನಡೆಯುತ್ತಿತ್ತು. ಈಜಿಪ್ಟಿಗೆ ತಗುಲಿದ್ದ ಭಯಂಕರ ಶಾಪ ಪರಿಹಾರಾರ್ಥ ಪ್ರಾರ್ಥನೆಗಳು ನಡೆಯುತ್ತಿದ್ದುವು. ನಾನೂ ಪ್ರಾರ್ಥನೆಯಲ್ಲಿ ಭಾಗವಹಿಸುತ್ತಿದ್ದೆ. ಆದರೆ ನನಗೆ ಮೊದಲಿನ ಶ್ರದ್ಧೆ ನಂಬಿಕೆಗಳು ಇರಲಿಲ್ಲ. ಈಜಿಪ್ಟ್ ನಾಗರೀಕತೆಯ ಅವಸಾನ ಕಾಲ ಇದೆಂದು ನನಗೆ ಅನ್ನಿಸಲಾರಂಭಿಸಿತ್ತು. ಬೇಬಿಲಾನ್ ಮೆಸೆಪೊಟೋಮಿಯ ಗ್ರೀಕ್ ಮುಂತಾದ ಮಹಾ ನಾಗರೀಕತೆಗಳು ಹೇಗೆ ಹೇಳ ಹೆಸರಿಲ್ಲವಾದುವು ಎಂದು ನಾನು ಅನೇಕಸಾರಿ ಆಶ್ಚರ್ಯಪಡುತ್ತಾ ಚಿಂತಿಸಿದ್ದೆ. ಆದರೆ ಈಗ ಎರಡು ವರ್ಷದ ಪ್ರಕೃತಿ ವಿಕೋಪದಿಂದ ಈಜಿಪ್ಟ್ ಜನಸಂಖ್ಯೆ ಶೇಖಡ ಎಪ್ಪತ್ತರಷ್ಟು ನಾಶವಾಗಿದ್ದಲ್ಲದೆ ನಾಗರಿಕ ಸಮಾಜ ಒಂದು ಅನಾಗರಿಕ ಪೈಶಾಚಿಕ ಸಮುದಾಯವಾಗಿ ಪರಿವರ್ತನೆಯಾಗಿದ್ದನ್ನು ನೋಡಿದ್ದೆ.

ಭೂಕಂಪದ ಅನಾಹುತಗಳಿಂದ ಈಜಿಪ್ಟ್ ಚೇತರಿಸಿಕೊಳ್ಳುತ್ತಾ ಇದ್ದಾಗ ಮತ್ತೆ ನೈಲ್ ನದಿಯ ನೀರು ಹಸುರಾಗುತ್ತಿರುವುದನ್ನು ಕಂಡು ಇಡೀ ದೇಶದ ಜನ ಕೊನೆಗಾಲ ಬಂತೆಂದು ಭಾವಿಸಿದರು. ನೈಲ್ ನದಿಯ ಮೂಲದಲ್ಲೇ ಏನೋ ವ್ಯತ್ಯಾಸವಾಗಿ ನೈಲ್ ಹರಿಯುವ ದಿಕ್ಕೇ ಬದಲಾಗಿರಬಹುದೆಂದು ಅನೇಕರು ಶಂಕಿಸಿದರು. ಆದರೆ ಜುಲೈ ಮಧ್ಯಭಾಗದಿಂದ ನದಿ ನೀರು ನಿಧಾನವಾಗಿ ಏರಲು ಆರಂಭಿಸಿತು. ಸುಮಾರು ಅರ್ಧದವರೆಗೆ ಏರಿದ್ದ ನದಿ ಇದ್ದಕ್ಕಿದ್ದಹಾಗೆ ಮೂರು ಮೊಳ ಇಳಿದಾಗ ಇದೇ ಈ ವರ್ಷದ ಗರಿಷ್ಠ ಮಟ್ಟವೆಂದು ತಿಳಿದು ಜನರೆಲ್ಲಾ ಕಂಗಾಲಾದರು. ಆದರೆ ಮತ್ತೆ ಎರಡು ದಿನಗಳ ತರುವಾಯ ನೀರು ನಿರಂತರವಾಗಿ ಏರಲು ಶುರುವಾಗಿದ್ದು ಹದಿನಾರು ಮೊಳ ದಾಟುವವರೆಗೂ ನಿಲ್ಲಲೇ ಇಲ್ಲ. ಈಜಿಪ್ಟಿಗೆ ಕವಿದಿದ್ದ ಶಾಪ ವಿಮುಕ್ತಿಯಾಯ್ತೆಂದು ಜನ ಸಮಾಧಾನದ ನಿಟ್ಟುಸಿರು ಬಿಟ್ಟರು."

ಲತೀಫ್‌ನ ಚಾರಿತ್ರಿಕ ದಾಖಲೆಗಳಲ್ಲಿ ಇತಿಹಾಸದುದ್ದಕ್ಕೂ ಕೇವಲ ಹತ್ತು ಸಾರಿ ಮಾತ್ರ ನೈಲ್ ನದಿ ಉಕ್ಕಿ ಹರಿಯಲು ವಿಫಲವಾಗಿ ಕ್ಷಾಮ ಪರಿಸ್ಥಿತಿ ನಿರ್ಮಾಣ ಮಾಡಿದೆಯೆಂದು ಹೇಳಿದರೂ ಇದು ನೈಲ್ ಸಂಪೂರ್ಣ ವಿಫಲವಾದ ವರ್ಷಗಳ ದಾಖಲೆಗಳಿರಬಹುದು. ನೈಲ್ ನದಿ ತೀರದಲ್ಲಿ ಜನಸಂಖ್ಯೆ ಹೆಚ್ಚಾದಂತೆ ನದಿಯ ಮೇಲಿನ ಅವರ ಅವಲಂಬನೆ ಮತ್ತು ಒತ್ತಡಗಳೂ ಹೆಚ್ಚುತ್ತಾ ಹೋದುವು ಲತೀಫ್ ವಿವರಿಸಿರುವಂಥ ಘೋರ ಕ್ಷಾಮವಲ್ಲದಿದ್ದರೂ ನೈಲ್ ನದಿಯ ಏರುಪೇರುಗಳ ದೆಸೆಯಿಂದ ಈಜಿಪ್ಟ್ ವಿವಿಧ ತೀವ್ರತೆಯ ತೊಂದರೆಯನ್ನು ಅನುಭವಿಸುತ್ತಲೇ ಇತ್ತು. ಇದೆಲ್ಲದರ ಫಲವಾಗಿಯೇ ಈಜಿಪ್ಟಿನ ಅಧ್ಯಕ್ಷ ನಾಸೆರ್ ಆಸ್ವಾನ್ ಅಣೆಕಟ್ಟನ್ನು ನೈಲ್ ನದಿಗೆ ಅಡ್ಡಲಾಗಿ ಕಟ್ಟಲು ನಿರ್ಧರಿಸಿದ್ದು. ಪಿರಮಿಡ್ಡುಗಳ ಅನಂತರ ಈಜಿಪ್ಟಿನಲ್ಲಿ ಕೈಗೆತ್ತಿಕೊಂಡ ಅತಿ ದೊಡ್ಡ ಕಾಮಗಾರಿ ಇದೆಂದೇ ಹೇಳಬಹುದು. ಇದು ನೈಲ್ ನದಿಯ ಅತಿಪ್ರವಾಹದ ಮತ್ತು ಅನಾವೃಷ್ಟಿಯ ತೊಂದರೆಗಳನ್ನು ಆಖೈರಾಗಿ ಪರಿಹರಿಸಿದ್ದಲ್ಲದೆ ಈಜಿಪ್ಟಿಗೆ ಅತ್ಯಗತ್ಯವಾದ ಜಲವಿದ್ಯುತ್ತನ್ನೂ ಒದಗಿಸಿತು. ಇದೆಲ್ಲಕ್ಕಿಂತ ಈಜಿಪ್ಟಿಗೆ ಆದ ಅತಿ ದೊಡ್ಡ ಲಾಭವೆಂದರೆ ಪ್ರತಿ ವರ್ಷವೂ ಮುಂದೊತ್ತಿ ಬರುತ್ತಾ ವ್ಯವಸಾಯ ಪ್ರದೇಶವನ್ನು ಆಕ್ರಮಿಸುತ್ತಿದ್ದ ಮರುಳುಗಾಡಿನ

ಮರುಳುದಿಣ್ಣೆಗಳಿಗೆ ತಡೆ ಹಾಕಿತು. ನದಿಯಲ್ಲಿ ನಿರ್ದಿಷ್ಟ ಪ್ರಮಾಣದ ನೀರನ್ನು ಹರಿಸಲು ಸಾಧ್ಯವಾದುದರಿಂದ ಈಜಿಪ್ಟ್ ನೈಲ್ ನದಿಯ ಮುಖಾಂತರ ದೇಶದುದ್ದಕ್ಕೂ ಓಡಾಡುವ ಉತ್ತಮ ಜಲಸಾರಿಗೆ ಮಾರ್ಗಗಳನ್ನೂ ಹೊಂದಿದೆ.

# ಮೋಡ ಬಿತ್ತನೆ ಮತ್ತು ಕೃತಕ ಮಳೆ ಬರಿಸುವುದು

**– ಪ್ರೊ. ಕೆ. ಭೈರಪ್ಪ**

ಪ್ರಕೃತಿ ವಿಕೋಪಗಳು ಅಥವಾ ನ್ಯಾಚುರಲ್ ಕ್ಯಾಲಮಿಟೀಸ್‌ಗಳಿಂದ ಆಗುವ ಅನಾಹುತಗಳು ಅಷ್ಟಿಷ್ಟಲ್ಲ. ಮಾನವನ ಸುಖ–ದುಃಖಗಳು, ನೋವು–ನಲಿವುಗಳು, ಆಸೆ–ನಿರಾಸೆಗಳು, ಲಾಭ–ನಷ್ಟಗಳು ಗಣನೀಯವಾಗಿ ಪ್ರಕೃತಿಯಿಂದಲೇ ನಿರ್ಧರಿಸಲ್ಪಡುತ್ತವೆ. ಅವು ನಿರೀಕ್ಷಿತ ಪ್ರಮಾಣದ ಮಳೆಬೆಳೆಗಳು, ಸುಖ ಸಂತೋಷಗಳು ಮೊದಲಾದವುಗಳನ್ನು ತಂದುಕೊಟ್ಟರೆ, ಕ್ಷಾಮ, ಬರಗಾಲಗಳು, ದುಃಖದುಮ್ಮಾನಗಳಿಗೆ ದೂಡುತ್ತವೆ. “ಒಲಿದರೆ ನಾರಿ ಮುನಿದರೆ ಮಾರಿ” ಎಂಬ ಮಾತು ಪ್ರಕೃತಿ ಮಾತೆಗೆ ಹೆಚ್ಚು ಹೆಚ್ಚಾಗಿ ಅನ್ವಯವಾಗುತ್ತದೆ. ಆಕೆಯ ಕೃಪಾಕಟಾಕ್ಷಕ್ಕೆ ಪಾತ್ರರಾದವರ ಬಾಳು ಬಂಗಾರವಾಗುತ್ತದೆ. ಅವಕೃಪೆಗೆ ಈಡಾದವರ ಬದುಕು ನರಕ ಸದೃಶವಾಗುತ್ತದೆ.

ವಿಜ್ಞಾನ ಮತ್ತು ತಾಂತ್ರಿಕ ಜ್ಞಾನಗಳ ಬೆಳವಣಿಗೆಯಾದಾಗಿನಿಂದ, ಮಾನವ ಅನೇಕ ಭೌಗೋಳಿಕ ಶಕ್ತಿಗಳನ್ನು ತನ್ನ ಹಿಡಿತಕ್ಕೆ ಒಳಪಡಿಸಿಕೊಂಡಿರುವುದು ನಿಜವಾದರೂ ಮಾನವನ ಮೇಲೆ ಆಗಾಗ್ಯೆ ಎರಗುವ ಪ್ರಕೃತಿ ವಿಪತ್ತುಗಳು ಇಂದೂ ಸಹ ಜನಜೀವನವನ್ನು ಹಠಾತ್ತವೆ ಹದಗೆಡಿಸುತ್ತಿವೆ. ಬಿರುಗಾಳಿ, ಪ್ರವಾಹ, ನೆರೆಹಾವಳಿ, ಭೂಕುಸಿತ, ಭೂಕಂಪ, ಜ್ವಾಲಾಮುಖಿ, ಅತಿವೃಷ್ಟಿ, ಕ್ಷಾಮ, ಬರಗಾಲ, ಭೀಕರ ಬರಗಾಲ ಮೊದಲಾದ ಪ್ರಕೃತಿ ವಿಕೋಪಗಳು ಇಂದಿಗೂ ಸಹ ಆಗಾಗ್ಯೆ ಸಂಭವಿಸುತ್ತಿದ್ದು, ಪ್ರಶಾಂತವಾಗಿರುವ ಜನಜೀವನದಲ್ಲಿ ಅಲ್ಲೋಲ ಕಲ್ಲೋಲವನ್ನುಂಟು ಮಾಡುತ್ತವೆ. ಜೀವನದ ಸ್ಥಿತಿಗಳನ್ನು ವ್ಯಾಪಕವಾಗಿ ಅಸ್ತವ್ಯಸ್ತಗೊಳಿಸುತ್ತವೆ. ಜೀವಹಾನಿ, ಆಸ್ತಿಪಾಸ್ತಿಗಳ ನಷ್ಟ, ಮನೆಮಠಗಳ ನಾಶಕ್ಕೆ ಹಾದಿ ಮಾಡುತ್ತವೆ. ಈ ಬಗೆಯ ಒಂದೊಂದು ಪ್ರಕೃತಿ ವಿಕೋಪವೂ ಜನರ ಬದುಕಿನಲ್ಲಿ ಏನು ಕಷ್ಟ ನಷ್ಟಗಳನ್ನುಂಟು ಮಾಡುತ್ತವೆ ಎಂಬ ಬಗ್ಗೆ ಎಷ್ಟು ಹೇಳಿದರೂ ಕಡಿಮೆಯೇ.

ನಮ್ಮ ಭಾರತವು ಕೃಷಿ ಪ್ರಧಾನವಾದ ದೇಶ. ಭಾರತೀಯ ಕೃಷಿಯು ಅನಿಶ್ಚಿತ ಮಳೆಯ ಮೇಲೆ ಅತಿಯಾದ ಅವಲಂಬನೆಯನ್ನು ಹೊಂದಿದೆ. ಭಾರತೀಯ ಕೃಷಿಯು ಮಳೆಗಾಲದೊಡನೆ ನಡೆಸುವ ಜೂಜಾಟ ಎಂಬುದಾಗಿ ಪರಿಗಣಿಸಬಹುದಾಗಿದೆ. ಮಳೆಗಾಲ ಇಂತಹ ಅವಧಿಯಲ್ಲಿರುವುದು ಎಂಬುದಾಗಿ ತಿಳುವಳಿಕೆ ಇದ್ದರೂ ಸಹ, ಮಳೆ ಬಂದರೆ ಬರಬಹುದು. ಇಲ್ಲವೇ ಬಾರದಿದ್ದರೂ ಇರಬಹುದು. ಒಂದು ವರ್ಷ ಸಾಕಷ್ಟು ಮಳೆ ಆಗಿ ಸುಭಿಕ್ಷ ಕಂಡುಬಂದರೆ, ಮತ್ತೊಂದು ವರ್ಷ ಇಲ್ಲವೇ ಕೆಲವಾರು ವರ್ಷಗಳು ಅನಾವೃಷ್ಟಿ ಸಂಭವಿಸಿ ದುರ್ಭಿಕ್ಷ ತಲೆದೋರಬಹುದು. ಅಗತ್ಯ ಪ್ರಮಾಣದ ನೀರಾವರಿ ಸೌಲಭ್ಯ ಇಲ್ಲದಿರುವುದರಿಂದಾಗಿ ಭಾರತದಲ್ಲಿನ ಸುಮಾರು ಶೇ. ೭೫ರಷ್ಟು ಸಾಗುವಳಿಗೆ ಯೋಗ್ಯವಾದ ಭೂಮಿ ನೀರಿಗಾಗಿ ಮಳೆಯನ್ನೇ ಎದುರು ನೋಡುತ್ತಿರುತ್ತದೆ. ಆದರೆ ಮಳೆ ತುಂಬಾ ಅಸಮರ್ಪಕವಾಗಿಯೂ, ಅನಿಶ್ಚಿತವಾಗಿಯೂ, ಕ್ರಮವಿಲ್ಲದೆಯೂ ಆಗುವುದು. ಅಗತ್ಯವಿದ್ದಾಗ ಬಾರದಿದ್ದು, ಅನಗತ್ಯವಾದಾಗ ಭಾರೀ ಪ್ರಮಾಣದಲ್ಲಿ ಬರಬಹುದಾದ ಸಾಧ್ಯತೆಗಳಿರುವುವು.

ಒಮ್ಮೆ ಬೇಕಾದಾಗ ಬಾರದೆ ತೊಂದರೆಯಾದರೆ, ಮತ್ತೊಮ್ಮೆ ಬೇಡವಾದಾಗ ಅತಿಯಾಗಿ ಬಿದ್ದು ಕಷ್ಟಕಾರ್ಪಣ್ಯಗಳನ್ನು ತಂದೊಡ್ಡುವುದು. ಒಮ್ಮೆ ಬೆಳೆ ಅಂತಿಮ ಹಂತದಲ್ಲಿದ್ದಾಗ ಒಂದೆರಡು ಹದ ಮಳೆ ಆಗದೆ ಕೋಟ್ಯಾಂತರ ರೂಪಾಯಿಗಳ ಬೆಲೆಬಾಳುವ ಬೆಳೆ ವೃಥಾ ಬತ್ತಿ ಹೋದರೆ, ಇನ್ನೊಮ್ಮೆ ಚೆನ್ನಾಗಿ ಬೆಳೆದು ನಿಂತ ಬೆಳೆ ಭೀಕರ ಪ್ರವಾಹಕ್ಕೆ ಸಿಕ್ಕಿ ವೃಥಾ ಹಾಳಾಗುವುದು. “ಎಲ್ಲಿ ಓಡುವಿರಿ ನಿಲ್ಲಿ ಮೋಡಗಳೆ ನಾಲ್ಕು ಹನಿಯ ಚೆಲ್ಲಿ” ಎಂಬುದಾಗಿ ಎಷ್ಟು ಹಲುಬಿದರೂ, ಅನಗತ್ಯ ದರ್ಶನ ಕೊಟ್ಟು ಮಳೆ ತಾರದೆ ಓಡಿಹೋಗುವ ಸಂಭವವೇ ಹೆಚ್ಚು. ಅನೇಕ ಸಂದರ್ಭಗಳಲ್ಲಿ ಅನಿಶ್ಚಿತ ಮಳೆಯ ಮೇಲಿನ ಅತಿಯಾದ ಅವಲಂಬನೆಯಿಂದಾಗಿ ‘ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲ’ ಎಂಬ ರೀತಿಯಾಗುತ್ತದೆ.

ಕ್ಷಾಮ ಹಾಗೂ ಬರಗಾಲದ ವತಿಯಿಂದ ಉಂಟಾಗಬಹುದಾದ ಕಷ್ಟನಷ್ಟಗಳೂ ಸಹ ಕಲ್ಪನಾತೀತವಾದವುಗಳೇ ಆಗಿರುತ್ತವೆ.

ಕೃಷಿ ಕ್ಷೇತ್ರದಲ್ಲಿ ಒಣಗಿ ನಿಂತ ರಾಗಿ, ಜೋಳ, ಭತ್ತ, ಕಬ್ಬು ಬೆಳೆಗಳು, ತೆರೆದ ಬಾವಿ, ಕೊಳವೆ ಬಾವಿ ಬತ್ತಿರುವುದು, ಹಳ್ಳಕೊಳ್ಳದಲ್ಲಿ ನೀರಿಲ್ಲದಿರುವುದು, ಅಂತರ್ಜಲ ಗಣನೀಯವಾಗಿ ಬಹಳ ಕೆಳಗೆ ಹೋಗಿರುವುದು, ಜಾನುವಾರಗಳಿಗೆ ಮೇವು, ಕುಡಿಯುವ ನೀರಿನ ತೊಂದರೆಯಾಗಿ ಪರಿತಪಿಸುವುದು, ಮೊದಲಾದವು ಕಂಡುಬರುತ್ತಿರುತ್ತವೆ.

ಬರದ ಬಿಸಿ ಕ್ಷೇತ್ರಕ್ಕಷ್ಟೇ ತಟ್ಟದೆ, ಕೃಷಿಗೆ ಪೂರಕವಾದ ಸರಳ ಉಪಕರಣಗಳನ್ನು ತಯಾರಿಸಿ ಮಾರಾಟಮಾಡಿ ಜೀವನ ಸಾಗಿಸುವ ಬಡಕುಟುಂಬಗಳಿಗೂ ಭಾರೀ ಹೊಡೆತವನ್ನೇ ಕೊಡುತ್ತವೆ. ಮರದ ನೇಗಿಲು, ಕುಂಟೆ, ಕೂರಿಗೆ, ಹಲುಬೆ, ಹಗ್ಗ ಮುಂತಾದ ಕೃಷಿ ಬಳಕೆ ಪದಾರ್ಥಗಳಿಗೆ ಏನೇನೂ ಬೇಡಿಕೆ ಇಲ್ಲವಾಗುತ್ತದೆ. ಕೃಷಿಕರು ಹಾಗೂ ಕೃಷಿಗೆ ಪೂರಕವಾದ ಉದ್ಯೋಗ ಮಾಡುವವರು ಬಡತನ, ಅಪೌಷ್ಟಿಕತೆ, ಶಾರೀರಿಕ ರೋಗರುಜಿನಗಳು ಹಾಗೂ ಮಾಸಿಕ ಯಾತನೆಯಿಂದ ಬಹಳವಾಗಿ ಬಳಲುತ್ತಾರೆ.

ತೋಟಗಾರಿಕೆ ಬೆಳೆ ಮೇಲೆ ಭೀಕರ ಬರದ ಬರೆ ಹೇಳತೀರದಾಗಿದೆ. ಒಣಗಿ, ಸುಟ್ಟು ಕರಕಲಾಗಿ ಅಸ್ತಿಪಂಜರದಂತೆ ಗೋಚರಿಸುವ ದ್ರಾಕ್ಷಿ ತೋಟಗಳು, ಬರಡಾಗಿರುವ ದಾಳಿಂಬೆ ತೋಟಗಳು, ನೆಲ ಮಟ್ಟದಲ್ಲಿಯೇ ಕಮರಿ ಹೋಗುತ್ತಿರುವ ಆಲೂಗಡ್ಡೆ, ಮೆಣಸಿನಕಾಯಿ, ಈರುಳ್ಳಿ ಮುಂತಾದ ಬೆಳೆಗಳು, ಹಸಿರಿನಿಂದ ಕಂಗೊಳಿಸಬೇಕಾಗಿದ್ದ ಹೂಕೋಸು, ಎಲೆಕೋಸು, ಬೆಂಡೆ, ಬದನೆ, ಹೀರೇಕಾಯಿ ತೋಟಗಳಲ್ಲಿ ಸ್ಮಶಾನ ಮೌನ, ಒಣಗಿ ನಿಂತಿರುವ ಬಾಳೆ ತೋಟಗಳು, ಒಣಗುತ್ತಿರುವ ತೆಂಗಿನ ತೋಟಗಳು ಮೊದಲಾದ ಬಗೆಬಗೆಯಲ್ಲಿ ಭಣಗುಡುವ ದೃಶ್ಯಗಳು ಕಂಡುಬರಬಹುದಾಗಿರುತ್ತವೆ.

ಇನ್ನು ದಟ್ಟ ಕಾಡನ್ನು ಬಿಡದೆ ಕಾಡುವ ಬರದ ಬೇಗೆಯ ಬಗ್ಗೆ ಎಷ್ಟು ವರ್ಣಿಸಿದರೂ ಕಡಿಮೆಯೇ. ಬರದ ಬೇಗೆ ನಿತ್ಯಹರಿದ್ವರ್ಣ ಅರಣ್ಯ ಪ್ರದೇಶಗಳನ್ನು ಹಾಗೂ ವನ್ಯ ಮೃಗಗಳ ಧಾಮಗಳನ್ನು ಪರಿಪರಿಯಾಗಿ ಕಾಡುತ್ತದೆ. ಅಪರೂಪದ ಜೀವ ವೈವಿಧ್ಯಗಳು, ಸಸ್ಯ ಸಂಕುಲಗಳು, ಪ್ರಾಣಿ, ಪಕ್ಷಿ, ಕ್ರಿಮಿ, ಕೀಟ ಸಂಕುಲಗಳನ್ನು ತಳಮಳಗುಟ್ಟಿಸುವುದರ ಬಗ್ಗೆ ಹೇಳತೀರದು. ಮಳೆ ಇಲ್ಲವಾದುದರ ಪರಿಣಾಮದಿಂದಾಗಿ ಹೆಮ್ಮರಗಳ ನಡುವೆ ಝುರಿ,

ತೊರೆ, ಜಲಪಾತಗಳ ಜುಳುಜುಳು ನಿನಾದ ಇಲ್ಲವೇ ಇಲ್ಲವಾಗುತ್ತದೆ. ಮರಗಳ ಸೊಪ್ಪಿನಲ್ಲಿರುವ ತೇವಾಂಶವೇ ಅವನ್ನು ತಿನ್ನುವ ಪ್ರಾಣಿಗಳ ಬಾಯಾರಿಕೆಯನ್ನು ತಣಿಸಬೇಕಾಗುತ್ತದೆ. ವನ್ಯಧಾಮಗಳ ಪ್ರಾಣಿ, ಪಕ್ಷಿಗಳು ಸೂಕ್ತ ಸ್ಥಳಗಳಿಗೆ ವಲಸೆ ಹೊರಡುವುದಿದೆ. ದಟ್ಟಡವಿಗಳಲ್ಲಿ ಅಲ್ಲಲ್ಲಿ ನೆಲೆನಿಂತಿರುವ ಗಿರಿಜನರು ಕುಡಿಯುವ ನೀರಿಗಾಗಿ ಹಾಹಾಕಾರ ಪಡುವುದು, ಆಹಾರಕ್ಕಾಗಿ ಪರಿತಪಿಸುವುದು. ಪರಿಪರಿಯಾಗಿ ಕಂಡುಬರುತ್ತದೆ. ಸಸ್ಯಸಂಕುಲಗಳು ಹಾಗೂ ಪ್ರಾಣಿಪಕ್ಷಿಗಳು ಕಾಡ್ಗಿಚ್ಚಿನ ಉಪಟಳವನ್ನು ಬಹಳವಾಗಿ ಅನುಭವಿಸುವುದಿದೆ. ಇತ್ಯಾದಿ.

ಈ ಬಗೆಯ ದುರವಸ್ಥೆಗಳಿಗೆ ಪರಿಹಾರವಿದೆಯೆ? ಎಂಬ ಪ್ರಶ್ನೆಗೆ ಉತ್ತರ ಇದೆ. ಮಳೆ ಬಾರದೆ ಕೈಕೊಟ್ಟಾಗ ಮಳೆ ಬರುವಂತೆ ಮಾಡಿಕೊಳ್ಳುವ ಕಡೆ ಮಾನವ ಬಹಳ ಹಿಂದಿನಿಂದಲೂ ಹಲವಾರು ಕ್ರಮಗಳನ್ನು ಕೈಗೊಳ್ಳುತ್ತಾ ಬಂದಿರುವುದನ್ನು ಗುರುತಿಸಬಹುದಾಗಿದೆ. ಮಳೆರಾಯನ ವಿಗ್ರಹವನ್ನು ಮಣ್ಣಿನಿಂದ ಮಾಡಿ ಪೂಜಿಸಿ, "ಬಾರೊ ಬಾರೊ ಮಳೆರಾಯ ನಮ್ಮ ಬಾಳೆತೋಟಕೆ ನೀರಿಲ್ಲ", "ಹುಯ್ಯೋ ಹುಯ್ಯೋ ಮಳೆರಾಯ ನಮ್ಮ ಹೂವಿನ ತೋಟಕೆ ನೀರಿಲ್ಲ" ಎಂದು ಮೊದಲಾಗಿ ಹಾಡುತ್ತಾ ಮನೆಮನೆಗಳ ಮುಂದೆ, ಬೀದಿಬೀದಿಗಳಲ್ಲಿ ಮೆರವಣಿಗೆ ಮಾಡಿ ಪ್ರಾರ್ಥಿಸುವುದಿದೆ. ಕಪ್ಪೆಗಳಿಗೆ ಮದುವೆ ಮಾಡಿ ಮಳೆ ಬರುವಂತೆ ಕೋರಿಕೊಳ್ಳುವುದಿದೆ. ಯಜ್ಞ ಮಾಡಿ ಪ್ರಾರ್ಥಿಸುವುದಿದೆ. ಸಾಧು ಸಂನ್ಯಾಸಿಗಳು ತಾವು ಜಪತಪ ಮಾಡಿ ಮಳೆ ಬರುವಂತೆ ಮಾಡುತ್ತೇವೆಂದು ಹೇಳುವುದಿದೆ. ಆದರೆ ಈ ಬಗೆಯ ಪ್ರಯತ್ನಗಳು ಅಷ್ಟೇನೂ ಹೇಳಿಕೊಳ್ಳುವ ಪರಿಹಾರಗಳನ್ನು ಒದಗಿಸಿಲ್ಲ. ಯಾವ ಭರವಸೆಯನ್ನೂ ನೀಡುವವುಗಳಾಗಿಲ್ಲ. ವೈಜ್ಞಾನಿಕತೆಯನ್ನು ಆಧರಿಸಿಲ್ಲ.

**ಮೋಡಬಿತ್ತನೆ ಮತ್ತು ಕೃತಕ ಮಳೆಯನ್ನು ಬರಿಸುವುದು.**

ಮಳೆರಾಯನು ಮನಬಂದಂತೆ ಕಣ್ಣುಮುಚ್ಚಾಲೆ ಆಟ ಆಡಲು ಬಿಡದೆ, ಮಾನವನು ಹೇಳಿದ ಜಾಗದಲ್ಲಿ ಮಳೆಯನ್ನು ಸುರಿಸುವಂತೆ ಮಾಡುವ ಮಾನವನಿರ್ಮಿತ ಏರ್ಪಾಟನ್ನು ಮೋಡಬಿತ್ತನೆ ಮತ್ತು ಕೃತಕ ಮಳೆಯನ್ನು ಬರಿಸುವುದು ಎನ್ನುತ್ತೇವೆ.

ಒಂದು ದೃಷ್ಟಿಯಲ್ಲಿ ಮಾನವನು ಪ್ರಕೃತಿಯ ಮೇಲೆ ಸ್ವಾಮಿತ್ವ ಸಾಧಿಸಲು ಮಾಡಿದ ಒಂದು ಯಶಸ್ವೀ ಪ್ರಯತ್ನವೇ ಮೋಡಬಿತ್ತನೆ ಮತ್ತು ಕೃತಕ ಮಳೆ ಬರಿಸುವುದು ಆಗಿದೆ ಎಂಬುದಾಗಿ ಹೇಳಬಹುದಾಗಿದೆ.

ಆಧುನಿಕ ಮಾನವನು ಬಾಹ್ಯಾಕಾಶಕ್ಕೆ ಹಾರಿ, ಅಂತರಿಕ್ಷದೊಳಕ್ಕೆ ನುಸುಳಿ ಗಣನೀಯ ಅದ್ಭುತಗಳನ್ನು ಸಾಧಿಸುತ್ತಿದ್ದಾನೆ. ಅಂತಹ ಪ್ರಮುಖ ಅದ್ಭುತಗಳಲ್ಲಿ ಒಂದು ಮೋಡಬಿತ್ತನೆ ಮತ್ತು ಕೃತಕ ಮಳೆಯನ್ನು ಬರಿಸುವುದು.

ಮೋಡಬಿತ್ತನೆ ಮಾನವನ ನಿರೀಕ್ಷೆಯಂತೆ ಯಶಸ್ವಿಯಾಗುವುದಾದರೆ, ರೈತರ ಬದುಕು ಬಂಗಾರವಾಗುತ್ತದೆ. ಕೃಷಿ ಮತ್ತು ಕೃಷಿಗೆ ಹೊಂದಿಕೊಂಡಿರುವ ಉದ್ಯೋಗಗಳು ಗಣನೀಯ ಪ್ರಗತಿ ಸಾಧಿಸಲು ಸಾಧ್ಯವಾಗುತ್ತದೆ. ಮರಳುಗಾಡನ್ನೂ ನಂದನವನವನ್ನಾಗಿಸಲು ಅವಕಾಶವಾಗುತ್ತದೆ. ವಸುಂಧರೆಯ ಯಾವ ಭಾಗವನ್ನಾದರೂ ಸಸ್ಯ ಶಾಮಲೆಯನ್ನಾಗಿಸಲು ಅನುವಾಗುತ್ತದೆ. ನೀರಾವರಿ ಸೌಲಭ್ಯಗಳಿಲ್ಲದ ರೈತರು ಅನಗತ್ಯವಾಗಿ ಮಳೆರಾಯನೊಡನೆ ಜೂಜಾಡುವುದು ತಪ್ಪಿ, ಸಮಾಧಾನ, ನೆಮ್ಮದಿಯಿಂದ ಬೇಸಾಯ ಮಾಡಿ ಬದುಕಲು ಅವಕಾಶವಾಗುತ್ತದೆ.

ತಜ್ಞರ ಒಂದು ಅಭಿಪ್ರಾಯ ಹೀಗಿದೆ. ಒಂದು ಅಂದಾಜಿನ ಪ್ರಕಾರ, ಜೂನ್ ತಿಂಗಳಿನಿಂದ ಸೆಪ್ಟೆಂಬರ್ ತಿಂಗಳವರೆಗೆ ಅರೇಬಿಯನ್ ಸಮುದ್ರದಿಂದ ಸುಮಾರು ೭೭೦೦ ಬಿಲಿಯನ್ ಕ್ಯೂಬಿಕ್ ಮೀಟರ್‌ನಷ್ಟು ನೀರು ಆವಿಯಾಗುತ್ತದೆ. ಆದರೆ ಇದೇ ಅವಧಿಯಲ್ಲಿ ನೈಋತ್ಯ ಮಾರುತಗಳಿಂದ ನಮಗೆ ಮಳೆ ರೂಪದಲ್ಲಿ ದೊರೆಯುವ ನೀರಿನ ಪ್ರಮಾಣ ಕೇವಲ ೨೪೦೦ ಬಿಲಿಯನ್ ಕ್ಯೂಬಿಕ್ ಮೀಟರ್‌ಗಳು ಮಾತ್ರ. ಉಳಿದ ನೀರಿನ ಪ್ರಮಾಣವು ಮೋಡದ ರೂಪದಲ್ಲಿ ಗಾಳಿಯ ಮೂಲಕ ಚದುರಿಹೋಗುತ್ತದೆ. ಈ ಸಮಯದಲ್ಲಿ ವೃಥಾ ಪೋಲಾಗುವ ಶೇಕಡಾ ಎರಡರಷ್ಟು ಮೋಡ ಭೂಮಿಯ ಮೇಲೆ ಮಳೆಯಾದರೆ ನೀರಿಗೆ ಬರ ಇರುವುದಿಲ್ಲ. ಆದರೆ ಹಾಗೆ ಆಗುತ್ತಿಲ್ಲ.

ಅಂತೆಯೇ ಮಾನವ ಈ ಬಗ್ಗೆ ಗಹನವಾಗಿ ಯೋಚಿಸುವಂತಾಗಿದೆ. ಈ ನಿಟ್ಟಿನಲ್ಲಿ ವಿಜ್ಞಾನಿಗಳು ಕ್ರಿ.ಶ. ೧೯೪೬ರಿಂದ ಕಾರ್ಯೋನ್ಮುಖರಾಗಿದ್ದಾರೆ. ಅದು ಒಂದಷ್ಟು ಪ್ರಮಾಣದಲ್ಲಿ ಯಶಸ್ಸು ಕೊಟ್ಟಿದೆ. ಈ ಬಗೆಗಿನ ವಿವರ ಈ ಮುಂದಿನಂತಿದೆ.

ಮೋಡಬಿತ್ತನೆ ಮತ್ತು ಕೃತಕ ಮಳೆ ಬರಿಸುವ ಕಾರ್ಯವು ಡಾ. ವಿನ್ಸೆಂಟ್ ಸ್ನೇಫರ್ ಎಂಬ ವಿಜ್ಞಾನಿಯಿಂದ ಪ್ರಾರಂಭವಾಯಿತು. ಆದ್ದರಿಂದ ಈತನನ್ನು ಈ ಕಾರ್ಯದ ಜನಕ ಎಂಬುದಾಗಿ ಹೇಳಬಹುದು.

ಡಾ. ವಿನ್ಸೆಂಟ್ ಸ್ನೇಫರ್‌ರವರು ಕ್ರಿ.ಶ. ೧೯೪೬ರಲ್ಲಿ ಅಮೇರಿಕಾ ಸಂಯುಕ್ತ ಸಂಸ್ಥಾನದ ನ್ಯೂಯಾರ್ಕ್ ನಗರದಲ್ಲಿ ಈ ಕಾರ್ಯವನ್ನು ಪ್ರಾರಂಭ ಮಾಡಿದರು. ಈ ಕ್ರಮವನ್ನು 'ಮೋಡಬಿತ್ತನೆ ಅಥವಾ ಕ್ಲೌಡ್ ಸೀಡಿಂಗ್' ಎನ್ನುತ್ತೇವೆ. ಅವರು ಒಂದು ಪ್ರಯೋಗವನ್ನು ಏಕಾಗ್ರತೆಯಿಂದ ಮಾಡುತ್ತಿರುವಾಗ ಈ ವಿಷಯ ಅವರಿಗೆ ವಿಶೇಷವಾಗಿ ಹೊಳೆಯಿತು.

ಗಾಳಿಯಲ್ಲಿ ಅಥವಾ ವಾತಾವರಣದಲ್ಲಿ ತೇವಾಂಶ ಇರುತ್ತದೆ. ಭೂಮಿಯ ಮೇಲ್ಮೈಯಿಂದ ಬಿಸಿ ಗಾಳಿ ಮೇಲಕ್ಕೆ ಹೋಗಿ ತಂಪಾಗುತ್ತದೆ. ತತ್‌ಪರಿಣಾಮವಾಗಿ ತೇವಾಂಶದ ಸ್ವಲ್ಪ ಭಾಗ ಮತ್ತಷ್ಟು ತಂಪಾಗಿ ನೀರಿನ ಹನಿಗಳು ರೂಪುಗೊಳ್ಳುತ್ತವೆ. ಈ ಹನಿಗಳು ಬೇರೆ ಹನಿಗಳೊಡನೆ ಸಂಯೋಗವಾದಲ್ಲಿ, ಆಗ ಹನಿಗಳ ತೂಕವು ಅಧಿಕಗೊಂಡು ಅವು ಮಳೆರೂಪದಲ್ಲಿ ಭೂಮಿಗೆ ಸುರಿಯುತ್ತವೆ.

ಅನೇಕ ಸಂದರ್ಭಗಳಲ್ಲಿ ಮಳೆ ಬರುವುದಿಲ್ಲ. ಅಂತಹ ಸಂದರ್ಭಗಳಲ್ಲಿ ಕೃತಕವಾಗಿ ಈ ಹನಿಗಳು ಸಂಯೋಗವಾಗುವಂತೆ ಮಾಡಿದಲ್ಲಿ ಮಳೆಯನ್ನು ಪಡೆಯಬಹುದು. ಇದಕ್ಕಾಗಿ ವಾತಾವರಣದಲ್ಲಿ ಧೂಳಿನ ಕಣಗಳು ಮಂಜುಗಡ್ಡೆಯ ಹರಳುಗಳಾಗುವಂತೆ ಮಾಡಬೇಕು. ಈ ಹರಳುಗಳು ಮೋಡದಲ್ಲಿನ ನೀರಿನ ಹನಿಗಳೊಡನೆ ಸಂಯೋಗವಾಗಿ ಭಾರಗೊಂಡು ಭೂಮಿಯತ್ತ ಬರುತ್ತವೆ. ಮಂಜುಗಡ್ಡೆಯ ಹರಳುಗಳನ್ನು ನೇರವಾಗಿ ಒದಗಿಸುವುದರ ಬದಲು ಅದರಂತೆ ಕಾರ್ಯ ನಿರ್ವಹಿಸುವ ಬೆಳ್ಳಿಯ ಅಯೋಡೈಡ್ ಮತ್ತು ಸಾಮಾನ್ಯ ಅಡುಗೆ ಉಪ್ಪಿನ ಅಥವಾ ಸಿಲ್ವರ್ ಅಯೋಡೈಡ್ ಅಂಡ್ ಸೋಡಿಯಂ ಕ್ಲೋರೈಡ್ ಹರಳುಗಳ ನೆರವಿನಿಂದ ಮೋಡದಲ್ಲಿನ ನೀರಿನ ಹನಿಗಳ ಭಾರವನ್ನು ಅಧಿಕಗೊಳಿಸಿ ಕೃತಕ ವಿಧಾನದಿಂದ ಮಳೆಯನ್ನು ಪಡೆಯಬಹುದು.

ಈ ಕ್ರಿಯೆಯಿಂದ ಮೋಡದಲ್ಲಿ ತೇವಾಂಶ, ಉಷ್ಣತೆ ಮುಂತಾದವು ಸೂಕ್ತ ರೀತಿಯಲ್ಲಿ ಬದಲಾವಣೆಗೊಂಡು ಮಳೆ ಸುರಿಯಲು ಅಗತ್ಯವಾದ ಸನ್ನಿವೇಶವು ನಿರ್ಮಾಣವಾಗುತ್ತದೆ. ಶರವೇಗದಲ್ಲಿ ಮಳೆ ಸುರಿಯಲು ಪ್ರಾರಂಭವಾಗುತ್ತದೆ.

ಈ ಬಗೆಯ ಕೃತಕ ವಿಧಾನಗಳಿಂದ ಮಳೆಯನ್ನು ಪಡೆಯಲು ಬರಡು ಆಕಾಶದಿಂದ ಸಾಧ್ಯವಿಲ್ಲ. ವಾತಾವರಣದಲ್ಲಿ ಮೋಡ ಸ್ವಾಭಾವಿಕವಾಗಿ ಇರಬೇಕು. ಅಂತಹ ಸಂದರ್ಭದಲ್ಲಿ ಮೋಡದ ಸಾಂದ್ರತೆಯನ್ನು ಅಧಿಕಗೊಳಿಸಿದಲ್ಲಿ ಮಳೆ ಸುರಿಯುವ ವಾತಾವರಣವು ನಿರ್ಮಾಣವಾಗುತ್ತದೆ.

ಆಕಾಶದಲ್ಲಿ ಮೋಡವೇ ಇಲ್ಲದಿದ್ದಾಗ ಕೃತಕ ಮಳೆ ಸುರಿಸುವುದು ಸಾಧ್ಯವಿಲ್ಲ. ಮೋಡಗಳು ಭೂಮಿಯಿಂದ ಆರರಿಂದ ಒಂಭತ್ತು ಕಿಲೋಮೀಟರ್‌ಗಳ ದೂರದಲ್ಲಿದ್ದು ೦.೫ ಬಿಲಿಯನ್ ಕ್ಯೂಬಿಕ್ ಮೀಟರ್‌ಗಳಷ್ಟು ತೇವಾಂಶ ಅಥವಾ ನೀರಾವಿಯ ಪ್ರಮಾಣ ಹೊಂದಿರಬೇಕು. ಇಂತಹ ಸಮಯದಲ್ಲಿ ಮೋಡಗಳ ಮೇಲೆ ಬೆಳ್ಳಿಯ ಅಯೋಡೈಡ್ ಪುಡಿಯನ್ನು ಸಿಂಪಡಿಸಿದಲ್ಲಿ ಮೋಡದಲ್ಲಿರುವ ತೇವಾಂಶದ ಪ್ರಮಾಣ ಒಂದು ಮಿಲಿಯನ್ ಕ್ಯೂಬಿಕ್ ಮೀಟರ್‌ಗೆ ಏರುತ್ತದೆ. ಇದರಿಂದ ಮೋಡದಲ್ಲಿರುವ ಹನಿಗಳ ಸಾಂದ್ರತೆಯು ಅಧಿಕಗೊಂಡು ಮಳೆ ಬೀಳಲು ಪ್ರಾರಂಭವಾಗುತ್ತದೆ. ಅದೇ ಸಮಯದಲ್ಲಿ ಮೋಡಗಳು ಮೊದಲಿಗಿಂತ ಸ್ವಲ್ಪ ಮೇಲಕ್ಕೆ ಚಲಿಸುತ್ತವೆ. ಇದು ಮೋಡಬಿತ್ತನೆ ಮತ್ತು ಕೃತಕ ಮಳೆ ಬರಿಸುವ ತಂತ್ರದ ಸ್ಥೂಲ ರೂಪ.

ಅಮೇರಿಕಾ ಸಂಯುಕ್ತ ಸಂಸ್ಥಾನ, ಇಸ್ರೇಲ್, ರಷ್ಯಾ, ಕೆನಡಾ, ಆಸ್ಟ್ರೇಲಿಯಾ ದೇಶಗಳಲ್ಲಿ ಈಗಾಗಲೇ ಕೃತಕ ವಿಧಾನದಿಂದ ಮಳೆ ಸುರಿಸುವ ಪ್ರಯತ್ನಗಳು ನಡೆದಿದ್ದು ಅವು ಯಶಸ್ವಿಯೂ ಆಗಿವೆ. ಆದರೆ ಇದು ಸ್ವಲ್ಪ ದುಬಾರಿ ವಿಧಾನ. ಏಕೆಂದರೆ ಇದಕ್ಕೆ ಬೇಕಾದ ಬೆಳ್ಳಿಯ ಅಯೋಡೈಡ್ ಲವಣಕ್ಕೆ ಅಧಿಕ ಬೆಲೆ. ಅಲ್ಲದೆ ಅಧಿಕ ಪ್ರಮಾಣದಲ್ಲಿ ಈ ಲವಣವನ್ನು ಎಲ್ಲೆಲ್ಲಿ ಮೋಡಗಳು ಪ್ರಾರಂಭಿಕವಾಗಿ ರೂಪುಗೊಂಡಿರುತ್ತವೆಯೋ ಅಲ್ಲೆಲ್ಲಾ ಹೆಲಿಕ್ಯಾಪ್ಟರ್ ಮೂಲಕ ಸಿಂಪಡಿಸಬೇಕಾಗುತ್ತದೆ. ಇದ್ದುದರಲ್ಲಿ ಸೋಡಿಯಂ ಕ್ಲೋರೈಡ್

ತುಂಬಾ ಕಡಿಮೆ ಬೆಲೆಗೆ ಸಿಗುತ್ತದೆ. ಇದು ಒಂದು ಸಮಾಧಾನಕರ ಸಂಗತಿಯೇ ಸರಿ. ಈ ರೀತಿ ಮಳೆ ಬರಿಸಲು ಮೋಡಗಳಿರಬೇಕಾದುದು ಬಹಳ ಮುಖ್ಯ. ಅದೂ ಅಲ್ಲದೆ ಆಕಾಶದಲ್ಲಿ ತೇಲುವ ತಿಳಿ ಮೋಡಗಳಲ್ಲ. ತೇವಭರಿತವಾದ ಹೆಪ್ಪುಗಟ್ಟಿದ ಮೋಡಗಳಿರಬೇಕು. ಅಂತಹ ಸಂದರ್ಭಗಳಲ್ಲಿ ಮಾತ್ರ ಮೋಡ ಬಿತ್ತನೆ ಮತ್ತು ಕೃತಕ ಮಳೆ ಬೀಳುವಂತೆ ಮಾಡಬಹುದು.

ನಮ್ಮ ಕರ್ನಾಟಕ ರಾಜ್ಯದಲ್ಲಿ ಈ ಹಿಂದೆ ೧೯೭೫ರಲ್ಲಿ ಲಿಂಗನಮಕ್ಕಿಯ ಜಲಾಶಯದ ಮೇಲಿನ ಮೋಡಗಳ ಮೇಲೆ ಮೋಡಬಿತ್ತನೆ ಕಾರ್ಯ ನಡೆಸಿ ಮಳೆ ಸುರಿಸುವ ಪ್ರಯೋಗವನ್ನು ನಡೆಸಲಾಗಿತ್ತು. ಆದರೆ ಆಗ ವಾತಾವರಣದಲ್ಲಿ ಸೂಕ್ತ ಮತ್ತು ಅಗತ್ಯ ಸನ್ನಿವೇಶಗಳಿ ಇರಲಿಲ್ಲ. ಆ ಕಾರಣದಿಂದಾಗಿ ಆ ಪ್ರಯತ್ನ ಯಶಸ್ವಿಯಾಗಿರಲಿಲ್ಲ.

ನಮ್ಮ ಪಕ್ಕದ ರಾಜ್ಯವಾದ ಆಂಧ್ರಪ್ರದೇಶದ ರಾಜಧಾನಿಯಾದ ಹೈದರಾಬಾದ್ ಮಹಾನಗರದಲ್ಲಿ ೧೯೯೩ರಲ್ಲಿ ಇಂತಹ ಒಂದು ಪ್ರಯೋಗವನ್ನು ನಡೆಸಲಾಗಿತ್ತು. ಆಗ ಬೆಳ್ಳಿಯ ಅಯೋಡೈಡ್ ಅನ್ನು ಜನರೇಟರ್‌ಗಳ ಮೂಲಕ ಕೆಳಗಿನಿಂದ ಮೋಡಗಳತ್ತ ಕಳುಹಿಸಲಾಯಿತು. ಪ್ರಯತ್ನ ನಡೆದ ಕೆಲವೇ ನಿಮಿಷಗಳಲ್ಲಿ ಧಾರಾಕಾರ ಮಳೆ ಸುರಿಯಿತು. ಸುಮಾರು ಅರ್ಧಘಂಟೆಯವರೆಗೆ ಸತತವಾಗಿ ಮಳೆ ಸುರಿದಿತ್ತು. ಆಗ ಆಸ್ಮಾನ್‌ಸಾಗರ್ ಜಲಾಶಯದ ಪ್ರದೇಶದ ಮೇಲೆ ಈ ಪ್ರಯೋಗ ನಡೆದಿದ್ದರಿಂದ ಆ ಜಲಾಶಯದಲ್ಲಿ, ಆಗ ನೀರಿನ ಮಟ್ಟ ಗಣನೀಯವಾಗಿ ಏರಿತ್ತು.

ಮೋಡಬಿತ್ತನೆ ಮಾಡಿ ಕೃತಕ ಮಳೆ ತರಿಸಲು ಮೋಡದಲ್ಲಿನ ತೇವಾಂಶದ ಪ್ರಮಾಣ, ಭೂಮಿಗೂ ಮೋಡಕ್ಕೂ ಇರುವ ಅಂತರ, ಗಾಳಿಯ ಚಲನೆಯ ವೇಗ, ವಾತಾವರಣದ ಉಷ್ಣತೆ, ಸಿಂಪಡಿಸುವ ಬೆಳ್ಳಿಯ ಅಯೋಡೈಡ್ ಹರಳುಗಳು ಅನುಕೂಲಕರವಾಗಿರಬೇಕು.

ತಜ್ಞರ ಅಭಿಪ್ರಾಯದಂತೆ ಕೃತಕ ಮಳೆ ಸುರಿಸುವ ಕ್ರಮ ಸ್ವಲ್ಪ ದುಬಾರಿ ಎನಿಸಿದರೂ ಸಹ, ಅದರಿಂದ ಶೇಕಡಾ ಅರವತ್ತರಷ್ಟು ಲಾಭ ಇದೆ. ಕೆಲವು ವಿಜ್ಞಾನಿಗಳ ಅಭಿಪ್ರಾಯದಂತೆ ಈ ತಂತ್ರದಿಂದ ವಾತಾವರಣ ಏನೇನೂ ಕಲುಷಿತಗೊಳ್ಳುವುದಿಲ್ಲ.

ನಮ್ಮ ಕರ್ನಾಟಕ ರಾಜ್ಯದಲ್ಲಿ ಮೂರು ವರ್ಷಗಳ ಸತತ ಬರಗಾಲದ ಪರಿಸ್ಥಿತಿಯಿಂದಾಗಿ ಬೆಂಗಳೂರು, ಹುಬ್ಬಳ್ಳಿ, ಬೆಳಗಾಂ, ಕೊಪ್ಪಳ ಮುಂತಾದ ಕಡೆ ರೇಡಾರ್‌ಗಳನ್ನು ಸ್ಥಾಪಿಸಿ, ಮೋಡಬಿತ್ತನೆ ಮಾಡಿ ಮಳೆ ಬರಿಸುವ ಕಾರ್ಯ ೨೦೦೩ರಲ್ಲಿ ನಡೆದಿದೆ.

# ಗುಬ್ಬಚ್ಚಿಗಳು

**– ಕರೀಗೌಡ ಬೀಚನಹಳ್ಳಿ**

ಭರಣಿ ಮಳೆ ಬಿದ್ದು ಧರಣಿಯೆಲ್ಲಾ ಹಸಿರುಗಟ್ಟಿತ್ತು. ಭಯಾನಕವಾಗಿ ಬಿದ್ದ ಮಳೆಯಿಂದಾಗಿ ಕೆರೆಕಟ್ಟೆಗಳೆಲ್ಲಾ ತುಂಬಿ ಒಂದಾಗಿದ್ದವು. ವಿಪರೀತವಾಗಿ ಬೀಸಿದ ಗಾಳಿಗೆ ಮರಗಿಡಗಳು ಮುರಿದುಬಿದ್ದಿದ್ದವು. ಇದರಿಂದ ಸಮಸ್ತ ಜೀವಸಂಕುಲಗಳು ಕ್ಷಣ ತತ್ತರಿಸಿಹೋಗಿದ್ದವು.

ಮಾಮೂಲಿನಂತೆ ಮುಂಜಾನೆ ಎದ್ದ ಚೆನ್ನಜ್ಜ ತನ್ನ ಮೂರ್ನಾಲ್ಕು ತಲೆಮಾರಿನ ಕಲ್ಲುಮಾಳಿಗೆ ಮನೆಯ ಮುಂದೆ ಕೂತು ಒಳಗೆ ಇನ್ನೂ ಮಲಗಿ ನಿದ್ದೆ ತೆಗೆಯುತ್ತಿದ್ದ ತನ್ನ ಮಗನ ಕೂಗಿದ. ರಾತ್ರಿಯೆಲ್ಲಾ ಮಿಂಚು ಸಿಡಿಲಿನ ಆರ್ಭಟಕ್ಕೆ ಮಗನಿಗೆ ನಿದ್ದೆ ಇಲ್ಲದ್ದರಿಂದ ಮುಂಜಾವಿನಲ್ಲಿ ಅವನಿಗೆ ಸಣ್ಣ ನಿದ್ದೆ ಹತ್ತಿತ್ತು. ಚೆನ್ನಜ್ಜನ ಮೊಮ್ಮಗ ಏಳೆಂಟು ವರ್ಷದ ಕಿಟ್ಟಿ ಆಗಲೇ ಎದ್ದು ಮಳೆಬಿದ್ದ ಸಿರಿಯಲ್ಲಿ ಅಂಗಳದಲ್ಲಿ ನೆಂದ ಮರಳಿನಲ್ಲಿ ಕಪ್ಪೆ ಗೂಡು ಕಟ್ಟುತ್ತಿದ್ದ. ಮತ್ತೆ ಅಪ್ಪ ಕೂಗಿದ ದನಿಗೆ ಐವತ್ತು ವರ್ಷದ ಮಗ ಎದ್ದು ಈಚೆಗೆ ಬಂದು ಹೊಲದತ್ತ ಹೊರಟ. ಅವನ ಹಿಂದೆ ಕಿಟ್ಟಿಯೂ ಕಪ್ಪೆಗೂಡು ಕೆಡಿಸಿ 'ನಾನೂ ಬರ್ತೀನಿ' ಎನ್ನುತ್ತಾ ಓಡಿದ.

ಚೆನ್ನಜ್ಜನಿಗೆ ಮನೆಯ ಮುಂಭಾಗದ ಆ ಅಂಕಣವೇ ಕೂರಲು ನಿಲ್ಲಲು ಮಲಗಲು ತಾವಾಗಿತ್ತು. ಆತ ಹಗಲು ರಾತ್ರಿ ತುಂಬಿಸುತ್ತಿದ್ದದ್ದು ಅಲ್ಲೇ. ತನ್ನ ಮನೆಯ ಕಲ್ಲುಗೋಡೆಯಲ್ಲಿ ಸಕನೆ ವರ್ಷಗಳಿಂದ ಎರಡು ಗುಬ್ಬಚ್ಚಿಗಳು ವಾಸವಾಗಿದ್ದವು. ಚೆನ್ನಜ್ಜ ಬಹಳ ದಿನಗಳಿಂದ ಅವನ್ನು ಗಮನಿಸುತ್ತಲೇ ಬಂದಿದ್ದ. ಅವು ಅವನ ಕಣ್ಮುಂದೆಯೇ ತನ್ನ ಮನೆಯ ಅಂಗಳದಲ್ಲಿ ಒಣಗಿ ಹಾಕಿದ್ದ ಭತ್ತ, ರಾಗಿ ತಿನ್ನುತ್ತಾ, ತನ್ನ ಮನೆಯ ಎಂಜಲಿನ ಅನ್ನದ ಅಗಳು ತಿನ್ನುತ್ತಾ, ಅಕ್ಕಪಕ್ಕದಲ್ಲಿ ಹಸಿರು ಮೇಯುತ್ತಾ, ಆಡುತ್ತಾ, ಕುಣಿಯುತ್ತಾ, ಕುಪ್ಪಳಿಸುತ್ತಾ, ಹಾರುತ್ತಾ, ಕಿತ್ತಾಡುತ್ತಾ, ಸರಸವಾಡುತ್ತಾ ಬೆಳೆದು ದೊಡ್ಡವಾಗಿದ್ದವು. ಮುದುಕನಿಗೆ ಅವುಗಳ ಬಗ್ಗೆ ಮೊದಲಿನಿಂದಲೂ ಕುತೂಹಲ, ಅವರೆಡೂ ಒಂದೇ ಉದ್ದರಿಯವಾಗಿದ್ದರಿಂದ ಅವುಗಳಲ್ಲಿ ಗಂಡಾವುದು, ಹೆಣ್ಣಾವುದು ಎಂಬುದನ್ನು ಆತ ತನ್ನ ಮಂಜಾದ ಕಣ್ಣುಗಳಲ್ಲಿ ತುಂಬಿಕೊಂಡು ದಿನನಿತ್ಯ ತಲೆಕೆಡಿಸಿಕೊಳ್ಳುತ್ತಲೇ ಬಂದಿದ್ದ.

ಈ ನಡುವೆ ಒಂದು ಬಿಳಿಯ ಪುಕ್ಕದ ಗುಬ್ಬಚ್ಚಿ ದಿನೇ ದಿನೇ ದಪ್ಪವಾಗುತ್ತಿತ್ತು. ಬಿಳಿ ಪುಕ್ಕದ ಕೆಲವು ಕಪ್ಪು ಪುಕ್ಕವಿದ್ದ ಗುಬ್ಬಚ್ಚಿ ಮಾತ್ರ ಇದ್ದಂತೆಯೇ ಇತ್ತು. ಈಗ ಚೆನ್ನಜ್ಜ ದಪ್ಪವಾಗುತ್ತಿರುವುದೇ ಹೆಣ್ಣು ಗುಬ್ಬಚ್ಚಿ ಇರಬೇಕು ಎಂದು ಊಹಿಸಿದ. ಆದರೆ ಆ ದಿನ ರಾತ್ರಿ ಬಿದ್ದ ಮಳೆಯಿಂದಾಗಿ ಅವುಗಳಲ್ಲಿ ಯಾವುದೂ ಇನ್ನೂ ಗೂಡಿನಿಂದ ಹೊರಬರದಿದ್ದದ್ದನ್ನು ಆತ ನೋಡುತ್ತಾ ಕೂತಿದ್ದ.

ರೊಟ್ಟಿ ತಿನ್ನುವ ಹೊತ್ತಾಯಿತು. ಬಿಸಿಲು ಬಲಿಯುತ್ತಿತ್ತು. ಒಳಗೆ ಸೊಸೆ ರೊಟ್ಟಿ ತಿನ್ನಲು ಮಾವ ಚೆನ್ನಜ್ಜನನ್ನು ಕರೆದಳು. ಆತ ಎದ್ದು ಒಳಗೆ ಹೋಗಿ ತಿಂದಷ್ಟು ತಿಂದು ಕೊನೆಗೆ ಅದು ನಾಲಗೆಗೆ ರುಚಿಸಲಿಲ್ಲವೆಂದು ಸೊಸೆ ಮೇಲೆ, ಹೆಂಡತಿಯ ಮೇಲೆ ರೇಗಿ, ಹೊರಗೆ ಬಂದು ಮತ್ತೆ ತನ್ನ ಮಾಮೂಲು ಜಾಗದಲ್ಲಿ ಗೋಡೆ ಒರಗಿ ಕೂತ.

ಅಷ್ಟೊತ್ತಿಗೆ ಗಂಡು ಗುಬ್ಬಚ್ಚಿ ತನ್ನ ಗೂಡಿನಿಂದ ಹೊರಗೆ ಬಂದು ಸಪ್ಪೆಮೋರೆ ಹಾಕಿಕೊಂಡು ಕೂತಿತ್ತು. ಚೆನ್ನಜ್ಜ ಅದನ್ನು ನಿಟ್ಟಿಸಿದ. ಮತ್ತೊಂದು ಕ್ಷಣದಲ್ಲಿ ಹೆಣ್ಣು ಹಕ್ಕಿ ಗೂಡಿನಿಂದ ತನ್ನ ಕೊಕ್ಕಿನಲ್ಲಿ ಹಸಿರು ಸೊಪ್ಪನ್ನು ಕಚ್ಚಿಕೊಂಡು ಬಂದು ಬಚ್ಚಲಿನಲ್ಲಿ ಬಿಸಾಕಿ ಏನೋ ಕಿಯಪಯ ಅಂತ ಶಬ್ದ ಮಾಡುತ್ತ ಮತ್ತೆ ತಮ್ಮ ಗೂಡಿನೊಳಕ್ಕೆ ತೂರಿತು. ಚೆನ್ನಜ್ಜನಿಗೆ ಏನು ಅನ್ನಿಸಿತೋ ಏನೋ ಅವನು ತಕ್ಷಣ ತನ್ನ ಹಿಂದಿನ ಪಕ್ಷಿ ಜನಕ್ಕೆ ಹೋಗಿ, ಗೂಡಿನ ಹೊರಗೆ ಕೂತಿದ್ದ ಗಂಡು ಹಕ್ಕಿಯನ್ನು ಕುರಿತು ಕೇಳಿದ :

"ಯಾಕೆ? ರಾತ್ರಿ ಗೂಡೊಳಕ್ಕೆ ಮಳೆ ನೀರುಗೀರು ನುಗ್ಗಿತೋ?"

"ಇಲ್ಲ, ಅಜ್ಜಾ!" ಅಂದಿತು ಗಂಡು ಹಕ್ಕಿ.

ಮತ್ತೆ ಚೆನ್ನಜ್ಜ ಅದನ್ನು "ಏನಾದ್ರೂ ರಾತ್ರಿ ಗಂಡ ಹೆಂಡತಿ ಇಬ್ಬರೂ ಜಗಳಗಿಗಳ ಕಾದ್ರೋ?" ಎಂದು ಕೇಳಿದ.

ಗಂಡು ಹಕ್ಕಿಗೆ ಚೆನ್ನಜ್ಜನ ಪ್ರಶ್ನೆಗೆ ತಕ್ಷಣ ಉತ್ತರಿಸುವುದು ಕಷ್ಟವಾಯಿತು. ಆದರೆ ಚೆನ್ನಜ್ಜ ಎಂತದೋ ಇನ್ನೊಂದು ಪ್ರಶ್ನೆ ಹಾಕಿದ್ದ. ಅವನ ಪ್ರಶ್ನೆಗಳಿಗೆ ಸತ್ಯವನ್ನು ಮುಚ್ಚಿಟ್ಟುಕೊಂಡು ತಾನಿನ್ನು ಯಾವ ರಾಜ್ಯ ಆಳಬೇಕು. ಆ ಸಂದರ್ಭದಲ್ಲಿ ಗುಬ್ಬಚ್ಚಿ ತಾನು ಅಪ್ರಮಾಣಿಕನಾಗುವುದು ಸರಿಯಲ್ಲ ಅಂದುಕೊಂಡಿತು. ಆದರೆ ಒಂದು ಕಡೆ ಮುಜುಗರ; ತನ್ನ ಸಂಸಾರದ ಗುಟ್ಟನ್ನು ಈ ಹಳೆಯ ಮನುಷ್ಯ ಚೆನ್ನಜ್ಜನಿಗೆ ಹೇಗೆ ಹೇಳುವುದು ಎಂದು. ತನ್ನ ನೋವು, ನಲಿವು, ಸಂಕಟ, ಭಾವನೆಗಳನ್ನು ತನ್ನ ಪರಿವಾರದವರೊಡನೆ ಹಂಚಿಕೊಳ್ಳಲು ಯಾರೂ ಇರದಿದ್ದರಿಂದ, ಅವರೆಲ್ಲಾ ಯಾವುದೋ ಕೇಡಿಗೆ ಸಿಕ್ಕಿ ಸತ್ತಿದ್ದರಿಂದ ಈ ಅಜ್ಜನ ಜೊತೆಯಲ್ಲಿಕೊಂಚ ಹಂಚಿಕೊಳ್ಳುವ ಎಂದು ಅದು ತೀರ್ಮಾನಿಸಿತು. ಕೊನೆಗೆ ಅದು ರಾತ್ರಿ ನಡೆದ ತನ್ನ ಮತ್ತು ಹೆಂಡತಿಯ ನಡುವಿನ ಕಥೆಯನ್ನು ಚೆನ್ನಜ್ಜನಿಗೆ ಹೇಳಿತು.

ಹೆಣ್ಣು ಗುಬ್ಬಚ್ಚಿಯು ತುಂಬು ಗರ್ಭಿಣಿ. ಅದಕ್ಕೆ ಸಹಜವಾಗಿ ಬಯಕೆ ಆಯಿತು. ಸೀಗೆಸೊಪ್ಪನ್ನು ತಿನ್ನಬೇಕೆಂಬುದು ಅದರ ಬಯಕೆ. ಈ ಸಮಯದಲ್ಲಿ ತನ್ನ ಹೆಂಡತಿಯ ಬಯಕೆಯನ್ನು ನೆರವೇರಿಸುವುದು ಗಂಡನಾದ ತನ್ನ ಕರ್ತವ್ಯ. ಹೋಗಲಿ, ಅವಳ ಬಯಕೆಯನ್ನು ಅವಳ ಅಪ್ಪ ಅವ್ವ ಬಂಧುಬಳಗದವರಾದರೂ ನೆರವೇರಿಸುತ್ತಾರೆ ಅಂದರೆ ಅವರಾರೂ ಇಲ್ಲ. ಒಮ್ಮೆ ಇಡೀ ಕಾಡಿಗೆಲ್ಲಾ ಬೆಂಕಿ ಬಿದ್ದು ಅವರು ಸುಟ್ಟುಹೋದರು. ತಾವು ತಮ್ಮ ಅಮರ ಪ್ರೇಮದಿಂದ ಮೊದಲೇ ಕಾಡು ಬಿಟ್ಟು, ಕುಲಗೋತ್ರವನ್ನೆಲ್ಲಾ ತೊರೆದು ಕಾಡಿನಿಂದ ಓಡಿ ಊರಿಗೆ ಬಂದಿದ್ದರಿಂದ ಬದುಕಿಕೊಂಡಿದ್ದಾಯಿತು. ತನಗೂ ತನ್ನವರು ಅಂತ ಯಾರೂ ಇಲ್ಲ. ಆದ್ದರಿಂದ ತನ್ನ ಹೆಂಡತಿಯ ಬಯಕೆ ಹಾಗೇ ಕನಸಾಗಿ

ಉಳಿಯಬಾರದು ಎಂದು ಅದು ನಿಶ್ಚಯಿಸಿ ನಿನ್ನೆ ಸಂಜೆ ಸೀಗೆಸೊಪ್ಪು ತರಲು ಪುರ್‍ರನೆ ಆಚೆಗೆ ಹಾರಿಹೋಗಿತ್ತು.

ಚೆನ್ನಜ್ಜನ ಹೊಲದ ತಲಭಾಗದಲ್ಲಿದ್ದ ಸೀಗೆಮೆಳೆಗೆ ಅದು ಹಾರಿಬಂದಾಗ ಕತ್ತಲಾಗುತ್ತಿತ್ತು. ಗಾಳಿ ಆಗತಾನೇ ಬರ್‍ರೋ ಎಂದು ಶುರುವಾಗಿತ್ತು. ಮುಗಿಲಿನಿಂದ ಮಳೆಯ ಹನಿಗಳೂ ಬೀಳಲಾರಂಭಿಸಿದ್ದವು. ಅದು ಸೀಗೆಸೊಪ್ಪನ್ನು ತನ್ನ ಕೊಕ್ಕಿನಿಂದ ಪರಪರನೆ ಕೀಳತೊಡಗಿತು. ಕೀಳುತ್ತಾ, ಕೀಳುತ್ತಾ ಹೋದಂತೆಲ್ಲಾ ಒಮ್ಮೆ ಜೋರಾಗಿ ಬೀಸಿದ ಗಾಳಿಗೆ ಅದು ಆಯತಪ್ಪಿ ಹೋಗಿ ಸೀಗೆ ಮುಳ್ಳೊಳಗೆ ಹೊಕ್ಕಿಕೊಂಡಿತು. ರೆಕ್ಕೆಗಳನ್ನು ಮುಳ್ಳುಗಳು ಬಿಗಿಯಾಗಿ ಹಿಡಿದುಕೊಂಡವು. ಬಿಡಿಸಿಕೊಂಡು ಹಾರಲು ಯತ್ನಿಸಿ, ಒದ್ದಾಡಿತು, ಒಸಕಾಡಿತು, ಕೊಸರಾಡಿತು; ಆಗಲಿಲ್ಲ. ಮೈ ಪುಕ್ಕವೆಲ್ಲಾ ಕಿತ್ತು ಬರತೊಡಗಿತು. ಕೊನೆಗೆ ಅದರ ಹೋರಾಟವೆಲ್ಲಾ ವ್ಯರ್ಥವಾಗಿ ಆ ರಾತ್ರಿಯನ್ನೆಲ್ಲಾ ಆ ಸೀಗೆಮೆಳೆಯಲ್ಲಿಯೇ ಮಳೆಗಾಳಿಯಲ್ಲಿ ನಡುಗುತ್ತಾ ಕಳೆಯಿತು.

ಬೆಳಗಾದಾಗ ಆ ಗಂಡು ಗುಬ್ಬಚ್ಚಿಯ ಕಣ್ಣಿಗೆ ಮೂಡಿತು. ತನ್ನನ್ನು ಹಿಡಿದುಕೊಂಡಿದ್ದ ಸೀಗೆಮಳೆ ಬೆಳಗಿನ ಜಾವ ತಂಪಾಗಿ ಬೀಸಿದ ಎಳೆ ತಂಗಾಳಿಯಲ್ಲಿ ತನಗೆ ಗೊತ್ತಿಲ್ಲದಂತೆಯೇ ಬಿಟ್ಟುಬಿಟ್ಟಿತ್ತು. ಆಗ ಅದಕ್ಕೆ ಹೋದ ಜೀವ ಬಂದಂತಾಯಿತು. ಎದ್ದು ಸುತ್ತಾ ನೋಡಿತು. ತಾನು ರಾತ್ರಿಯೆಲ್ಲಾ ಅನುಭವಿಸಿದ ಸಂಕಟಕ್ಕೆ ತನ್ನ ರೆಕ್ಕೆಪುಕ್ಕಗಳೆಲ್ಲಾ ಕಳಚಿ ನೆಲಕ್ಕೆ ಬಿದ್ದು ನೆಂದು ತೊಪ್ಪೆಯಾಗಿದ್ದವು. ಸದ್ಯ ಬದುಕಿದೆನಲ್ಲ! ತನ್ನ ಭಾಗಕ್ಕೆ ದೇವರು ಖಂಡಿತ ಇದ್ದಾನೆ! ತನ್ನ ಹೆಂಡಿತಿಯ ಮುತ್ತೈದೆತನ ಉಳಿಯಿತು! ಎಂದುಕೊಂಡು ಸೀಗೆಸೊಪ್ಪನ್ನು ಕೊಕ್ಕಿನಲ್ಲಿ ಕಚ್ಚಿಕೊಂಡು ನರಳುತ್ತಾ ತನ್ನ ಗೂಡಿಗೆ ಹಾರಿ ಮರಳಿತು.

ಇತ್ತ ರಾತ್ರಿಯೆಲ್ಲಾ ಮಿಂಚು ಗುಡುಗು ಗಾಳಿ ಮಳೆಗೆ ಬೆದರಿ ಭಯದಿಂದ ನಿದ್ದೆಬಾರದೆ ಮೌನದಲ್ಲಿ ಹೆಣ್ಣು ಹಕ್ಕಿ ಸೊರಗಿತ್ತು. "ಸಂಜೆ ಹೋದ ನನ್ನ ಗಂಡ ಇನ್ನೂ ಬರಲಿಲ್ಲವಲ್ಲ ದೇವರೇ! ಅವನಿಗೆ ಏನಾಯ್ತು! ಬರಲಿ, ಇವತ್ತು ಅವನು ಮನೆಗೆ, ಅವನಿಗೆ ಸರಿಯಾಗಿ ಬುದ್ಧಿ ಕಲಿಸದೆ ಇದ್ರೆ ನಾನು ನಮ್ಮಪ್ಪನಿಗೆ ಹುಟ್ಟಿದ ಮಗಳೇ ಅಲ್ಲ!" ಎಂದು ನಿಶ್ಚಯ ಮಾಡಿಕೊಂಡು ತನ್ನ ಗಂಡ ಬರುವ ಆಕಾಶದ ಹಾದಿಯನ್ನೇ ಕಾಯುತ್ತಾ ಕೂತಿತ್ತು.

ಅತ್ತಿಂದ ಗಂಡುಹಕ್ಕಿ ರಾತ್ರಿ ತಾನು ಪಟ್ಟ ಪಾಡನ್ನೆಲ್ಲಾ ನುಂಗಿಕೊಂಡು ಮೊಟ್ಟೆ ಇಡಲು ದಿನ ತುಂಬಿದ ತನ್ನ ಹೆಂಡತಿ ರಾತ್ರಿಯೆಲ್ಲಾ ಒಬ್ಬಳೇ ಏನುಮಾಡಿಕೊಂಡಿದ್ದಾಳೋ? ಬೆದರಿದಳೋ? ಬೆಚ್ಚಿದಳೋ! ಮಳೆ ಏನಾದರೂ ಗೂಡೊಳಕ್ಕೆ ನುಗ್ಗಿತೋ? ಛೇ, ನುಗ್ಗಿದ್ದರೆ ಅವಳ ಗತಿಯೇನು? ಎಂದು ಸಕಲೊಂಬತ್ತು ಚಿಂತೆಗಳನ್ನು ತಲೆತುಂಬ ತುಂಬಿಕೊಂಡು ಹಾರಿ ಬಂದಿತ್ತು.

ಗಂಡುಹಕ್ಕಿ ಗೂಡಿಗೆ ಬಂದಾಗ ಹೆಣ್ಣುಹಕ್ಕಿ ಮೌನದ ರುದ್ರೆಯಾಗಿ ಕೂತಿತ್ತು. ಗಂಡುಹಕ್ಕಿ ಏನೂ ಮಾತನಾಡದೆ ಸಪ್ಪೆಮೋರೆ ಹಾಕಿಕೊಂಡು ಒಳಗೆ ಪ್ರವೇಶಿಸಿತು. ಆಗ ಇಬ್ಬರ ನಡುವೆ ಕ್ಷಣ ಮಾತೇ ಇಲ್ಲ. ಕೊನೆಗೆ ಗಂಡುಹಕ್ಕಿಯೇ ನಿಟ್ಟುಸಿರು ಬಿಟ್ಟು ಹೇಳಿತು :

"ಕ್ಷಮಿಸು ಚಿನ್ನಾ, ರಾತ್ರಿ ಬರುವುದಕ್ಕೆ ಆಗಲಿಲ್ಲ. ಮಳೆಗಾಳಿಗೆ ಸಿಕ್ಕಾಕಿಕೊಂಡು ಸೀಗೆಮೆಳೆಯಲ್ಲಿ ನಾನು ಬದುಕಿ ಉಳಿದದ್ದೇ ಹೆಚ್ಚು. ನನ್ನ ಭಾಗ್ಯಕ್ಕೆ ದೇವರು ಇದ್ದ! ಇಲ್ಲಿ ನೋಡು!" ಎಂದು ಹೇಳಿ ತನ್ನ ಮೈಯ್ಯಿಂದ ಬರುತ್ತಿದ್ದ ರಕ್ತವನ್ನು ತೋರಿಸಲು ಹೋಗಿ, ಕೊನೆಗೆ ತೋರಿಸದೆ ತನ್ನ ರಾತ್ರಿಯ ಅನುಭವದ ಯಾತನೆಯನ್ನು ಅವಳಿಗೆ ಹೇಳಿ ಯಾಕೆ ಅವಳ ಮನಸ್ಸನ್ನು ನೋಯಿಸಬೇಕು ಎಂದುಕೊಂಡು ತನ್ನ ದುಃಖವನ್ನು ತಾನೇ ನುಂಗಿಕೊಂಡಿತು.

ಈಗ ಹೆಣ್ಣು ಹಕ್ಕಿ ಹೇಳಿತು: "ನಿನ್ನ ಸೊಪ್ಪು ಯಾರಿಗೆ ಬೇಕು? ನಿಜ ಹೇಳು! ರಾತ್ರಿ ಎಲ್ಲಿಗೆ ಹೋಗಿದ್ದೆ? ಯಾವಳತ್ರ ಚಕ್ಕಂದ ಆಡ್ಕೊಂಡು ಇದ್ದೆ? ಮೈಮೇಲೆಲ್ಲಾ ಗೀರುಗಳು ಕಾಣ್ತಾ ಅವಲ್ಲ! ಈ ಸುಳ್ಳನೆಲ್ಲಾ ನನ್ನ ಹತ್ತಿರ ಕತೆ ಕಟ್ಟಿ ಬಣ್ಣಿಸ್ಬೇಡ!" ಎಂದು ಅದರ ಮೇಲೆ ರಂಗಾಯಿತು.

ಗಂಡುಹಕ್ಕಿ ಆಗ ಅದರ ಪ್ರಶ್ನೆಗಳಿಗೆ – "ನನ್ನ ಹೆತ್ತ ತಾಯಿಯ ಮೇಲಾಣೆ. ನನ್ನ ಹುಟ್ಟಿಸಿದ ನನ್ನಪ್ಪನ ಮೇಲಾಣೆ. ನನ್ನ ಮನೆ ದೇವರ ಮೇಲಾಣೆ. ನಿನ್ನ ಮೇಲಾಣೆ. ನಿನ್ನ ವಿಷಯದಲ್ಲಿ ನಾನು ಏನಾದರೂ, ಎಂದಾದರೂ ಸುಳ್ಳು ಹೇಳಿದ್ದೀನಾ? ದ್ರೋಹ ಮಾಡಿದ್ದೀನಾ? ಹಾಗೆ ನಾನು ವಂಚನೆ ಮಾಡಿದ್ದೇ ಆಗಿದ್ದರೆ ನಾಳೆ ನಿನ್ನ ಹೊಟ್ಟೆಯಲ್ಲಿ ಜನ್ಮತಾಳುವ ನನ್ನ ಜೀವ ಸಂತತಿಯೇ ನಾಶವಾಗಿ ಹೋಗಲಿ! ನಿನ್ನನ್ನು ಬಿಟ್ಟು ನಾನು ನನ್ನ ಜೀವನದಲ್ಲಿಯೇ ಬೇರೆ ಯಾರನ್ನೂ ಕಣ್ಣೆತ್ತಿಯೂ ನೋಡಿಲ್ಲ. ಹಾಗೇ ನೋಡಿದ್ದೇ ಆಗಿದ್ದರೆ ಈ ನನ್ನ ಕಣ್ಣುಗಳೇ ಇಂಗಿ ಹೋಗಲಿ. ನಾನು ರಾತ್ರಿ ನನ್ನ ಪೂರ್ವಜರ ಪುಣ್ಯದ ಫಲದಿಂದ ಬದುಕಿ ಬಂದದ್ದೇ ಹೆಚ್ಚು ಅಷ್ಟೇ ಅಲ್ಲ. ನಮ್ಮಿಬ್ಬರ ನಡುವಿನ ಈ ಪ್ರೀತಿಯ ಗೂಡಿಗೆ ದ್ರೋಹ ಮಾಡಿದ್ದೇ ಆಗಿದ್ದರೆ, ನನಗೆ ನನ್ನ ಮುಂದಿನ ಜನ್ಮದಲ್ಲಿ ಆ ಪಾಪಿ ನರಮನುಷ್ಯನ ಜನ್ಮ ಬರಲಿ!" ಎಂದು ಹೇಳಿ ಕಣ್ಣೀರು ಸುರಿಸಿ ಸಪ್ಪೆಮೋರೆ ಹಾಕಿಕೊಂಡು ಹೊರಗೆ ಬಂದು ಕೂತಿತು.

ಆದರೆ ಹೆಣ್ಣು ಹಕ್ಕಿಗೆ ಬಂದ ಸಿಟ್ಟು ಕರಗಲಿಲ್ಲ. "ನಿನ್ನ ಈ ಸೊಪ್ಪು ಯಾರಿಗೆ ಬೇಕು?" ಎನ್ನುತ್ತ ಅದನ್ನು ತಂದು ಆಚೆ ಬಚ್ಚಲ್ಲಿಗೆ ಬಿಸಾಕಿ ಗೂಡಿನೊಳಕ್ಕೆ ಹೊಕ್ಕಿತು.

ಆಗ ಗಂಡು ಹಕ್ಕಿ ಅಲ್ಲೆ ಕೂತಿದ್ದ ಚೆನ್ನಜ್ಜನಿಗೆ ಹೇಳಿತು "ಒಂದು ರಾತ್ರಿಗೆ ನೀನು ಹೇಗೆ ಆಡ್ತಿಯಲ್ಲ. ನಿನಗೆ ಇದು ತರವಲ್ಲ. ನಮ್ಮ ಮನೆಯ ಚೆನ್ನಜ್ಜನ ಮಗ ಇದ್ದಾನಲ್ಲ, ಅವನು ಈ ಮಧ್ಯೆವಯಸ್ಸಿನಲ್ಲಿಯೂ ದಿನಗಟ್ಟಲೆ ಅವನ ಧರ್ಮ ಪತ್ನಿ ಗೌರಕ್ಕನ ಕಣ್ಣು ತಪ್ಪಿಸಿ ಆ ಹೊಸಳ್ಳಿ ರಂಗಿ ಮನೆಗೆ ಹೋಗಿ ಇದ್ದು ಬರ್ತಾನಲ್ಲ. ಆ ಗೌರಕ್ಕ ಹೇಗೆ ತನ್ನ ದುಗುಡ ದಮ್ಮಾನ ಅವಮಾನವನ್ನು ತಡಕೊಂಡು ಇರ್ಬೇಕು ಹೇಳು? ನಾನೇನಾದರೂ ಅಂತಹ ಹಲ್ಕಾ ಕೆಲಸ ಮಾಡಿದ್ದೀನಾ? ಅಂತ ತನ್ನ ಹೆಂಡ್ತಿಯ ಕೇಳ್ತಾ ಇದ್ದೀನಿ ಚೆನ್ನಜ್ಜ" ಎಂದು ವಿವರಿಸಿದಾಗ ಪಕ್ಷಿ ಅವತಾರ ತಾಳಿದ್ದ ಚೆನ್ನಜ್ಜ ಗಂಡು ಗುಬ್ಬಚ್ಚಿಯ ಕಥೆ ಕೇಳಿ, "ಎಲ್ಲ ಸಂಸಾರಗಳಲ್ಲಿಯೂ ಈ ರಗಳೆ ರಂಪ ಇದ್ದದ್ದೇ. ಜೀವ, ಮಾನ ಎರಡೂ ಒಂದೇ ಎಂದು ಯಾರೇಯಾದರೂ ತಿಳಿದು ಬದುಕೋದು ಒಳ್ಳೇದು. ಏನೋ ನಾಕಾರು ದಿನ ಪರಸ್ಪರ

ಅನುಸರಿಸಿಕೊಂಡು ಹೋಗಿ" ಎಂದು ಅದಕ್ಕೆ ಸಮಾಧಾನ ಹೇಳಿದಲ್ಲದೆ, ಆತ ಮತ್ತೆ ಮನುಷ್ಯನಾಗಿ ಬದಲಾದ.

ಈ ಮಾತನ್ನು ಕೇಳಿಸಿಕೊಂಡು ಒಳಗಿನಿಂದ ಹೆಣ್ಣು ಹಕ್ಕಿ ಹೊರಗೆ ಬಂದಿತು. ತನ್ನ ಗಂಡ ತಮ್ಮ ಸಂಸಾರದ ಗುಟ್ಟನ್ನು ಬೇರೆಯವರಿಗೆ ಹೇಳಿದ್ದು ಅದಕ್ಕೆ ಇಷ್ಟವಾಗಲಿಲ್ಲ ತನ್ನ ಗಂಡನ ಮೇಲೆ ರೇಗಿ ಮತ್ತೆ ಗೂಡೊಳಕ್ಕೆ ಹೋಯಿತು.

ಅಷ್ಟರಲ್ಲಿ ಹೊಲದ ಹತ್ತಿರ ಹೋಗಿದ್ದ ತನ್ನ ಮೊಮ್ಮಗ ಕಿಟ್ಟಿ ಕೈಯಲ್ಲಿ ಹಸಿ ಹಣಬೆಗಳನ್ನು ಹಿಡಿದು ತಂದದ್ದು ಕಂಡು ಚೆನ್ನಜ್ಜನಿಗೆ ಕಣ್ಣುಗಳು ಅಗಲಿದವು. ಕಿಟ್ಟಿ ಸೀಗೆ ಮೆಳೆಯಲ್ಲಿದ್ದ ಹುತ್ತದ ಬಳಿ ಹಣಬೆ ಎದ್ದಿದ್ದನ್ನು ತನ್ನ ಮುತ್ತಾತನಿಗೆ ವಿವರಿಸದ. ಅಲ್ಲಿ ಗುಬ್ಬಚ್ಚಿಯ ಗರಿಗಳನ್ನೆಲ್ಲಾ ಆಯ್ದು ತಂದಿದ್ದನ್ನು ಅಜ್ಜನಿಗೆ ಬಣ್ಣಿಸಿದ. ಕೇಳಿದ್ದಕ್ಕೆ ಎಲ್ಲವೂ ಸೀಗೆ ಮೆಳೆಯಲ್ಲಿ ಸಿಕ್ಕಿತು ಎಂದ. ಗಂಡು ಹಕ್ಕಿ ತನ್ನ ರೆಕ್ಕೆಗಳನ್ನು ನೋಡಿತು. ಹೆಣ್ಣು ಹಕ್ಕಿಗೆ ಆ ಪುಕ್ಕಗಳನ್ನು ಕಂಡು ನಾಚಿಕೆಯಾಯಿತು. ಆ ಮೇಲೆ ಗೂಡಿನೊಳಕ್ಕೆ ಎರಡು ನಗುತ್ತ ಮರಳಿದವು.

ಕಿಟ್ಟಿ, ತನ್ನ ಮುತ್ತಾತ ಯಾರ ಜೊತೆಯಲ್ಲಿಯೋ ಹೊರಗೆ ತನ್ನಷ್ಟಕ್ಕೇ ತಾನೇ ಮಾತನಾಡುತ್ತಿರುವುದನ್ನು ಕಂಡು ಬೆರಗಾಗಿ ತನ್ನ ಮುತ್ತಜ್ಜಿ ಬಳಿಗೆ ಬಂದು ಹೇಳಿದ. ಆಗ ಆ ಮುದುಕಿ ಕಿಟ್ಟಿಗೆ, "ರೊಟ್ಟಿ ತಿನ್ನದೆ ಹೊತ್ತಾರೆಯಿಂದ ಏನೋ ಒಂದೇ ಸಮನೆ ತನಗೆ ತಾನೇ ಮಾತಾಡ್ತಾ ಕೂತದೆ ಅದು ಬಾ. ಮಾತೆತ್ತಿದರೆ ಬಯ್ತದೆ ಯಾವತ್ತು ಅದರದು ಇದ್ದದ್ದೇ ತಪ್ಪದಿಲ್ಲ" ಎಂದು ತನ್ನ ಗಂಡನ ಬಗ್ಗೆ ಸಿಟ್ಟು ಕಾರಿದಳು.

ಕಿಟ್ಟಿ ಮೂಲೆಯಲ್ಲಿ ಮಲಗಿದ್ದ ತನ್ನ ಅವ್ವ ಬಾಣಂತಿ ಹತ್ತಿರ ಬಂದು "ಗುಬ್ಬಚ್ಚಿ ಪುಕ್ಕವ ಪುಸ್ತಕದಲ್ಲಿಟ್ರೆ ಮರಿ ಹಾಕ್ತದೇನವ್ವ? ಅಂಗಂತ ನಮ್ಮ ಮೇಷ್ಟ್ರು ಹೇಳ್ತಿದ್ರು" ಎಂದು ಕೇಳಿದ. ಅದಕ್ಕೆ ಅವ್ವ "ಪುಕ್ಕ ಮರಿ ಮಾಡ್ತದೇನೋ! ದಡ್ಡ, ಹೋಗೋ, ಇವತ್ತು ನಿಮ್ಮಪ್ಪ ಊರ್ನಿಂದ ಬರ್ತಾರಂತೆ. ಅವರ್ನ ಕೇಳು ಹೇಳ್ತಾರೆ. ಪುಕ್ಕ ಮರಿ ಹಾಕ್ತದೊ, ಮೊಟ್ಟೆ ಮರಿಯಾಗ್ತದೊ ಅನ್ನೋದ್ನ ಅವರು ಹೇಳ್ತಾರೆ!" ಎಂದು ಹೇಳಿ ಅವಳು ನಕ್ಕಳು. ಹೊರಗೆ ಕಿಟ್ಟಿಯ ಮಾತು ಕೇಳಿಸಿಕೊಂಡು ಚೆನ್ನಜ್ಜ, "ಬಾರೋ ಇಲ್ಲಿ ಕಿಟ್ಟಿ, ಇಲ್ಲೊಂದು ಗುಬ್ಬಚ್ಚಿ ಗೂಡಿದೆ. ನೋಡು ಬಾ. ಅದರೊಳಗೆ ಎರಡು ಗುಬ್ಬಚ್ಚಿ ಅವೆ. ಹಿಡಿ ಬಾ, ಸಿಗ್ತವೆ" ಎಂದು ಕೂಗಿದ. ಕಿಟ್ಟಿ ಒಳಗಿನಿಂದ ಎದ್ದು ಬಿದ್ದು ತನ್ನ ಮುತ್ತಜ್ಜನ ಬಳಿಗೆ ಓಡಿ ಬಂದ. ಆಗ ಚೆನ್ನಜ್ಜ ಕಿಟ್ಟಿಗೆ ಗೂಡು ತೋರಿಸಿದ. ಅದರೊಳಗೆ ಕೈತೂರಿಸಿ ಅವುಗಳನ್ನು ಹಿಡಿಯಲು ಅವನಿಗೆ ಧೈರ್ಯ ತುಂಬಿದ. ಗೂಡಿನೊಳಗೆ ಉತ್ಸಾಹದಿಂದ ತೂರಿಸಿದ ಕಿಟ್ಟಿಯ ಕೈಗೆ ಎರಡು ಗುಬ್ಬಚ್ಚಿಗಳೂ ಒಟ್ಟಿಗೆ ಸಿಕ್ಕವು. ಮೆಲ್ಲಗೆ ಅವುಗಳನ್ನು ಹಿಡಿದು ಹೊರಗೆ ಎಳೆದ. ಅವುಗಳ ಮೈಸ್ಪರ್ಶದಲ್ಲಿ ಕಿಟ್ಟಿಗೆ ಮೈಪುಳಕವಾಯಿತು. "ಅವ್ವಾ, ನನಗೆ ಗುಬ್ಬಚ್ಚಿಗಳು ಸಿಕ್ದೋ! ಗುಬ್ಬಚ್ಚಿಗಳು ಸಿಕ್ದೋ" ಎಂದು ಉತ್ಕಟವಾದ ಆನಂದದಲ್ಲಿ ತನ್ಮಯವಾಗಿ ಚೀರಿದ.

ಆದರೆ ಚೆನ್ನಜ್ಜನಿಗೆ ಅದನ್ನು ಕೇಳಿ ನಾಲಗೆಯಲ್ಲಿ ನೀರು ಸುರಿಯಿತು! ಆದರೆ ಅಷ್ಟರಲ್ಲಿ ಅವು ಕಿಟ್ಟಿಯ ಕೈಯಿಂದ ನುಸುಳಿಕೊಂಡು ಪುರ್ರನೆ ಹಾರಿ ಆಕಾಶದಲ್ಲೆಲ್ಲೋ

ಮಾಯವಾದವು. ಚೆನ್ನಜ್ಜ ಮಾತ್ರ ಸಾಯುವವರೆಗೂ ಆ ಗುಬ್ಬಚ್ಚಿಗಳ ಆಗಮನದ ನಿರೀಕ್ಷೆಯಲ್ಲೇ ಇದ್ದ. ಆದರೆ ಮಾಯವಾದ ಗುಬ್ಬಚ್ಚಿಗಳು ಮಾತ್ರ ಮತ್ತೆ ಆ ಗೂಡಿಗೆ ಮರಳೇ ಇಲ್ಲ.

## ಓದು ಪಠ್ಯ : ಮರಳಿ ಮಣ್ಣಿಗೆ

**– ಶಿವರಾಮಕಾರಂತ (ಆಯ್ದ ಭಾಗ)**

ರಾಮನಿಗೆ ಎರಡು ವರ್ಷ ತುಂಬಿತು. ಯುಗಾದಿಯೂ ಬಂದಿತು. ಲಚ್ಚನ ಸವಾರಿ ಎಲ್ಲರಿಗೂ ಮೋಸ ಕೊಟ್ಟು ಮಾಯವಾಗಿ ಒಂದು ವರ್ಷವಾಗಿತ್ತು. ಆ ಒಂದೇ ವರ್ಷದಲ್ಲಿ ಐತಾಳರ ವಂಶದವರು ತಮ್ಮ ನೆಲೆಯಲ್ಲೇ ತಾವು ಗೇಣಿಯಾಳುಗಳಾದರು. ನಾಗವೇಣಿಯು ಮುದಿ ಸೂರನನ್ನು ಕರೆಯಿಸಿ, ಅವನ ಮುಂದೆ ತನ್ನ ಗೋಳನ್ನು ಹೇಳಿಕೊಡಳು. 'ನೋಡು, ಸೂರ, ದೇವರು ಹೀಗೆಲ್ಲ ಮಾಡಿದರು. ನಿನಗೆ ವಯಸ್ಸಾಯಿತು, ನಿಜ. ನಿನ್ನ ಮಕ್ಕಳು ದುಡಿಯುವವರಿದ್ದಾರೆ. ಅವರಿಂದ ಒಂದು ಹೂಟೆ ಮಾಡಿಸಿಕೊಟ್ಟರೆ, ಮೂರು ಮುಡಿ ನಮ್ಮದೇ ಜಾಗ ಮಾಡಿಕೊಂಡಿದ್ದು, ಸಾಗುವಳಿ ಮಾಡಿ ಬದುಕುವ ಎಂದಿದೆ' ಎಂದಳು. ಸೂರನು ಎಷ್ಟೆಂದರೂ ಅವರ ಒಕ್ಕಲಾಗಿದ್ದವನು. ಈಗ ತನ್ನ ಧನಿಗಳಿಗೆ ಈ ದುರ್ಗತಿ ಬಂದುದನ್ನು ಸಹಿಸಲಾರ. ಅವನೂ ಕಣ್ಣೀರನ್ನು ಕರೆದನು. 'ಅಮ್ಮ, ನನ್ನ ಮಕ್ಕಳು ಅಂತಹ ಪಡಪೋಶಿಗಳಲ್ಲ. 'ನಿಮ್ಮ ಗದ್ದೆ ಹೂಡಿ ಒಂದಿಷ್ಟು ಬನ್ನಿ' ಅಂದರೆ ಬರಲಿಕ್ಕಿಲ್ಲ ಅನ್ನಲಾರವು' ಎಂದನು. 'ನಿನಗೆ ಕೊಚ್ಚಿಗೆ ಮೋಸವಾಗದು ಸೂರ. ಅಷ್ಟಕ್ಕೆ ಉಂಟು. ಈಗೊಂದು ಸಾರಿ ಬಂದು ಹೂಡಿ ಹೋದರೆ, ಮುಂದೆ ದೇವರು ಕೊಟ್ಟದ್ದು. ಹಿಂಗಾರು ಮಳೆಗೆ ಕೊಚ್ಚಿಹೋಗದ ಹಾಗೆ ಕೊಯ್ಲಿನ ಸಮಯ ಎರಡಾಳು ಬಂದರೆ ಸಾಕು' ಎಂದಳು. ಸೂರನು ಕೈಗೋಲು ಊರಿಕೊಂಡು ತನ್ನ ಮನೆಗೆ ಹೋದನು. ಅವನ ಅನುಜ್ಞೆಯಂತೆ ಸರಸೋತಮ್ಮನ ಮೂರು ಮುಡಿ ಗದ್ದೆಗಳು ಮಳೆ ಬೀಳುವ ಮೊದಲೇ ಹುಡಿ – ಹೂಟೆಯಾಗಿ ನೆಲವು ಅಗೆಗೆ ಸಿದ್ಧವಾಯಿತು. ಒಂದೆರಡು ಮಳೆಗಳು ಬೇಸಿಗೆಯಲ್ಲಿ ಬಡಿದುದರಿಂದ ಬಿತ್ತಿದ ಬೀಜ ಮೊಳಕೆ ಒಡೆಯಿತು. ನಾಗವೇಣಿ, ಸತ್ಯಭಾಮೆಯರು ಸರದಿಯಿಂದ ರಾಮನನ್ನು ಹೊತ್ತುಕೊಂಡು, ಅಗೇಡಿಯಲ್ಲಿ ಹೋಗಿ ಕೋಳಿಯ ಓಡಾಟದಿಂದ ಕೆಡದಂತೆ ಕಾವಲಿಟ್ಟರು.

ಬಿಸಿಲಿನ ಜಳವು ಬಲವಾಯಿತು. ಬಿಳಿ ಮುಗಿಲುಗಳು ಉಂಡುಂಡೆಗಳಾಗಿ ಪಡುಬಾನಿನಿಂದ ಮೂಡುಘಟ್ಟಗಳಿಗೆ ಉರುಳಿದುವು. ಅದು ಊರಿನ ಮದುವೆ ಮುಂಜಿಗಳಿಗೆ ಹೆದರಿಕೆ ಹುಟ್ಟುವಂತೆ ಮಾಡಿದರೂ, ಊರಿನ ಅಗೇಡಿಗಳಿಗೆ ಜನರು ಬೆವರಿಳಿಸಿಕೊಂಡು ಸಂಬಳಿಗೆ ನೀರನ್ನು ಮೊಗೆಯದಂತೆ ನಾಲ್ಕಾರು ಹನಿಗಳನ್ನು ಸುರಿದವು; ಆಗೆ ಹಸುರಾಗಿ ಬೆಳೆಯಿತು. ಸರಸೋತಿಯು ದೇವರನ್ನು ಕೊಂಡಾಡುತ್ತ 'ಸತ್ಯ, ಮಗುವಿಗೆ ಮಳೆಗಾಲಕ್ಕೆ ತೊಡುವಿಗೇನಾದರೂ ಮಾಡು. ಏನಿಲ್ಲವಾದರೆ ಅಕ್ಕಿಯ ಹಪ್ಪಳ' ಎಂದಳು. ನಾಗವೇಣಿಯು ನಡುವೆ ಬಾಯಿಕ್ಕಿ 'ಹಪ್ಪಳಕ್ಕೆ ಅಕ್ಕಿ ಕುಟ್ಟಿದರೆ, ನಟ್ಟಿ, ಕಳೆ ಕೀಳುವುದು, ಕೊಯ್ಲು – ಇವಕ್ಕೆಲ್ಲ ಎಷ್ಟು ಬೇಕು, ಎಂಬ ಅಂದಾಜಿಲ್ಲದೆ ಅಕ್ಕಿ ತೆಗೆದರೆ...' ಎಂದಳು. ಸರಸೋತಿಯು ನಕ್ಕಳು.

'ಮಗುವಿನ ಹಪ್ಪಳಕ್ಕೆ ಕಡಿಮೆ ಆಗುವ ಹಾಗೆ ಬಂದರೆ ಮೂರು ಜನ ಒಂದೊಂದು ದಿನ ಏಕಾದಶಿ ಮಾಡಿದರಾಯಿತು' ಎಂದಳು. ನಾಗವೇಣಿಗೆ ನಾಚಿಕೆಯಾಯಿತು. ಆದರೂ ಮನೆಯಲ್ಲಿ ಉಳಿದ ಅಕ್ಕಿಯನ್ನು ಕೊಪ್ಪರಿಗೆ ಹಾಗೇ ಕಾಯಬೇಕು – ಎಂದು ಅವಳ ಒಳದನಿ ನುಡಿಯುತ್ತಿತ್ತು. ಆದುದರಿಂದ 'ಬೇಡ, ಏನಾದರೂ ಮಾಡಿ ಹಪ್ಪಳ ಆದರೆ ಆಯಿತಲ್ಲ' ಎಂದಳು. ಊರಲ್ಲಿ ಯಾವುದಕ್ಕೆ ಬರಗಾಲ ಬಂದರೂ ಗೋವೆ ಮರಗಳಿಗೆ ಬರಗಾಲವೇ? ಅದರ ಹಣ್ಣನ್ನು ಮೂಸುವವರಿಲ್ಲ. ಅದರಿಂದ ಸಂಡಿಗೆ, ಹಪ್ಪಳಗಳನ್ನು ಮಾಡಿದಳು. ಸಣ್ಣ ಅತ್ತೆಯೊಡನೆ 'ಈ ಹಪ್ಪಳ, ಸಂಡಿಗೆ ಮಳೆಯ ಜೋರಿನೊಡನೆ ಹಳಸದೆ ಇದ್ದರೆ ಸಾಕು' ಎಂದುಕೊಂಡಳು. ಸತ್ಯಭಾಮೆಗೆ ಮಗಳ ಮನೆಯ ನೆನಪಾಯಿತು. 'ಒಂದು ನಾಲ್ಕು ಹಲಸಿನ ಕಾಯಿ ಅಲ್ಲಿಂದ ತಂದರೆ ಯಾವ ಯೋಚನೆಯೂ ಇಲ್ಲ' ಎಂದಳು, ಅವಳು. ನಾಗವೇಣಿಯು ಅಲ್ಲಿಂದ ಇಲ್ಲಿಗೆ ಹಲಸಿನಕಾಯಿ ಹೊತ್ತು ತರುವುದು ಸಣ್ಣಾಟವೇ? ಎಂದಳು. ಸರಸೋತಿಯು ತನ್ನ ಯೌವನದ ದಿನಗಳಲ್ಲಿ ಮೂಡಿನ ಊರಿನ ಮಾವಿನಮಿಡಿಗಳನ್ನು ತಂದು ಉಪ್ಪಿನಕಾಯಿ ಮಾಡಿದ ಕತೆ ಹೇಳಿದಳು. 'ನಿಮ್ಮ ಜೀವ, ಧೈರ್ಯ ಇದ್ದರೆ ಏನೂ ಆಗುತ್ತಿತ್ತು' ಎಂದಳು ಸತ್ಯಭಾಮೆ. ಆದರೂ ಮೊಮ್ಮಗನ ಬಾಯಿ ಸಪ್ಪೆ ಆಗಬಾರದು, ಅದು ತೊಡುವಿಗೆ ತಾಯನ್ನು ಕಾಡಬಾರದು – ಎಂದು ತಾನೇ ಮಂದರ್ತಿ ಯಾತ್ರೆಗೆ ಹೊರಟಳು. 'ಏನಿಲ್ಲ, ಎರಡು ದಿನಗಳಲ್ಲಿ ಬರುತ್ತೇನೆ' ಎಂದು ಸಾಗಿದಳು. ಬರುವಾಗ ದಿನ ಎರಡಕ್ಕೆ ನಾಲ್ಕಾಯಿತು. ನಾಲ್ಕು ದಿನಗಳ ಮೇಲೆ ಸತ್ಯಭಾಮೆಯು ಮಗಳ ಮನೆಯಿಂದ ಬಂದಳು. ಸುಬ್ಬಿಯ ಮಗನು ಸತ್ಯನ ಹಿಂದಕ್ಕೆ ಒಂದು ತಲೆಮೂಟೆಯೊಡನೆ ಅವರ ಮನೆಗೆ ಬಂದನು. ಅವಳ ತಲೆಯ ಮೇಲೂ ಒಂದು ಬಟ್ಟೆಯ ಕಟ್ಟಿತ್ತು. ಆ ದಿನ ಸತ್ಯಭಾಮೆಗೆ ತಾನು ದುಡಿದುದರ ಹಿಗ್ಗು ಹೇಳತೀರದು. 'ಕೂಸಣ್ಣ, ನಿನ್ನ ಭಾವ ಬಂದಿದ್ದಾನೆ, ನೋಡು. ಹಪ್ಪಳ ತಂದಿದ್ದಾನೆ, ಎಂದಳು. ಸತ್ಯಭಾಮೆ ಮಗುವಿನ ಹೆಸರನ್ನು ಹೇಳುವಂತಿರಲಿಲ್ಲವಷ್ಟೆ. ಅವಳ ಪಾಲಿಗೆ ಇನ್ನೂ 'ಕೂಸ'ನೇ ಆಗಿ ಉಳಿದ ಮಾತು, ರಾಮನಿಗೆ ತಿಳಿಯದಾದರೂ, ಹಪ್ಪಳ ಎಂಬುದು ತಿಳಿಯಿತು. ಸತ್ಯಭಾಮೆಯು ಮಗಳ ಮನೆಯಲ್ಲಿ ಕುಳಿತು ಹಲಸಿನ ಕಾಯನ್ನು ತೆಗೆಯಿಸಿ, ಕಡಿದು, ಬೇಯಿಸಿ, ಹಪ್ಪಳ ಹಣಿದೂ ತಂದಿದ್ದಳು. ಜತೆಗೆ ಗೆಣಸು, ಕೆಸುವಿನ ಗೆಡ್ಡೆಗಳ ಹಪ್ಪಳವೂ ಮಗುವಿನ ಸೋದರತ್ತೆಯಿಂದ ಕಾಣಿಕೆಯಾಗಿ ಬಂದಿತ್ತು. ಮನೆಗೆ ಬಂದ ಸುಬ್ಬಿಯ ಮಗನು ಒಂದೆರಡು ದಿನವಿದ್ದು ಮರಳಿದನು. ಅವನ ಬೆನ್ನಿಗೇ ಎಂಬಷ್ಟು ಸರಿಯಾಗಿ ಮಳೆಗಾಳಿ ಬೀಸಿತು.

ಇಷ್ಟು ವರ್ಷಕ್ಕಿಂತಲೂ ಮುಂಚಿತವಾಗಿ ಮಳೆಗಾಲ ತೊಡಗಿತು. ಊರಿನ ಕೆರೆಗದ್ದೆಗಳು ಗೊಂಕುರು ಕಪ್ಪೆಗಳ ವಾದ್ಯದಿಂದ ತುಂಬಿದುವು. ಕಡಲಿನ ಆರ್ಭಟೆ ತೀರ ಬಲವಾಯಿತು. 'ಅರಾಲನ್ನು ಒಂದೇ ಅಬ್ಬರಕ್ಕೆ ನುಂಗುತ್ತೇನೆಂದು ವರುಣ ದೇವರ ಇಚ್ಛೆಯೋ ಏನೋ!' ಎಂದಳು ಸರಸೋತಿ. ಮಳೆಯ ತಾಳಕ್ಕೆ ನಟ್ಟಿಯ ಕುಣಿತ ನಡೆಯಿತು. ನಾಗವೇಣಿ ಮತ್ತು ಸತ್ಯಭಾಮೆಯರು, ಸೂರನ ಮಕ್ಕಳು, ಮೊಮ್ಮಕ್ಕಳೊಡನೆ, ನೆಟ್ಟಿಗೆ ನೆರವಾಗಿ ಬಂದರು. ಅವರ

ಮೂರು ಮುಡಿ ಗದ್ದೆಯು ಮೂರೇ ದಿನಗಳಲ್ಲಿ ಹಸುರಾಯಿತು. ನಾಗವೇಣಿಯ ಮನಸ್ಸಿಗೆ ಬಾರದ ಒಂದೇ ಒಂದು ಸಂಗತಿಯೆಂದರೆ, ಅವಳ ಮನೆಯ ಕಡೆಗೆ ಸೂರನ ಮನೆಯವರು ಕೊಚ್ಚಿಗೂ ಬಾರದಿದ್ದುದು. ಕಳೆದ ತಿಂಗಳು ಹುಡಿ – ಹೂಟೆ ಮಾಡಿದುದರ ಕೂಲಿ ಸಂದಿರಲಿಲ್ಲ; ಈಗಲೂ ಸಲ್ಲಲಿಲ್ಲ. ಒಟ್ಟು ಸೇರಿ ಕೊಚ್ಚೇ ತುಂಬಾ ಆಗುತ್ತದೆ. ಆ ಎರಡು ಕಳಸೆ ಅಕ್ಕಿಗಾಗಿ ಸೂರನ ಋಣ ತಮ್ಮ ಮೇಲಿರುವುದೇ? – ಎಂದು ನಾಗವೇಣಿಯು ಮೂರಾವೃತ್ತಿ ಅವನಿಗೆ ಹೇಳಿ ಕಳುಹಿಸಿದಳು. ಸೂರನು ತನ್ನ ಮಕ್ಕಳಿಗೆ ಅಪ್ಪಣೆ ಮಾಡಿದ್ದನು: 'ಮಕ್ಕಳೇ, ಹಿಂದೆ ಆ ಅಮ್ಮ ಉಪ್ಪಿನಕಾಯಿ, ಮತ್ತೊಂದು, ಮಗದೊಂದನ್ನು ಕೊಟ್ಟು ನಮ್ಮನ್ನು ಸಾಕಿದವರು; ಐತಾಳರು ಇರುವಾಗ, ಗೇಣಿ ಅಕ್ಕಿ ಆಗಲಿಲ್ಲ ಎಂದು ವರ್ಷ, ಊರವರು ಅವರನ್ನು ಕಸಿವಿಸಿ ಜನ ಅಂದರೂ ನನ್ನ ಮೆಟ್ಟಿಗೆ – 'ಹೋಗಲಿ ಸೂರ, ದೇವರು ನಡೆಯಿಸಿದರೆ ಬರುವ ವರ್ಷ ಕೊಡು' ಅನ್ನುತ್ತಿದ್ದರು. ಅಂಥವರ ಮನೆಗೇ ಬಡತನ ಬಂದಾಗ, ಅವರು ಕೊಚ್ಚು ಕೊಟ್ಟರೂ, ಈ ವರ್ಷ ಬೇಡ ನಮಗೆ ಅವರ ಕೊಚ್ಚು' ಎಂದಿದ್ದ. ಹೀಗಾಗಿ, ಸತ್ಯಭಾಮೆಯು ಹೇಳಿಕಳುಹಿಸಿದ್ದು ವ್ಯರ್ಥವಾಯಿತು. ನಾಗವೇಣಿಯೊಮ್ಮೆ ಅವರ ಮನೆಗೆ ಹೋಗಿ 'ಸೂರ, ಅಕ್ಕಿಯನ್ನು ಮಳೆತಂಡಿಗೆ ಹುಳುವಾದ ಮೇಲೆ ತೆಗೆದುಕೊಂಡು ಹೋಗುವುದೇ?' ಎಂದು ಕೇಳಿದಳು. 'ಅಮ್ಮ, ಅಕ್ಕಿ ಈಗ ಉಂಟು ಮನೆಯಲ್ಲಿ, ನಮ್ಮದಾಗಿ ಇರಲಿ ನಮ್ಮಲ್ಲಿ' ಎಂದನು ಸೂರ. ಆ ಮಾತಿನ ಅರ್ಥ ನಾಗವೇಣಿಗೆ ಆಗಲಿಲ್ಲ. 'ನಾಳೆ ಕಳೆ ಕಿತ್ತ ಮೇಲೆ ಕೊಚ್ಚಿಗೆ ಬಂದಾನು' ಎಂದನು ಆಕೆ ತಿಳಿದಳು.

ನಟ್ಟಿ ಸಮಯ ಮುಗಿಯಿತು. ನಾಗವೇಣಿಯು ದಿನದ ಕೆಲಸಗಳಲ್ಲಿ ನಿರತಳಾದಳು. ಬಿಡುವಿದ್ದಾಗ, ಗದ್ದೆಗಳಿಗೆ ಹೋಗಿ ಕಳೆಯನ್ನು ಕೀಳುವಳು. ಏನಿಲ್ಲವಾದರೆ, ದನಕರುಗಳನ್ನು ಅಟ್ಟಿಕೊಂಡು ಬೆಟ್ಟಿಗೆ ಮೇಯಿಸಲು ಹೋಗುವಳು. ಮಳೆ ಹೊಳವಾದಾಗ ರಾಮನನ್ನು ಜತೆಗೆ ಒಯ್ಯುವಳು. ರಾಮನ ಮೈಯಲ್ಲಿ ಅಷ್ಟು ಕಸುವಿದ್ದಂತೆ ಕಾಣಿಸುತ್ತಿಲ್ಲವಾದರೂ ತೊದಲು ಮಾತನಾಡುವುದಕ್ಕೂ ಓಡಾಡುವುದಕ್ಕೂ ಕಲಿತಿದ್ದನು. ಅವನ ಮುದ್ದು ನುಡಿಗಳು ಹಿರಿಯರನ್ನು ಸಂತೋಷಗೊಳಿಸುತ್ತಿದ್ದವು. ತಾಯಿಗೆ ಆತನನ್ನು ಬಿಡುವಾದಾಗ ಜತೆಯಲ್ಲಿ ಒಯ್ಯಲು ಉತ್ಸಾಹವೇ. ತುಂಬ ಹೊಳವಾದ ದಿನಗಳಲ್ಲಿ, ಬಿಸಿಲು ಇಳಿದುದನ್ನು ಕಂಡು ಅವಳು ಅವನನ್ನು ಎತ್ತಿಕೊಂಡು ಹೋಗುವಳು. ಹೊರಗೆ ಅರಾಲನ್ನು ಏರಿದೊಡನೆಯೇ, 'ಅಮ್ಮ, ಆದೇನು ಹೊಳೆಯುವುದು?' ಎಂದು ರಾಮ ಕಡಲಿಗೆ ಕೈಮಾಡಿ ತೋರಿಸುತ್ತಾನೆ. 'ಕಡಲು' ಎಂದರೆ, 'ಕಡಲು ಅಂದರೆ ಎಂಥದು?' ಎಂದು ಪ್ರಶ್ನೆ ಬರುವುದು. 'ದೊಡ್ಡ ಕೆರೆ' ಎಂದು ತಾಯಿ ನಕ್ಕು ಹೇಳುವಳು. ಅದರಲ್ಲಿ ಕೋಳೆ ಹೂವಿದೆಯೇ, ನೋಡುವ?' ಎನ್ನುವನು. ಅಲ್ಲಿಗೆ ಒಯ್ದು, ಕಡಲನ್ನು ತೋರಿಸುವ ತನಕವೂ ಅವನು ಹಟ ಬಿಡಲಾರನು. ನಾಗವೇಣಿಗೆ, ಮಗುವನ್ನು ನೀರಿನ ಅಂಚಿಗೆ ಬಿಡಲು ಹೆದರಿಕೆ. ಮಗುವಿಗೆ ಮಾತ್ರ ಕಡಲಿಂದ ಉರುಳಿ ಬಂದು, ಎದುರಿನ ಮರಳಿನ ದಂಡೆಯನ್ನು ಮುದ್ದಿಸಲು ಆತುರವಾಗಿ ಬರುವ ತೆರೆಗಳನ್ನು ನೋಡಲು, ಮುಟ್ಟಲು ಆತುರ. ಅದನ್ನು ಕಂಡರೆ, ಆ ನೊರೆ ನಗುವುದಕ್ಕೂ

ಮಿಗಿಲಾದ ನಗುವು ಅದಕ್ಕೆ. 'ಮಗು ಹೋಗುವ ಮನೆಗೆ' ಎಂದರೆ, 'ಬೇಡ, ಇಲ್ಲೇ ಆಡುವ' ಎಂದು ಹಟ ಮಾಡುವನು. ಹೀಗೆ ನಾಲ್ಕು ದಿನಗಳಿಗೆ ಒಮ್ಮೆಯಾದರೂ ಅವನನ್ನು ಕಡಲಿನ ಬಳಿಗೆ ಕರೆದೊಯ್ಯಬೇಕು. ಮಗು ರಾತ್ರಿ ಮಲಗಿಕೊಂಡರೆ ಕಡಲಿನ ಹೆಚ್ಚಿನ ಮೊರೆತವನ್ನು ಕೇಳಿ, 'ಅಮ್ಮ, ಯಾರದು ಕೂಗುವದು?' ಎನ್ನುವನು. 'ಕಡಲು' ಎಂದರೆ, 'ಯಾಕೆ ಕೂಗುತ್ತದೆ? ಅದಕ್ಕೇನು ಬೇಕಂತೆ?' ಎಂದು ಕೇಳುವನು. ಅವನಿಗೆ ತೀರ ಬೇಸರವಾದಾಗ, ದುಃಖ ಬಂದಾಗ, 'ರಾಮಣ್ಣ, ಕಡಲು ನೋಡುವ ಬಾ ಎಂದರೆ ಆಯಿತು. ಅದೊಂದು ದೂರ ಯಾತ್ರೆಯಲ್ಲ. ಮನೆ ಬಿಟ್ಟು ನೂರು ಗಜ ನಡೆದರೆ, ಸ್ವಲ್ಪ ಮಳೆ ಬಿಟ್ಟರೆ ಆಯಿತಷ್ಟೆ.

ರಾಮನಿಗೆ ತಿಂಡಿತೀನಿಗಳಿಗೆ ಕೊರತೆ ಬರಲಿಲ್ಲ. ಅಜ್ಜಿ ಮಂದರ್ತಿಯಿಂದ ತಂದ ಹಪ್ಪಳ, ಸಂಡಿಗೆಗಳಿವೆ. ಒಂದು ಹಪ್ಪಳ ಸುಟ್ಟುಕೊಟ್ಟರೆ ಅವನು ತೃಪ್ತ. ಉಳಿದ ಸಮಯ ಅವನು ಅಜ್ಜಿಯನ್ನೋ, ಸರಸೋತಿಯನ್ನೋ ಮಾತನಾಡಿಸುತ್ತಿರುತ್ತಾನೆ.

ಈಗ ಮಳೆಗಾಲ ಮುಗಿಯಿತು. ಮಹಾಲಯ ಅಮವಾಸ್ಯೆಯೂ ಬಂದಿತು. ಊರವರು ಕಡಲಿನ ಸ್ನಾನ ಮಾಡುವ ದಿನ. ಪಿತೃಗಳಿಗೆ ಪಿಂಡ ಸಲ್ಲಿಸುವ ದಿನ. ಸರಸೋತಿಗೆ ತಾನು ಕಡಲಿನ ಸ್ನಾನ ಮಾಡಬೇಕೆಂಬ ಆಸೆಯಾಯಿತು. ಅವಳು ಕಾಶಿಯಿಂದ ಬಂದಂದಿನಿಂದ ಕಡಲಿನ ಸ್ನಾನಕ್ಕೆ ಹೋಗಿರಲಿಲ್ಲ. ಅವಳು, ನಡೆಯುವುದೂ, ಆ ನೀರಿನಲ್ಲಿ ಮುಳುಗುವುದೂ ಆಗಲಿಕ್ಕಿಲ್ಲವೆಂದು ಸುಮ್ಮನಿದ್ದಳು. ಆದರೆ ಈಗ ಒಮ್ಮೆಗೇ 'ಇನ್ನು ಎಷ್ಟು ದಿನ ನನಗೆ? ನಾಗೂ, ಒಮ್ಮೆ ಮಿಂದು ಬಂದರೆ ಆಗುತ್ತಿತ್ತು' ಎಂದು ಅಂದಳು. 'ಅಲ್ಲಿಗೆ ನಿಮ್ಮಿಂದ ನಡೆಯಲು ಆದೀತೇ?' ಎಂದಳು ನಾಗವೇಣಿ. 'ಹೂಂ, ನಡೆಯದೆ ಏನು? ಕಣ್ಣು ಕಾಣುವುದಿಲ್ಲ. ಕೈ ಹಿಡಿದುಕೊಂಡು ಹೋಗಿ, ನೀರಲ್ಲಿ ಮುಳುಗಿಸಿ ಬಿಡಿ. ಬದಿಯಲ್ಲಿ ನಿಂತು ಉಪ್ಪು ನೀರಲ್ಲಿ ಮುಳುಕು ಹಾಕುತ್ತೇನೆ. ಪಿತೃಪಕ್ಷದ ಅಮವಾಸೆ. ಮಿಂದರೆ ಆಗಬಹುದು ಎಂದು ಮನಸ್ಸು ಹೇಳುತ್ತದೆ. ಇನ್ನೇನು, ನನಗೆ ಬೇರೆ ದೇವಸ್ಥಾನವೋ? ತೀರ್ಥವೋ? ಇವತ್ತು ಅಷ್ಟು ಮಾಡಿಸಿಬಿಡು' ಎಂದಳು.

ಆ ದಿನ ಬೆಳಿಗ್ಗೆ ಮನೆಯಲ್ಲಿ ಅವಳು ಮೊದಲಿಗೊಮ್ಮೆ ಮಿಂದಳು. ಮನೆಯ ದೇವರ ಬಳಿಗೆ, ಯಾರ ಸಹಾಯವೂ ಇಲ್ಲದೆ ಹೋಗಿ, ವಂದಿಸಿ ಬಂದಳು. 'ಸತ್ಯ, ಯಾರು ಕರೆದುಕೊಂಡು ಹೋಗುತ್ತೀರಿ? ನೀನೋ, ನಾಗವೇಣಿಯೋ...? ನೀನೇ ಆದೀತು. ಅಲ್ಲಲ್ಲಿ ನಿಂತು ಹೋಗುವ... ಒಂದೇ ಸಾರಿ ನಡೆಯಲಿಕ್ಕೆ ಕಾಲು ಬಾರದು. ಮುಳುಗುವಾಗ, ನಮ್ಮ ಉಪಾಧ್ಯಾಯರ ಹೆಂಡತಿ ನನ್ನ ಕೈ ಹಿಡಿಯಲು ಬಂದಾಳು. ಅವಳೂ, ನೀನೂ ಹಿಡಿದುಕೊಂಡು ಮುಳುಗು ಹಾಕಿಸಿಬಿಡಿ. ನಾಗವೇಣಿಯು ರಾಮನನ್ನು ನೋಡಿಕೊಂಡು ಮನೆಯಲ್ಲಿರಲಿ' ಎಂದಳು.

ರಾಮ ಮನೆಯಲ್ಲಿರಲು ಕೇಳುವವನೇ? ಸಮುದ್ರಕ್ಕೆ ತಾನೂ ಬರುವೆನೆಂದ. ತಾಯಿಯು 'ಮಗು, ನೀನು ಇಲ್ಲೇ ಇರು. ನನ್ನೊಟ್ಟಿಗೆ ಇರು. ನನಗೆ ಹೆದರಿಕೆಯಾಗುವುದಿಲ್ಲವೇ?' ಎಂದು

ಚೇಷ್ಟೆ ಮಾಡಿದರೆ, 'ಅಜ್ಜಿಗೆ ಹೆದರಿಕೆ ಆಗುತ್ತದೆ, ನಾನು ಹೋಗಬೇಕು' ಎಂದನು. ಅವನ ಹಟಕ್ಕೆ ನಾಗವೇಣಿಯು ಅವನನ್ನು ಕರೆದುಕೊಂಡು ಹೊರಟಳು. ಮನೆಯವರೆಲ್ಲರೂ ಒಂದುಗೂಡಿ ಹೊರಟರು. ರಾಮನು ಅಜ್ಜಿಯ ಕೈಹಿಡಿದು, 'ಅಜ್ಜಿ, ಬಾ, ನಾನು ಕರೆದುಕೊಂಡು ಹೋಗುತ್ತೇನೆ' ಎಂದನು. ಎಲ್ಲರೂ ನಕ್ಕರು. ಸರಸೋತಿಯು, ಮೆಲ್ಲಗೆ ಹೆಜ್ಜೆಯಿಟ್ಟು ಒಂದು ಕೈಯಲ್ಲಿ ಸತ್ಯಭಾವನೆಯನ್ನು ಹಿಡಿದುಕೊಂಡು, ಆಧರಿಸಿ, ಕಡಲ ದಂಡೆಗೆ ಹೋದಳು. ಹೋಗುತ್ತ ಸತ್ಯಭಾಮೆಯೊಡನೆ 'ಎಲ್ಲ ನೆನಪಾಗುತ್ತದೆ ಸತ್ಯ, ಪಾರೋತಿಯಿರುವಷ್ಟು ದಿನ. ನಾನು ಯಾವ ಅಮಾವಾಸೆಯ ಸ್ನಾನವನ್ನೂ ಬಿಟ್ಟವಳಲ್ಲ... ಸತ್ಯ, ಅವಳು ಹೋದುದು ಅಮವಾಸೆಗೇ ಅಲ್ಲವೇ?' ಎಂದಳು. ಪಾರೋತಿಯ ನೆನವರಿಕೆಯಿಂದ ಅವಳಿಗೆ ಕಣ್ಣೀರೂ ಬಂದಿತು. ಎಲ್ಲರೂ ಕಡಲ ದಂಡೆಯನ್ನು ಸೇರಿದರು. ಆ ಮರಳಿನ ದಂಡೆಯ ಮೇಲೆ ನೂರಾರು ಜನರು ನೆರೆದಿದ್ದರು. ಕೆಲವರ ಸ್ನಾನ ಕಳೆದಿತ್ತು. ಕೆಲವರು ಸ್ನಾನ ಮಾಡುತ್ತಿದ್ದರು. ಕೆಲವರು ತಿಲ-ತರ್ಪಣಗಳನ್ನು ಕೊಡುವುದರಲ್ಲಿ ತಲ್ಲೀನರು. ರಾಮನು ಅತ್ತಿತ್ತ ನೋಡಿದನು. 'ಅಮ್ಮಾ, ನಾನೂ ಹಾಗೇ ಮಾಡುತ್ತೇನೆ' ಎಂದನು. ಅಲ್ಲೇ ಕುಳಿತು ಮಣ್ಣಿನ ಉಂಡೆಗಳನ್ನು ಮಾಡಿ 'ಓಂ-ವಾ, ಓಂ-ವಾ' ಎಂದು ಹಿರಿಯರಿಗೆ ಪಿಂಡ ಸಲ್ಲಿಸುವ ಸುತ್ತಲಿನ ಜನರಂತೆ ಮಂತ್ರ ಹೇಳಿದನು. ಅವನ ಮಂತ್ರ ಕೇಳಿ ಅಜ್ಜಿ ನಕ್ಕಳು. 'ಸತ್ಯ, ಅಣ್ಣನ ಯೋಗ ಈ ಮಾಣಿಯಲ್ಲಿ ಪೂರ್ಣವಾಯಿತು. ನೋಡು, ಅವನಿದ್ದಿದ್ದರೆ ಇಲ್ಲಿ ಈ ಸಮಯಕ್ಕೆ ಮಂತ್ರ ಹೇಳುತ್ತಿದ್ದ' ಎಂದಳು.

ಮುಂದೆ ಸ್ನಾನದ ತಯಾರಿ ನಡೆಯಿತು. ರಾಮನು ತಾನೂ ಮೀಯುವೆನೆಂದು ಹಟ ಹಿಡಿದನು. ಕೊನೆಗೆ ಸತ್ಯಭಾಮೆ, ನಾಗವೇಣಿಯರು ಅವನ ಕೈಯನ್ನು ಹಿಡಿದು ನೀರಲ್ಲಿ ಮುಣುಗಿಸಿದರು. ಮಗುವಿನ ಕಣ್ಣಿಗೆ ಉಪ್ಪುನೀರು ಬಿದ್ದು ಉರಿದರೂ, ಅಲೆಯ ಬಡಿತಕ್ಕೆ ಮಗು ನಕ್ಕು 'ಮೀಯಲು ಲಾಯಕ್ಕಾಗುತ್ತದೆ. ಇನ್ನೂ ಬೇಕು, ಇನ್ನೂ ಬೇಕು, ತುಂಬ ಸ್ನಾನ ಮಾಡಬೇಕು ನನಗೆ' ಎಂದು ಬೇಡಿದನು. ರಾಮನ ಸ್ನಾನವೇನೋ ಬಿಮ್ಮನಾಯಿತು. ಬಿಸಿಲೇರಿದರೆ ಮನೆಗೆ ಹೋಗುವಾಗ, ದೊಡ್ಡತ್ತೆಗೆ ತ್ರಾಸವಾಗಬಾರದೆಂದು, ಸುಬ್ರಾಯ ಉಪಾಧ್ಯಾಯರ ಹೆಂಡತಿಯನ್ನು ಹುಡುಕಿದಳು. ಅವಳು ತನ್ನ ಒಬ್ಬ ಹಳೆಯ ಗೆಳತಿಯೊಡನೆ ಮಾತನಾಡುತ್ತಿದ್ದಳು. ನಾಗವೇಣಿಯು ರಾಮನ ಕೈಹಿಡಿದು ನಿಂತರೆ, ಸತ್ಯಭಾಮೆಯೂ ಆಕೆಯೂ ಸರಸೋತಿಯನ್ನು ಹಿಡಿದು, ಕಡಲಿನ ಉರುಳುವ ತೆರೆಗಳ ಎದುರಿಗೆ ಹಿಡಿದು ಉಪ್ಪು ನೀರಲ್ಲಿ ಸ್ನಾನ ಮಾಡಿಸಿದರು. ಬಳಿಕ ಆಕೆಯು ನಾಗವೇಣಿಯಿಂದ ಮೂರು ಕಾಸನ್ನು ಇಸುಕೊಂಡು, ಅಲ್ಲಿದ್ದ ಒಬ್ಬ ವೈದಿಕನಿಗೆ ದಾನವಿತ್ತಳು. ಅವಳ ಹಾದಿಯನ್ನು ಸತ್ಯಭಾಮೆಯೂ ಅನುಸರಿಸಿದಳು.

'ಇನ್ನು ಹೊರಡುವ' ಎಂದಳು ಸರಸೋತಿ. ಮೂಡು ಮುಖವಾಗಿ ಮನೆಗೆ ಎಲ್ಲರೂ ಮರಳಿದರು. ಸರಸೋತಿಗೆ ಮರಳುವಾಗ, ಮೊದಲಿನ ಆಯಾಸವೆಲ್ಲ ಕೂಡಿಬಂದಂತೆ ಕಂಡಿತು. ಆದರೂ ಅಲ್ಲಲ್ಲಿ ನಿಂತು, ತನ್ನನ್ನು ಮನೆಯ ತನಕ ಕಳುಹಲು ಬಂದ

ಉಪಾಧ್ಯಾಯರ ಹೆಂಡತಿಯೊಡನೆ ಮಾತನಾಡುತ್ತ ಮನೆಗೆ ಬಂದಳು. ಮನೆಯಂಗಳವನ್ನು ಸೇರುವಾಗ 'ಏನೂ ಕೂಡದು ಮಗು, ಒಂದಿಷ್ಟು ಅಮೃತಪಾನಕ ಮಾಡಿಕೊಡು' ಎಂದಳು. ನಾಗವೇಣಿಯು ಅವಳನ್ನು ಚಾವಡಿಯಲ್ಲಿ ಕುಳ್ಳಿರಿಸಿ, ಪಾನಕ ಮಾಡಿ ತರಲು ಹೋದಳು. ರಾಮನು, 'ನಾನು ಪಾನಕ ಕುಡಿಸುತ್ತೇನೆ' ಎಂದನು. 'ಆಯಿತು ಮಗು' ಎಂದಳು ಆಕೆ. ಮುಂದೆ ಅವಳಿಗೆ ತುಂಬ ಜೀವ ಸಂಕಟವಾದಂತಾಯಿತು. ಅಲ್ಲೇ ಮಲಗಳಿದಳು. ಪಾನಕ ಬರಲು, ರಾಮನ ಹಟದಂತೆ ಅವನ ಕೈಯಿಂದಲೇ ತುಸು ಕುಡಿದಳು. ಕುಡಿದು ಚೇತನವಾಯಿತು. 'ಮಗು, ನೀನು ಒಳ್ಳೆಯದಾಗಿರು. ಅಮ್ಮನಿಗೆ, ನಿನ್ನ ಕುಲಕ್ಕೆ ಒಳ್ಳೆಯ ಹೆಸರು ತಾ' ಎಂದು ನಗುತ್ತ ಅವನನ್ನು ಹರಸಿದಳು. ಬಳಿಕ 'ಯಾಕೋ ನಾನು ಕಾಶಿಯಿಂದ ತಂದ ಭಾಗೀರಥಿ ನೀರನ್ನು ಒಂದು ಸೌಟು ಕುಡಿಸಿದರೆ ಆಗುತ್ತಿತ್ತು, ಎಂದು ಕಾಣುತ್ತದೆ' ಎಂದಳು. ಸತ್ಯಭಾಮೆ ಒಂದು ಪುಟ್ಟ ಮಿಳ್ಳೆಯನ್ನು ತಂದು ಅದರ ಬಾಯಿಗೆ ಮೆತ್ತಿದ ಮಯಣವನ್ನು ತೆಗೆದು ಅದರ ಒಳಗಿನ ತೀರ್ಥವನ್ನು ತೆಗೆದು 'ಬಾಯಿಗೆ ಹಾಕಲೇ' ಎಂದು ಕೇಳಿದಳು.

ರಾಮನು 'ಅಜ್ಜಿ, ನಾನು ತೀರ್ಥ ಬಾಯಿಗೆ ಹಾಕುತ್ತೇನೆ' ಎಂದನು. 'ನೀನೇ ಹಾಕಬೇಕು ಮಗೂ' ಎಂದಳು ಅವಳು.

ದೊಡ್ಡತ್ತೆಗೆ ಪಾನಕ ಮಾಡಿಕೊಟ್ಟ ನಾಗವೇಣಿಗೆ ಆಗಲೇ ಕಳವಳವಾಯಿತು. ಅವಳು ಗಾಬರಿಕೊಂಡು ಸೂರನ ಮನೆಗೆ ಓಡಿಹೋಗಿ ಚಿಕ್ಕಪ್ಪನಿಗೆ ಜನ ಕಳುಹಿಸಿದಳು. ಅವಳು ಮರುಳುವಾಗ ರಾಮನು ಅಜ್ಜಿಯ ಬಾಯಿಗೆ ತೀರ್ಥ ಕುಡಿಸುತ್ತಿದ್ದನು. ಉಪಾಧ್ಯಾಯರ ಹೆಂಡತಿಯೂ, ಸರಸೋತಿಯ ಮುಖವನ್ನು ಕಂಡು ಭೀತಳಾಗಿ, 'ಯಾರಾದರೂ ಗಂಡಸರು ಇದ್ದಿದ್ದರೆ ಆಗುತ್ತಿತ್ತು. ಸರಸೋತಿಗೆ ಬಹಳ ಸಂಕಟವಾಗುವ ಹಾಗಿದೆಯಲ್ಲ!' ಎಂದಳು. ಸರಸೋತಿಯ ಕಿವಿಗೂ ಆ ಮಾತು ಕೇಳಿಸಿತು. 'ನನ್ನ ರಾಮ ಗಂಡುಸಲ್ಲವೇ...' ಎಂದಳು ಆ ಮುದುಕಿ ಮೆಲುನಗೆ ನಗುತ್ತ.

ಅದೇ ಅವಳ ಕೊನೆಯ ಮಾತಾಯಿತು. ಆಕೆ ಸಂಕಟದಿಂದ, ಆಯಾಸದಿಂದ ಮಲಗಿದಳು. ಅಲ್ಲೇ ಒಂದೆರಡು ಕ್ಷಣಗಳಲ್ಲಿ ಕಲ್ಲಾದಳು. ನಾಗವೇಣಿಯು ಅಳುತ್ತ, 'ಆಗಲೇ ನನಗೆ ಅನಿಸಿತ್ತು. ಪಾರೋತಿಯು ಅಮಾವಾಸ್ಯೆಗೆ ಸತ್ತುದಲ್ಲವೇ' ಎಂದು ಅವರೆಂದಾಗ 'ಏನೋ–ಅವರು ದೊಡ್ಡತ್ತೆಯನ್ನು ಕರೆಯಿಸಿಕೊಂಡರೆಂದು ಕಾಣುತ್ತದೆ' ಎಂದಳು.

ರಾಮ ಅಜ್ಜಿಯ ಬಳಿಗೆ ಹೋಗಿ ಅವಳ ಮೈಯನ್ನು ಅಲುಗಿಸಿ, ತಿರುಗಿ ತಿರುಗಿ ಅಲ್ಲಾಡಿಸಿ ಮಾತನಾಡಿಸಿದನು. ನಾಗವೇಣಿಯು ಅದನ್ನು ಕಾಣುವುದಕ್ಕಾಗದೆ, ಅವನನ್ನು ಎತ್ತಿಕೊಂಡು ಈಚೆಗೆ ಬಂದಳು. ಸತ್ಯಭಾಮೆ ಮನೆಗೆ ಬಂದ ನಾರಾಯಣಯ್ಯನೊಡನೆ 'ಅವರು ಇಚ್ಛಾಮರಣಿಗಳು. ಕರೆದ ಗಳಿಗೆಗೆ ಅವರಿಗೆ ಸಾವು ಬಂದಿತು. ನಮ್ಮಂತಹ ಪಾಪಿಗಳ ಹಾಗೇನು' ಎಂದಳು.

## ೪. ಸಂಕೀರ್ಣ

**ಆಶಯ :**

## ಎ.ಪಿ.ಜೆ ಅಬ್ದುಲ್ ಕಲಾಂ

– ಒಬ್ಬರನ್ನು ಸೋಲಿಸುವುದು ಬಹಳ ಸುಲಭ. ಆದರೆ ಒಬ್ಬರನ್ನು ಗೆಲ್ಲುವುದು ಬಹಳ ಕಷ್ಟ. ಅವರೇ ಹೇಳಿದ ಮಾತುಗಳು.

ತಮಿಳುನಾಡಿನ ರಾಮೇಶ್ವರದಲ್ಲಿ ಹುಟ್ಟಿ ಬೆಳೆದ ಇವರು ಭೌತಶಾಸ್ತ್ರ ಅಂತರಿಕ್ಷಯಾನದ ಇಂಜಿನಿಯರಿಂಗ್ ಅಧ್ಯಯನ ಮಾಡಿದ್ದರು. ಅಧ್ಯಯನ ನಂತರ ನಾಲ್ಕು ದಶಕಗಳ ಕಾಲ ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ(ಡಿ.ಆರ್.ಡಿ.ಓ) ಮತ್ತು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ(ಇಸ್ರೋ)ದಲ್ಲಿ ವಿಜ್ಞಾನಿ ಮತ್ತು ವಿಜ್ಞಾನ ವ್ಯವಸ್ಥಾಪಕರಾಗಿ ಕಾರ್ಯ ನಿರ್ವಹಿಸಿದರು. ಭಾರತದ ನಾಗರಿಕ ಬಾಹ್ಯಾಕಾಶ ಕಾರ್ಯಕ್ರಮ ಮತ್ತು ಕ್ಷಿಪಣಿ ಅಭಿವೃದ್ಧಿ ಪ್ರಯತ್ನಗಳಲ್ಲಿ  ತಮ್ಮನ್ನು ತೊಡಗಿಸಿಕೊಂಡಿದ್ದರು. ಕ್ಷಿಪಣಿ ಮತ್ತು ಉಡವಣಾ ತಂತ್ರಜ್ಞಾನದ ಅಭಿವೃದ್ಧಿ ಆಧ್ಯಯನದಿಂದ, ಇವರು ಭಾರತದ ಕ್ಷಿಪಣಿ ಮಾನವ ಎಂಬ ಹೆಸರಿನಿಂದ ಚಿರಪರಿಚಿತರಾಗಿದ್ದರು. 1998ರಲ್ಲಿ ನಡೆದ ಭಾರತದ ಪೋಕ್ರಾನ್–2 ಪರಮಾಣು ಪರೀಕ್ಷೆಯಲ್ಲಿ ಸಾಂಸ್ಥಿಕವಾಗಿ, ತಾಂತ್ರಿಕವಾಗಿ ಮತ್ತು ರಾಜಕೀಯವಾಗಿ ಒಂದು ಪ್ರಮುಖ ಪಾತ್ರ ವಹಿಸಿದರು.

2002ರಲ್ಲಿ ಆಡಳಿತ ಪಕ್ಷ ಭಾರತೀಯ ಜನತಾ ಪಕ್ಷ ಮತ್ತು ವಿರೋಧ ಪಕ್ಷ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್, ಎರಡು ಪಕ್ಷಗಳ ಬೆಂಬಲದೊಂದಿಗೆ ರಾಷ್ಟ್ರಪತಿಯಾಗಿ ಆಯ್ಕೆಯಾದರು. ಐದು ವರುಷಗಳ ಆವಧಿ ಪೂರೈಸಿದ ನಂತರ, ಅವರು ಶಿಕ್ಷಣ, ಬರವಣಿಗೆ ಮತ್ತು ಸಾರ್ವಜನಿಕ ಸೇವೆಯ ಜೀವನಕ್ಕೆ ಮರಳಿದರು. ಅವರು ಭಾರತದ ಅತ್ಯುನ್ನತ ನಾಗರಿಕ ಗೌರವ ಭಾರತ ರತ್ನ ಸೇರಿದಂತೆ ಅನೇಕ ಪ್ರತಿಷ್ಠಿತ ಪ್ರಶಸ್ತಿಗಳಿಗೆ ಭಾಜನರಾಗಿದಗದಾರೆ. ಇವರು ಅವಿವಾಹಿತರಾಗಿದ್ದರು. **ಅಬ್ದುಲ್ ಕಲಾಂ** ಅವರನ್ನ **ಭಾರತದ ಮಿಸೈಲ್ ಮ್ಯಾನ್ ಆಫ್** ಇಂಡಿಯ ಎಂದು ಕರೆಯುತ್ತಾರೆ.

# ಒಂದೇ ಒಂದು ಬಾರಿ ಹೊರಬನ್ನಿ

**– ಲಲಿತ ನಾಯಕ ಬಿ. ಟಿ.**

ನೀವಾಗಿ
ತೊಡಿಕೊಂಡ ಹೊಂಡದೊಗರುಗಳ
ಮುಚ್ಚಿ
ಕಟ್ಟಿಕೊಂಡಿರುವ ಗೋಡೆ – ಗೋಪುರಗಳ
ಕೆಡವಿ
ಒಂದೇ ಒಂದು ಬಾರಿ ಹೊರ
ಬರುವಿರಾದರೆ
ಮಠ ಮುಂದಿನ ಚರ್ಚು ಮಸೀದಿಯ
ಬಾಗಿಲುಗಳು ನಮ್ಮ ನಿಮ್ಮ ಒಲೆಗೆ
ಸೌದೆಗಳಾಗುತ್ತವೆ.
ನಿಮ್ಮ
ಹಳೆ ಹೊಸ ತಲೆಗಳಲ್ಲಿ ಕಟ್ಟಿರುವ
ಭಾರಿ ಜೇಡನಿಗೆ ಹೊಡೆತ ಕೊಟ್ಟೊಮ್ಮೆ
ಝಾಡಿಸಿದಿರಾದರೆ
ಅಗ್ರಹಾರ ಹೊಲೆಗೇರಿಗಳು
ಒಂದಾಗಿ ಅಪ್ಪಿಕೊಳ್ಳುತ್ತವೆ
ಆಗ ಬೆಳಕು ನೀರು ಭೂಮಿ ಆಕಾಶಗಳ
ಏಕಭಾವ ಏಕರೂಪ
ನಿಮ್ಮ ಆದರ್ಶಗಳಾಗುತ್ತವೆ
'ಮುಕ್ಕೋಟಿಮೂರು' ಸ್ವಕಪೋಲಕಲ್ಪಿತ
ಜಾಲದಿಂದ ವಾಸ್ತವಕ್ಕಿಳಿದಿರಾದರೆ
ನಿಮ್ಮಂತೆ ಕೆಂಪು ರಕ್ತ ಹರಿವ
ಈ ನೆಲದ ಕುಲಜರನ್ನು
ನೀವು ಗುರುತಿಸುತ್ತೀರಿ – ಒಂದಾಗುತ್ತೀರಿ
ಆಗ
ಕಲ್ಲುಕಟ್ಟಿಗೆಯ ಒಣ ಮೂರ್ತಿಗಳು
ನಮ್ಮ ನಿಮ್ಮ ಮನೆಗಳಿಗೆ ಮರಮುಟ್ಟುಗಳಾಗಿ

ಗರ್ಭೀಕೃತ ಲೋಹ ಪುತ್ಥಳಿಗಳು
ಪುಟ್ಟಮಕ್ಕಳ ಕೈಯ ಆಟಿಕೆಗಳಾಗಿ
ಅವುಗಳ ಬೆಳ್ಳಿ ಬಂಗಾರದ
ಕಣ್ಣು ಮೀಸೆ ಕೋರೆಗಳು
ಊರೂರ ಮ್ಯೂಸಿಯಂಗಳಲ್ಲಿ
ಪ್ರದರ್ಶನಗೊಳ್ಳುತ್ತವೆ.

# ಕೀಟದಿಂದ ಕೋಟಿ ನಾಶ

**– ಶಿವಾನಂದ ಕಳವೆ**

ಕಾಸಸ್‌ಕಡಾಂಬೆ ಎಂಬ ನಸುಗೆಂಪು ಬಣ್ಣದ ಕಾಡು ಕೀಟವೊಂದು ತೇಗದ ನೆಡುತೋಪಿನಲ್ಲಿ ಕೂತು ಎಚ್ಚರಿಕೆಯ ಸೈರನ್ ಬಾರಿಸುತ್ತಿದೆ. ಒಣ ಭಾಷಣ, ಸಭೆ, ಸೆಮಿನಾರ್, ಆಂದೋಲನ, ಕರಪತ್ರ, ಪತ್ರಿಕಾಗೋಷ್ಠಿಗಳ ಮನುಷ್ಯ ದಾರಿ ಬಿಟ್ಟು ಮೊನೋಕಲ್ಚರ್ ವಿರುದ್ಧ ಸೆಣೆಸಾಟಕ್ಕೆ ಕೀಟ ತನ್ನ ಪಾಡಿಗೆ ತಾನೇ ಸಿಡಿದೆದ್ದಿದೆ. ಶಿಸ್ತಿನ ತೋಪನ್ನು ತಿಂದು ಮುಗಿಸುವ ವಿಚಿತ್ರ ಪ್ರತಿಭಟನೆಗೆ ಈಗಾಗಲೆ ಸಾವಿರಾರು ಎಕರೆ ತೋಟ ತತ್ತರಿಸಿದೆ. ಬಕಾಸುರ ಕೀಟಗಳ ದಾಳಿಗೆ ನಲುಗಿ ಉತ್ತರ ಕನ್ನಡದ ತೇಗದ ತೋಟಗಳು ಬಿಕ್ಕಳಿಸುತ್ತಿವೆ.

ಮರಗಳ ತಿರುಳು ತಿನ್ನುವ ಕೀಟಗಳಿಂದಾಗಿ ದಾಂಡೇಲಿಯ ತೇಗದ ಚಿನ್ನದ ಖಜಾನೆಯಲ್ಲಂತೂ ತಲ್ಲಣ ಎದ್ದಿದೆ. ಪಶ್ಚಿಮಘಟ್ಟದ ದಾಂಡೇಲಿ ರಾಮಾಯಣ ಕಾಲದ ದಂಡಕಾರಣ್ಯವಾಗಿತ್ತೆಂಬ ದಂತಕತೆ ಇದೆ. ಅದು ದಂಡಕಾರಣ್ಯವಾಗಿತ್ತೋ ಇಲ್ಲವೋ ದಟ್ಟ ಕಾಡಂತೂ ಆಗಿತ್ತು. ನೈಸರ್ಗಿಕ ಉತ್ಕೃಷ್ಟ ದರ್ಜೆಯ ತೇಗಕ್ಕೆ ಪ್ರಖ್ಯಾತವಾದ ಈ ಕಾಡಿನ ಮೇಲೆ ಬ್ರಿಟೀಷರ ಕಣ್ಣು ಬಿತ್ತು. ರೇಲ್ವೆ ಸ್ಲೀಪರ್, ಹಡಗು ನಿರ್ಮಾಣ ಕಾರ್ಯಗಳಿಗೆ ವಿಪರೀತ ಮರಕಟಾವಾಯಿತು. ನಂತರ ಮರಗಳ ಕೊರತೆಯಾಗಿ ನಿಧಾನಕ್ಕೆ ಬೆಳೆಸುವ ಕಾರ್ಯ ಆರಂಭ. ನೈಸರ್ಗಿಕ ಕಾಡು ಕಡಿದು ಅಲ್ಲಿ ಏಕಜಾತೀಯ ತೇಗದ ತೋಟ ಬೆಳೆಸಲಾಯಿತು. ಸುಮಾರು ಒಂದೂವರೆ ಶತಮಾನಗಳ ಅರಣ್ಯೀಕರಣದ ಪ್ರತಿಫಲವಾಗಿ ಇಂದು ಉತ್ತರ ಕನ್ನಡವೊಂದರಲ್ಲೇ 75,000 ಹೆಕ್ಟೇರ್ ತೇಗವಿದೆ.

ಎಲೆ ಉದುರಿಸುವ, ಅರೆ ನಿತ್ಯಹರಿದ್ವರ್ಣ ನೈಸರ್ಗಿಕ ಕಾನನಗಳಲ್ಲಿ ಎಕರೆಗೆ ಹತ್ತಾರು ಸಾಗವಾನಿ ಮರಗಳಿರುತ್ತಿದ್ದವು. ತೇಗದ ಮರದ ಕಾಂಡ, ತೊಗಟೆ, ತಿರುಳು, ಬೀಜ, ಕಾಯಿ, ಹೂವು ಮುಂತಾಗಿ ಮರದ ವಿವಿಧ ಭಾಗಗಳನ್ನು ಆಹಾರವಾಗಿ ಆಶ್ರಯಿಸಿದ ಕೀಟಗಳೂ ಇದ್ದವು. ಆದರೆ ಇಂತಹ ಹಾನಿಕಾರಕ ಕೀಟಗಳನ್ನು ಕಾಡಿನ ಪಕ್ಷಿ, ಪ್ರಾಣಿಗಳು ನೈಸರ್ಗಿಕ ನಿಯಂತ್ರಣ ಮಾಡುತ್ತಿದ್ದವು. ಇವುಗಳ ಸಂಖ್ಯಾಸ್ಫೋಟವಾಗದಂತೆ ನೆವಾಗುತ್ತಿದ್ದವು. ಹಾಗಾಗಿ ಈ ಅವಲಂಬಿತ ಕೀಟಗಳ ಉಪಟಳ ಮಿತಿ ಮೀರುತ್ತಿರಲಿಲ್ಲ. ಆದರೆ ನೈಸರ್ಗಿಕ ಕಾಡು ನಾಶಮಾಡಿ ಎಲ್ಲೆಂದರಲ್ಲಿ ತೇಗ ಬೆಳೆಸಲಾಯಿತು. ಜೀವಜಾಲದ ನೈಸರ್ಗಿಕ ಕೊಂಡಿ ಧುತ್ತನೆ ಕಳಚಿ ಬಿತ್ತು. ತೇಗದ ಮರ ಬೆಳೆಸುವ ಕನಸು ಕಟ್ಟಿದ ಅರಣ್ಯಾಧಿಕಾರಿಗಳಿಗೆ ಈ ಪುಟ್ಟ ಕೀಟಗಳ ಸಂಗತಿ ಗೊತ್ತಿತ್ತೋ ಇಲ್ಲವೋ ! ಆದರೆ ಕೀಟಗಳಿಗಂತೂ ಒಮ್ಮೆಲೆ ಸಾವಿರಾರು ಮರಗಳನ್ನು ಕಂಡ ಮೇಲೆ ತಮಗಾಗಿ ಇಲ್ಲಿ ವಿಪುಲ ಆಹಾರ ಇರುವುದು ಗೊತ್ತಾಯಿತು. ತಿಂದು ಕೊಬ್ಬಿದವು, ಸಂತಾನ ಬೆಳೆಸಿದವು. ಪರಿಣಾಮ ಕಾಸಸ್ ಕಡಾಂಬೆ ಕೀಟ ಇವತ್ತು

ತೇಗದ ಪಾಲಿನ ಬಕಾಸುರವಾಗಿ ಬೆಳೆದಿದೆ. ಇನ್ನೊಂದು ಅರ್ಥದಲ್ಲಿ ಮೊನೋಕಲ್ಚರ್ ವಿರುದ್ಧ ಭರ್ಜರಿ ಸಮರ ಸಾರಿದೆ.

ಕೀಟಶಾಸ್ತ್ರಜ್ಞ ಡಾ॥ ಪ್ರಸಾದ್‌ಕುಮಾರ್ ತೇಗದ ಕೀಟದ ಬಗೆಗೆ ಒಂದು ಅಧ್ಯಯನ ನಡೆಸಿ ವರದಿ ಸಲ್ಲಿಸಿದ್ದಾರೆ. ಹಳಿಯಾಳ, ಯಲ್ಲಾಪುರ, ಶಿರಸಿ ವಿಭಾಗದಲ್ಲಿನ ತೇಗದ ತೋಟಗಳಲ್ಲಿ ಕಾಂಡಕೊರಕ ಕೀಟಗಳ ಸಮೀಕ್ಷೆ ನಡೆಸಿ ಹಾನಿಯ ಅಂದಾಜು ಮಾಡಿದ್ದಾರೆ. ಅವರ ಪ್ರಕಾರ ಯಲ್ಲಾಪುರದ ತೇಗದ ತೋಟದಲ್ಲಿ ಪ್ರತಿಶತ 80, ಮುಂಡಗೋಡದ ಪ್ರದೇಶಗಳಲ್ಲಿ ಪ್ರತಿಶತ 66 ಮರಗಳು ಕೀಟದಾಳಿಗೆ ತುತ್ತಾಗಿವೆ.

ಕ್ರಿ.ಶ. 1988–89ನೇ ಸಾಲಿನಲ್ಲಿ ಯಲ್ಲಪ್ಪ ರೆಡ್ಡಿ ಕೆನರಾ ವೃತ್ತ ಅರಣ್ಯ ಸಂರಕ್ಷಣಾಧಿಕಾರಿಗಳಾಗಿದ್ದ ಸಂದರ್ಭದಲ್ಲಿ ಕೀಟದ ಬಗೆಗೆ ಪ್ರಾಥಮಿಕ ಸಮೀಕ್ಷೆ ನಡೆದಿತ್ತು. ಧಾರವಾಡ ಕೃಷಿ ವಿಶ್ವದ್ಯಾಲಯದ ಡಾ.ಎಸ್.ಲಿಂಗಪ್ಪ, ಡಾ.ಐ.ಜಿ.ಹಿರೇಮಠ, ಡಾ. ವಿ.ಪಿ.ದೇಶಪಾಂಡೆ ಅಧ್ಯಯನಕ್ಕೆ ಶ್ರಮಿಸಿದ್ದರು. ಹೆಚ್ಚು ಮಳೆ ಬೀಳುವ ಯಲ್ಲಾಪುರ, ದಾಂಡೇಲಿ, ಹಳಿಯಾಳ ಪ್ರದೇಶಗಳಲ್ಲಿ ಶೇಖಡ 11–15 ರಷ್ಟು ಕೀಟಬಾಧೆ ಇದೆ. ಬರ್ಚಿ ಪ್ರದೇಶದಲ್ಲಿ ಪ್ರತಿಶತ 15 ರಷ್ಟು ಮರಗಳು ರೋಗಬಾದಿತವಾಗಿವೆ. ಬೆಂಕಿ ಬರುವ ಪ್ರದೇಶದಲ್ಲಿ ಹಾಗೂ ಮರಗಳಿಗೆ ದನಕರು, ಮನುಷ್ಯರಿಂದ ಹಾನಿಯಾಗುವ ಪ್ರದೇಶದಲ್ಲಿ ಕೀಟ ಪ್ರಮಾಣ ಜಾಸ್ತಿ ಎಂದು ಈ ವಿಜ್ಞಾನಿಗಳು ಅರಣ್ಯ ಇಲಾಖೆಗೆ ಎಚ್ಚರಿಕೆ ನೀಡಿದ್ದರು. ಕಾಸಸ್ ಕಡಾಂಬೆಯ ನಿಯಂತ್ರಣಕ್ಕೆ ಯಾವುದೇ ಸಮರ್ಥ ದಾರಿ ದೊರಕಿಲ್ಲ. ಕೀಟ ನಿಯಂತ್ರಣಕ್ಕಾಗಿ ಔಷಧ ಬಳಕೆಯಂತಹ ಪದ್ಧತಿಗಳು ಅರಣ್ಯ ಪರಿಸರಕ್ಕೆ ಯೋಗ್ಯವಿಲ್ಲ. ಆದರೆ ಫೆರೋಮೋನ್ ತಂತ್ರದ ಮುಖೇನ ಪ್ರೌಢಕೀಟಗಳನ್ನು ಆಕರ್ಷಿಸಿ ನಾಶಪಡಿಸಬಹುದು. ಕಾಂಡ ಕೊರೆದ ಜಾಗದಲ್ಲಿ ಹೊಗೆ ಹಾಕುವ ವಿಧಾನದಿಂದ ಕೀಟವನ್ನು ಸಾಯಿಸಬಹುದು. ಕೋಶಾವಸ್ಥೆಗೆ ಬರುವಾಗ ಇವು ಮಣ್ಣಿನಲ್ಲಿ ಸೇರುವುದರಿಂದ ಆಗ ಸೂಕ್ತ ಪದ್ಧತಿಯನ್ನು ಅನುಸರಿಸಿ ನಿಯಂತ್ರಣ ಮಾಡಬಹುದು. ಈ ಕೀಟ ಹಿಡಿದು ತಿನ್ನುವ ಪಕ್ಷಿಗಳಂತಹ ನೈಸರ್ಗಿಕ ಶತ್ರುಗಳನ್ನು ಬಳಸಬಹುದು. ಇದು ಕರ್ನಾಟಕದ ತೇಗಕ್ಕೆ ಬಂದ ಅತ್ಯಂತ ಹಾನಿಕರಕ ಕೀಟ ಎಂದಿದ್ದರು.

ಅರಣ್ಯ ಇಲಾಖೆಗೆ ಆಗ ಮೊನೋಕಲ್ಚರ್ ಹುಚ್ಚು ಹತ್ತಿತ್ತು. ಆಗ ಈ ಎಚ್ಚರಿಕೆಯ ಮಾತುಗಳು ಯಾವ ಲೆಕ್ಕ ! ? ಇಂದು ಪರಿಸರ ಪರಿಸ್ಥಿತಿ ಬಿಗಡಾಯಿಸಿದೆ. ತೀವ್ರ ಕೀಟಬಾಧೆಯಿಂದ ನರಳುತ್ತಿರುವ ತೇಗದ ಹಸಿರು ಮರಗಳನ್ನು ಕಡಿದು ಸುಡಬೇಕು ಎಂದು ಪ್ರಸಾದಕುಮಾರ್ ಹೇಳುತ್ತಾರೆ. ಹಾಗಾಗಿ ಕಾಂಡದೊಳಗಿನ ಹುಳುಗಳನ್ನು ಕೊಲ್ಲುವುದಕ್ಕೆ ಇಂದು ವೃಕ್ಷ ದಹನದ ಮಹಾಯಜ್ಞ ಮಾಡುವ ಸ್ಥಿತಿಯಿದೆ ! ಹುಳು (ಲಾರ್ವಾ) ಗಳು ಪ್ರೌಢಾವಸ್ಥೆಗೆ ಬರುವ ಮೇ–ಜೂನ್ ತಿಂಗಳಲ್ಲಿ ನೆಡುತೋಪಿನಲ್ಲಿ ರಾತ್ರಿ ದೀಪಗಳು ಹಾಗೂ ಫೆರಮೋನ್ ಬಲೆಗಳ ನೆರವಿನಿಂದ ಕೀಟ ಹಿಡಿದು ಕೊಲ್ಲಬೇಕು. ಸಂತಾನಾವೃದ್ಧಿಯಾಗದಂತೆ ಸಂತಾನೋತ್ಪತ್ತಿ ಹಂತದಲ್ಲೆ ಫಲವಂತಿಕೆ ತಡೆಯುವ ವಿಧಾನಗಳನ್ನು ಬಳಸಬೇಕು.

ಕೀಟಗಳನ್ನು ತಿಂದು ಬದುಕುವ ನೈಸರ್ಗಿಕ ಶತ್ರು ಜೀವಿಗಳನ್ನು ಬಳಸಬೇಕು ಎಂದು ಡಾ॥ ಪ್ರಸಾದ ಕುಮಾರ್ ನೀಡಿರುವ ವರದಿಯಲ್ಲಿ ಕೀಟ ನಿಯಂತ್ರಣದ ದಿಕ್ಸೂಚಿ ಮಾತುಗಳಿವೆ.

ಗೋಲ್ಡನ್ ಬ್ಯಾಕ್ಡ್ ವುಡ್‌ಪೆಕರ್ ಹಾಗೂ ಬಾರ್ಬೆಟ್‌ಗಳು ಕಾಸಸ್ ಕಡಾಂಬೆಯ ಹುಳುವನ್ನು ಮರದ ಕಾಂಡದಿಂದ ಹೊರತೆಗೆದು ತಿನ್ನುತ್ತವೆ ಎಂದು ಅರಣ್ಯ ಕೀಟಗಳ ಕುರಿತ ಗ್ರಂಥವೊಂದರಲ್ಲಿ ಉಲ್ಲೇಖವಿದೆ. ಕೀಟದ ಜೈವಿಕ ನಿಯಂತ್ರಣದಲ್ಲಿ ಈ ಪಕ್ಷಿಗಳ ಪಾತ್ರ ಮಹತ್ವದ್ದು. ಆದರೆ ಇತಿಹಾಸದ ಕಾಡಿನ ಪುಟಗಳು ಮಾನವರ ಹಸ್ತಕ್ಷೇಪದ ವರ್ತನೆಯನ್ನು ಎತ್ತಿ ಹೇಳುತ್ತವೆ. ತೇಗದ ತೋಟ ಬೆಳೆಸಲು ನೈಸರ್ಗಿಕ ಕಾಡು ಕಡಿದಿದ್ದೇವೆ. ಉರುವಲು ಹಾಗೂ ಚೌಬೀನೆಯ ಸಂಗ್ರಹಕ್ಕಾಗಿ ಕಾಡಿನಲ್ಲಿ ಒಣಮರಗಳನ್ನು ಸ್ವಲ್ಪವೂ ಉಳಿಸದೇ ಸಂಗ್ರಹಿಸಿದ್ದೇವೆ. ಇದರಿಂದಾಗಿ ಇಂದು ಒಣ ಮರಗಳಲ್ಲಿನ ಹುಳು ಹುಪ್ಪಟೆ ತಿಂದು ಬದುಕುವ ಮರಕುಟುಗ (ವುಡ್‌ಪೆಕರ್) ಹಕ್ಕಿಯ ವಾಸದ ನೆಲೆಗೆ ಧಕ್ಕೆಯಾಗಿದೆ. ದಾಂಡೇಲಿಯ ತೇಗದ ಸಾಮ್ರಾಜ್ಯದಲ್ಲಿ ಕಾಸಸ್ ಕಡಾಂಬೆ ಅವಿರೋಧ ದಬ್ಬಾಳಿಕೆ ನಡೆಸಿದೆ.

ಮಧ್ಯಪ್ರದೇಶದ ಅಮರಕಂಟಕ್‌ದ ಸಾಲ್ (Shorea robusta) ವೃಕ್ಷಗಳ ಕಾಡಿನಲ್ಲಿ ಕಾಂಡ ಕೊರಕ ದುಂಬಿಯೊಂದು (Haplocerambyx spinicornis) ಅಲ್ಲಿನ ವೃಕ್ಷಗಳ ಪಾಲಿಗೆ ಕಂಟಕವಾಗಿದೆ. ಮಧ್ಯಪ್ರದೇಶದ ಒಟ್ಟೂ ಸಾಲ್ ಅರಣ್ಯಗಳ ಪೈಕಿ ಶೇಕಡಾ 60 ರಷ್ಟು ಕಾಡು ಕೀಟಬಾದಿತವಾಗಿ ಇಂದು ರಾಜ್ಯದ ಆರು ಜಿಲ್ಲೆಗಳ 3,00,000 ಹೆಕ್ಟೇರ್ ಕಾಡು ಕೀಟದಾಳಿಗೆ ತುತ್ತಾಗಿದೆ. ಮಂಡ್ಲಾ ಜಿಲ್ಲೆಯೊಂದರಲ್ಲೆ ಸುಮಾರು 8,00,000 ಮರಗಳು ಕೀಟದ ಬಾಯಿಗೆ ಬಿದ್ದಿವೆ. ಒಂದು ಹೆಣ್ಣು ದುಂಬಿ ಮಳೆಗಾಲದ ಆರಂಭಕ್ಕೆ 2500468 ತತ್ತಿಗಳನ್ನಿಡುತ್ತದೆ. ಮೊಟ್ಟೆಯೊಟೆದು ಮರಿಯಾಗಲು ಏಳು ದಿನ ಬೇಕು. ನಂತರ ಹುಳುವಾಗಿ ಕಾಂಡ ಕೊರೆತ ಆರಂಭವಾದರೆ ನಿರಂತರವಾಗಿ ಮುಂದಿನ ಜೂನ್‌ದಿಂದ ನವೆಂಬರ್ ತನಕ ಕಟ್ಟಿಗೆ ತಿನ್ನುತ್ತದೆ.

ಕಾಡು ಉಳಿಸಲು ಅಲ್ಲಿನ ಮಹಾಯುದ್ಧವೇ ನಡೆದಿದೆ. ರೋಗಬಾಧಿತ ಮರಗಳನ್ನು ಕಡಿಯಲು ಹೇಳಿದಂತೆ ಅಲ್ಲಿಯೂ ವಿಜ್ಞಾನಿಗಳು ಸಲಹೆ ನೀಡಿದ್ದಾರೆ. 1998ರ ಜನವರಿ ಮೂರನೆ ವಾರದ ಹೊತ್ತಿಗೆ ಆಗಲೇ 50,000 ವೃಕ್ಷಗಳು ಗರಗಸದ ಪಾಲಾಗಿದ್ದವು. ಇದಲ್ಲದೇ 1997ರಲ್ಲಿ ಸುಮಾರು 1.5 ಕೋಟಿ ಪ್ರೌಢ ಕೀಟಗಳನ್ನು ಕೈಯಾರೆ ಹಿಡಿದು ಕೊಲ್ಲಲಾಗಿದೆ. ಪ್ರತಿ ಕೀಟ ಹಿಡಿದರೆ 25 ಪೈಸೆಯಂತೆ ಪ್ರೋತ್ಸಾಹಧನ ನೀಡುವ ಕಾರ್ಯ ಆರಂಭಿಸಲಾಗಿದೆ. 15,000 ಕಾರ್ಮಿಕರು ಈ ಕಾಮಗಾರಿಯಲ್ಲಿ ತೊಡಗಿಸಲಾಗಿದೆ. ಈ ಮಧ್ಯೆ ಮರ ಕಡಿದು ಕೀಟ ಹಿಡಿಯುವ ಕ್ರಮ ವಿರೋಧಿಸಿ ಪರಿಸರ ಪ್ರೇಮಿಗಳು ನ್ಯಾಯಾಲಯದ ಕಟ್ಟೆ ಏರಿ ಮರಕಡಿತ ನಿಲ್ಲಿಸುವಲ್ಲಿ ಯಶಸ್ವಿಯಾಗಿದ್ದಾರೆ. ಕೀಟಬಾಧೆಯಿಂದ ಕಾಡು ಉಳಿಸುವುದಾದರೆ ಮರಕಡಿತವೇ ಸೂಕ್ತ ಕ್ರಮವೆಂದು ಮರ ಕಡಿತದ ಆಜ್ಞೆಗೆ ಪೂರಕವಾಗಿ ಟಿಂಬರ್ ಲಾಬಿ'ಗಳು ತೆರೆಮರೆಯ ಕಸರತ್ತು ನಡೆಸಿವೆ. ಕೀಟ ಎದುರಿಟ್ಟುಕೊಂಡು ಅರಣ್ಯ ಆಡಳಿತದ ಮಧ್ಯೆ ಸ್ವಾರ್ಥಿಗಳ ಕೂಟ ಸೇರಿ ಸಾಲ್ ಅರಣ್ಯಗಳು ಸೋಲುತ್ತಿವೆ.

1899ರಲ್ಲಿ ಸಾಲ್ ವೃಕ್ಷಕ್ಕೆ ಹಾನಿ ಮಾಡುವ ಈ ಕೀಟ ಪತ್ತೆಯಾಗಿತ್ತು. ಮಧ್ಯ ಪ್ರದೇಶದ ಮಾಂಡ್ಲಾ ಮತ್ತು ಬಾಲಾಘಾಟ್ ಅರಣ್ಯದಲ್ಲಿ 1923–28ರ ಅವಧಿಯಲ್ಲಿ 3,87,500 ಮರಗಳನ್ನು ಕಡಿಯಲಾಯಿತು. 4,28,000 ಪ್ರೌಢ ಕೀಟಗಳನ್ನು ಬೇಟೆಯಾಡಲಾಯಿತು. 1920ರಲ್ಲಿ ಬೀಸನ್ ಎಂಬ ಆಂಗ್ಲ ಅರಣ್ಯಾಧಿಕಾರಿ 'ಟ್ರ್ಯಾಪ್ ಟ್ರೀ' ಕಾರ್ಯಾಚರಣೆಯನ್ನು ಆರಂಭಿಸಿದ್ದರು. ಅದರ ಪ್ರಕಾರ ಒಂದು ಅಥವಾ ಎರಡು ರೋಗಬಾಧಿತ ಸಾಲ್ ಮರಗಳನ್ನು ಕಡಿದು 2–3 ಮೀಟರ್ ಉದ್ದದಲ್ಲಿ ತೊಗಟೆ ಸಹಿತ ದುಂಡನೆಯ ತುಂಡುಗಳನ್ನಾಗಿ ಕತ್ತರಿಸುವುದು. ಮೇಲ್ಭಾಗದಲ್ಲಿ ತೊಗಟೆಯನ್ನು ಜಜ್ಜಿ ರೋಗಬಾಧಿತ ಕಾಡಿನಲ್ಲಿ ತುಂಡನ್ನು ಅಲ್ಲಲ್ಲಿ ನಿಲ್ಲಿಸುವುದು. ಮರದ ತೊಗಟೆ ಅಂಟನ್ನು ಸ್ರವಿಸುತ್ತದೆ. ಮೂಲತಃ ಆ ಅಂಟಿನ ವಾಸನೆಯ ಕಾರಣದಿಂದ ಪ್ರೌಢ ಕೀಟ ಮರಕ್ಕೆ ಆಕರ್ಷಿತವಾಗಿ ತತ್ತಿ ಇಡಲು ಬರುತ್ತದೆ. ಮಳೆಗಾಲದ ಆರಂಭದಲ್ಲಿ ಕೀಟ ಪ್ರೌಢಾವಸ್ಥೆಗೆ ಬಂದು 2–3 ವಾರ ಕಾಲ ಬದುಕಿ ಸಂತಾನೋತ್ಪತ್ತಿಯಲ್ಲಿ ತೊಡಗುತ್ತದೆ. ಈ ಸೂಕ್ತ ಸಮಯಕ್ಕೆ ಕೀಟವನ್ನು ಆಕರ್ಷಿಸುವ 'ಟ್ಯಾಪ್ ಟ್ರೀ' ಕಾರ್ಯಾಚರಣೆ ನಡೆಸಿದರೆ ಆ ತುಂಡುಗಳಿಗೆ ಕೀಟಗಳು ಬರುತ್ತವೆ. ಆಗ ಹಿಡಿದು ಅವನ್ನು ಕೊಲ್ಲಬೇಕು ಎಂದು ಬೀಸನ್ ಹೇಳಿದ್ದರು. ಮಾಂಡ್ಲಾ ಬಾಲಾಘಾಟ್ ಬಿಲಾಸಪುರ್ ಜಿಲ್ಲೆಗಳಲ್ಲಿ ಇದೇ ಕ್ರಮ ಅನುಸರಿಸಿ ಕೀಟ ನಿಯಂತ್ರಣದ ಕ್ರಮ 1978ರವರೆಗೂ ಜಾರಿಯಲ್ಲಿತ್ತು. ಆದರೆ ನಂತರದ ದಿನಗಳಲ್ಲಿ ಹಣಕಾಸಿನ ಕೊರತೆಯೆಂದು ಅರಣ್ಯ ಇಲಾಖೆ ಇದನ್ನು ರದ್ದು ಪಡಿಸಿತು.

**ತೇಗದ ತಿರುಳಿನಲ್ಲಿ ಬಕಾಸುರ :**

ಇಂದು ವೈವಿಧ್ಯಮಯ ಕೀಟ ಜಾತಿಗಳ ದೊಡ್ಡ ದಂಡೇ ತೇಗದ ಮರವನ್ನು ಅವಲಂಬಿಸಿದೆ. 174 ವಿವಿಧ ಕೀಟಗಳನ್ನು ವಿಜ್ಞಾನಿಗಳು ಪತ್ತೆ ಹಚ್ಚಿದ್ದಾರೆ ! ಇದರಲ್ಲಿ ದಾಂಡೇಲಿಯ ಕಾಡಿನ ಧ್ವಂಸ ಕಾಂಡ ನಡೆಸುತ್ತಿರುವುದು ಕಾಸಸ್ ಕಡಾಂಬೆ ಎಂಬ ಕೀಟ. ತೇಗಕ್ಕೆ ಕಾಸಸ್ ಕಡಾಂಬೆ ಮೂರ್ (Cossus cadambae Moor Or Alcterogystia cadambe moor) ಎಂಬ ಈ ಕೀಟಬಾದೆ ಇರುವುದನ್ನು ಮೊಟ್ಟ ಮೊದಲ ಬಾರಿಗೆ ಬೀಸನ್ ಎಂಬುವರು 1941 ರಲ್ಲಿ ದಾಖಲಿಸಿದರು. ಕೇರಳ, ತಮಿಳುನಾಡು ಹಾಗೂ ಕರ್ನಾಟಕದ ಬಹುತೇಕ ತೇಗದ ತೋಟಗಳಲ್ಲಿ ಈಗ ಇದು ಅತ್ಯಂತ ಹಾನಿಕಾರಕ ಕೀಟವಾಗಿ ಕಾಣಿಸಿಕೊಂಡಿದೆ.

ಕಳೆದ ಐದು ವರ್ಷಗಳಿಂದ ದಾಂಡೇಲಿಯ ಕಾಡನ್ನು ಗಮನಿಸಿದ ಪ್ರಕಾರ ಬೆಂಕಿಯಿಂದ ಕಾಡನ್ನು ರಕ್ಷಿಸುವ ಕಾರ್ಯಕ್ರಮವೇ ಇವತ್ತು ಕೀಟವೃದ್ಧಿಗೆ ಕಾರಣವಾಯಿತೆ ಎಂಬ ಸಂದೇಹ ಮೂಡುತ್ತಿದೆ. ಬೇಸಿಗೆಯ ಏಪ್ರಿಲ್, ಮೇ ತಿಂಗಳಲ್ಲಿ ಕಾಡಿಗೆ ಬೆಂಕಿ ಬೀಳುತ್ತದೆ. ನೆಲಕ್ಕೆ ಬಿದ್ದ ಒಣ ಎಲೆಗಳು ಕರ್ಪೂರದಂತೆ ಕ್ಷಣಾರ್ಧದಲ್ಲಿ

ಉರಿಯತೊಡಗುತ್ತವೆ. ಇದೇ ಸಮಯದಲ್ಲಿ ಕಾಸಸ್ ಕಡಾಂಬೆ ಕಾಂಡ ಕೊರೆಯುವ ತನ್ನ ಚಟುವಟಿಕೆ ಪೂರೈಸಿ ಕೋಶಾವಸ್ಥೆಗೆ ತೆರಳಲು ಮಣ್ಣಿಗೆ ಮರಳುತ್ತದೆ. ಕಾಡು ಮಣ್ಣಿನಲ್ಲಿ ಸೇರಿ 2–4 ಇಂಚು ಆಳದಲ್ಲಿ ಕೋಶಾವಸ್ಥೆಗೆ 11 ದಿನಗಳ ಕಾಲ ಭೂಗತವಾಗುತ್ತದೆ.

ಬೆಂಕಿ ಉರಿಯುವುದಕ್ಕೂ ಇಲ್ಲಿ ಕೀಟ ಕೋಶಾವಸ್ಥೆಗೆ ಹೋಗುವುದಕ್ಕೂ ಸರಿ ಹೊಂದುತ್ತವೆ. ಇಲ್ಲಿ ಕೋಶಾವಸ್ಥೆಗೆಂದು ಭೂಮಿಗೆ ಇಳಿಯುವಾಗ, ಕೋಶಾವಸ್ಥೆಯಲ್ಲಿ ಭೂಗತದಲ್ಲಿರುವಾಗ ಅಥವಾ ಪ್ರೌಢ ಕೀಟವಾಗಿರುವಾಗ ಈ ಯಾವುದೇ ಸಂದರ್ಭದಲ್ಲಿ ಕಾಳ್ಗಿಚ್ಚು ಬಂದರೂ ಕೀಟ ಸಾಯುತ್ತದೆ. 1985ರ ತನಕೂ ಒಂದು ಹಂತದಲ್ಲಿ ಕೀಟ ನಿಯಂತ್ರಣ ಬಹುಶಃ ಇದೇ ರೀತಿಯಲ್ಲಾಗುತ್ತಿತ್ತು. ನಂತರ ಬೆಂಕಿ ನಿಯಂತ್ರಣ ಆರಂಭಿಸಿದ 4–5 ವರ್ಷಗಳಲ್ಲಿ ಕೀಟಬಾಧೆ ತೀವ್ರ ಉಲ್ಬಣಗೊಂಡಿದ್ದನ್ನು ಕೀಟಶಾಸ್ತ್ರಜ್ಞರು ಗಮನಿಸಬೇಕು. ಮುಖ್ಯವಾಗಿ ತೇಗ ತೊಗಟೆ ದಪ್ಪವಾಗಿರುವ ಕಾರಣ ಬೆಂಕಿ ಸಹಿಷ್ಣು ಗುಣವಿದೆ. ಒಮ್ಮೆ ಬೆಂಕಿಯ ಶಾಖ ತೇಗದ ಗಿಡಕ್ಕೆ ತಾಗಿದಾಗ ದಪ್ಪ ತೊಗಟೆ ಮೃದುತ್ವ ಕಳೆದುಕೊಂಡು ಗಡಸುತನ ಪಡೆಯುತ್ತದೆ. ಇದು ಮರಗಳನ್ನು ಕಾಂಡ ಕೊರಕ ಕೀಟಗಳಿಂದ ಬಚಾವು ಮಾಡುವಲ್ಲಿ ಸಹಾಯಕ. ಇಲ್ಲಿ ಬೆಂಕಿ ಕೀಟ ನಿಯಂತ್ರಣಕ್ಕೆ ನೆರವಾಗುವುದರ ಜೊತೆ ಮರದ ತೊಗಟೆಯ ರೂಪಾಂತರದಲ್ಲೂ ಮಹತ್ವದ ಪಾತ್ರವಹಿಸುತ್ತದೆ. ಇತ್ತೀಚಿನ ವರ್ಷಗಳಲ್ಲಿ ಬಯಲು ಸೀಮೆಯ ಕೆಲವು ಪ್ರದೇಶಗಳಲ್ಲಿ ನೀರಾವರಿಯಿಂದ ಬೆಳೆಸಿದ ತೇಗದ ಗಿಡಗಳ ತೊಗಟೆ ತುಂಬ ಮೃದುವಾಗಿ ಅಲ್ಲಲ್ಲಿ ಬಿರಿಯುವ ಗುಣ ವ್ಯಕ್ತಪಡಿಸಿದೆ. ಅಲ್ಲಿನ ಗಿಡಗಳಿಗೆ ಬೆಂಕಿಯ ಆರೈಕೆ ದೊರೆಯದಿದ್ದುದು ಇದಕ್ಕೆ ಕಾರಣವೆ? ಅರಿಯಬೇಕಿದೆ. ಯಾವಾಗ ಮರದ ತೊಗಟೆ ತನ್ನಷ್ಟಕ್ಕೆ ತಾನೇ ಬಿರಿದು ಸೀಳುತ್ತದೆಯೊ ಆಗ ಗಿಡ ಕೀಟ, ಫಂಗಸ್‌ಗಳ ದಾಳಿಗೆ ತುತ್ತಾಗುತ್ತದೆ. ರೋಗಬಾಧೆ ಹೆಚ್ಚುತ್ತದೆ.

ಒಂದು ನೆಡುತೋಪಿನ ಕ್ಷೇತ್ರದಲ್ಲಿನ ಮರಗಳು ಸಾಮಾನ್ಯವಾಗಿ ಒಂದೇ ವಯಸ್ಸಿನವುಗಳಾಗಿರುತ್ತವೆ. ಒಂದು ಹೆಕ್ಟೇರ್ ತೇಗದ ತೋಟದಲ್ಲಿ ಆರಂಭದಲ್ಲಿ 1600 ಮರಗಳಿರುವ ಅಂದಾಜಿದೆ. ನಾಟಿ ಮಾಡಿದ 30 ವರ್ಷಗಳ ತರುವಾಯ ನೆಡುತೋಪಿನಲ್ಲಿ ಆಯ್ದ ಮರಗಳನ್ನು ಕಡಿಯುವ ಪದ್ಧತಿಯಿದೆ. ಮರಗಳ ದಟ್ಟನೆಯನ್ನು ಕಡಿಮೆಮಾಡಿ ಮರಗಳು ಚನ್ನಾಗಿ ಬೆಳೆಯಲೆಂದು ಈ ಮಧ್ಯಂತರ ಕಟಾವು ಕ್ರಮದ ಪದ್ಧತಿಯಿದೆ. ಈ ಕಟಾವು ಕ್ರಮ ಮುಂದೆಯೂ 10–15 ವರ್ಷಗಳಿಗೊಮ್ಮೆ ಆಗಾಗ ನಡೆಯುತ್ತದೆ. ಹಾಗಾಗಿ ನೆಡುತೋಪಿನ ವಯಸ್ಸು ಏರಿದಂತೆ ಹೆಕ್ಟೇರ್‌ನಲ್ಲಿನ ಮರಗಳ ಸಂಖ್ಯೆ ಕಡಿಮೆಯಾಗುತ್ತದೆ.

ಈಗ ದಾಂಡೇಲಿಯ ತೋಟದ ವಿಚಾರಕ್ಕೆ ಬಂದರೆ ಈಗಾಗಲೇ ಇಲ್ಲಿ ನಷ್ಟವಾಗಿರುವ ಮರಗಳಲ್ಲಿ ನೈಸರ್ಗಿಕವಾಗಿ ಬೆಳೆದ ಹೆಮ್ಮರಗಳಿವೆ. ಕ್ರಿ.ಶ. 1867–1960 ಕಾಲದಲ್ಲಿ ಬೆಳೆಸಿದ ನೆಡುತೋಪುಗಳಿವೆ. ಒಂದು ಹೆಕ್ಟೇರ್‌ನಲ್ಲಿ (ಒಂದು ಹೆಕ್ಟೇರ್‌ನಲ್ಲಿ ಒಟ್ಟೂ ಕನಿಷ್ಠ 600 ಮರಗಳಿರುತ್ತವೆ ಎಂಬ ಅಂದಾಜು) ಈ ಎಲ್ಲ ವಯಸ್ಸಿನ ಕೇವಲ 50 ಮರಗಳಿಗೆ ಮಾತ್ರ ಕೀಟತಗಲಿದೆ ಎಂದು ಅಂದಾಜಿಸೋಣ. ಒಂದು ಮರದ ಬೆಲೆ 25,000

ರೂಪಾಯಿಗಳೆಂದು ಇಂದಿನ ಮಾನದಲ್ಲಿ ಲೆಕ್ಕ ಹಾಕಬಹುದು. ಇದನ್ನೆ ಆಧಾರವಾಗಿ ನಷ್ಟದ ಅಂದಾಜು ಮಾಡಿದರೆ ಒಂದು ಹೆಕ್ಟೇರ್‌ನಲ್ಲಿ ಕೀಟಬಾಧೆಯಿಂದ ಆಗುವ ನಷ್ಟ 12.2 ಲಕ್ಷ ರೂಪಾಯಿಗಳು ! ಇಂದು ಉತ್ತರ ಕನ್ನಡದ 20,000 ಹೆಕ್ಟೇರ್ ತೇಗದ ನೆಡುತೋಪುಗಳನು ತೀವ್ರ ಕೀಟಬಾಧೆಯಿಂದ ತತ್ತರಿಸಿವೆ. ನಷ್ಟವಾದ ಚೌಬೀನೆಯ ಮೌಲ್ಯ 2500 ಕೋಟಿಗಳಾಗುತ್ತವೆ ! ಕಾಡಿನ ನಷ್ಟದ ಲೆಕ್ಕಾಚಾರದಲ್ಲಿ ತಕ್ಕಡಿ ಹಿಡಿದು ತೂಗಿದ ನಿಖರತೆಯೇನೂ ಸಾಧ್ಯವಿಲ್ಲವಾದರೂ ಊಹೆಗೆ ಇದು ಒಂದು ಆಧಾರ ಮಾತ್ರ. ಇವತ್ತು ವಿಜ್ಞಾನಿಗಳ ವರದಿ ಹೇಳಿದ ನಾಶದ ಪ್ರಮಾಣವನ್ನೆ ಲೆಕ್ಕ ಹಾಕಿದರೆ ಅದು ಈ ಅಂದಾಜುಗಳನ್ನು ಮೀರಿಸುತ್ತದೆ. 1 ಕೀಟದಿಂದ ವರ್ಷಕ್ಕೆ 600 ಕೀಟವಾಗಿ ವೃದ್ಧಿಸುವ ಕಡಾಂಬೆ ಕೀಟದ ಬಾಯಲ್ಲಿ 12 ವರ್ಷಗಳ ಸುಧೀರ್ಘ ಕಾಲದಿಂದ ನರಳಿದ ತೇಗದ ತೋಟದಲ್ಲಿ ಈ ಸಾವಿರ ಕೋಟಿಗಳ ನಷ್ಟ ಸಹಜವಾಗಿದೆ. ಆದರೂ ಕೀಟ ನಿಯಂತ್ರಣಕ್ಕೆ ಇಲಾಖೆ ಯಾವ ಕ್ರಮವನ್ನೂ ಕೈಗೊಂಡಿಲ್ಲ.

ಆರೇಳು ವರ್ಷದ ಹಿಂದೆ ಮಾಡಿದ ಅಧ್ಯಯನವೊಂದೇ ಕೆಲಸ ಮಾಡಿದ್ದೇವೆಂದು ಕರ್ನಾಟಕ ಅರಣ್ಯ ಇಲಾಖೆಗೆ ಹೇಳುವುದಕ್ಕಿರುವ ಏಕೈಕ ಆಧಾರ. ಸಾವಿರ ಕೋಟಿ ರೂಪಾಯಿಗಳನ್ನು ಹಾನಿ ಮಾಡಿದ ಕೀಟದ ಅಧ್ಯಯನಕ್ಕೆ 12 ವರ್ಷಗಳಲ್ಲಿ ಇವರು ತೊಡಗಿಸಿದ್ದು ಕೇವಲ 1 ಲಕ್ಷ ರೂಪಾಯಿ ಮಾತ್ರ ! ಅಂದರೆ 120 ವರ್ಷ ಪ್ರಾಯದ ಒಂದೇ ಒಂದು ತೇಗದ ಮರದ ಬೆಲೆಗೆ ಈ ವೆಚ್ಚ ಸಮವಾಗಿದೆ.

ಡಾ॥ ಪ್ರಸಾದ್ ಕುಮಾರ್ ನಡೆಸಿದ ಅಧ್ಯಯನ ಕೂಡಾ ಸಮಗ್ರವಾಗಿಲ್ಲ. ಇವತ್ತು ಕಾಡಿನ ನಾಶ ಎಷ್ಟಾಗಿದೆ ಎಂಬುದಕ್ಕೆ ಇದೊಂದು ಪುಟ್ಟ ವೈಜ್ಞಾನಿಕ ಆಧಾರವೇ ಹೊರತೂ ಕೀಟನಿಯಂತ್ರಣಕ್ಕೆ ನೆರವಾಗುವ ತಾಕತ್ತು ಇದಕ್ಕಿಲ್ಲ. ವರದಿಯಲ್ಲಿ ಕೆಲವು ಸಾಮಾನ್ಯ ಸಲಹೆಗಳಿವೆಯೆ ಹೊರೆತೂ ಈ ತಂತ್ರಗಳಿಂದ ಪರಿಣಾಮಕಾರಿಯಾಗಿ ಯಾವ ರೀತಿ ಕೀಟನಿಯಂತ್ರಣ ಸಾಧ್ಯವೆಂಬುದಕ್ಕೆ ದಾಂಡೇಲಿ ತೋಟಗಳಲ್ಲಿ ನಿರಂತರವಾಗಿ ನಡೆಸಿದ ಪ್ರಯೋಗ, ಫಲಶ್ರುತಿಯ ಖಚಿತ ವಿವರಣೆಗಳಿಲ್ಲ. ಕ್ರಿ. ಶ. 1920ರಲ್ಲೆ ಆಂಗ್ಲ ಅರಣಾಧಿಕಾರಿ ಬೀಸನ್ ಸಾಲ್ ಮರ ಕೊರೆಯುವ ದುಂಬಿಯ ವಿರುದ್ಧ ಬಳಸಿದ 'ಟ್ರ್ಯಾಪ್ ಟ್ರೀ' ವಿಧಾನಗಳಂತಹ ಸುಲಭ, ಪರಿಸರ ಪೂರಕ ವಿಧಾನಗಳ ಬಗೆಗೆ ಡಾ॥ ಪ್ರಸಾದ್ ಕುಮಾರ್ ಯೋಚಿಸಿಲ್ಲ. ಕೀಟ ಕೊಲ್ಲಲು ಓಬಿರಾಯನ ಕಾಲದ ಮರಕಡಿತದ ಮಾತೇ ಇಂದಿಗೂ ವಿಶ್ವ ವಿದ್ಯಾನಿಲಯದ ವಿಜ್ಞಾನಿಗಳಿಂದ ಕೇಳಿ ಬರುತ್ತಿರುವದಂತೂ ಇಂದಿನ ವೈಜ್ಞಾನಿಕ ಪ್ರಗತಿಯಲ್ಲಿ ವಿವಾದಾಸ್ಪದ ಸಲಹೆಯಾಗುತ್ತದೆ. ಅರಣ್ಯ ಕೀಟಗಳ ನಿಯಂತ್ರಣದ ವಿಚಾರದಲ್ಲಿ ನಾವೆಷ್ಟು ಹಿಂದುಳಿದ್ದೇವೆ ಎಂಬುದಕ್ಕೆ ಇದು ಸಾಕ್ಷಿ.

ಅಧ್ಯಯನ ವರದಿ ಡಿಸೆಂಬರ್ 1999ರಲ್ಲಿ ಸಲ್ಲಿಕೆಯಾಗಿದೆ. ಹಾಗಾದರೆ ವರದಿ ಪಡೆದ ಬಳಿಕವಾದರೂ ಕರ್ನಾಟಕ ಅರಣ್ಯ ಇಲಾಖೆ ಏನು ಮಾಡಿದೆ? ಎಂಟು ತಿಂಗಳ ನಂತರ ಹಿರಿಯ ಅರಣ್ಯ ಸಂರಕ್ಷಣಾಧಿಕಾರಿಯೊಬ್ಬರನ್ನು ಸಂಪರ್ಕಿಸಿದಾಗ ಅವರ ಪ್ರತಿಕ್ರಿಯೆ

ಚುಟುಕಾಗಿತ್ತು. 'ಕೀಟಬಾಧೆಯ ಕುರಿತು ನಡೆದ ಸಂಶೋಧನಾ ವರದಿಯನ್ನು ಇನ್ನೂ ನಾನು ನೋಡಿಲ್ಲ' ಎಂದರು !

# ಮಹಿಳೆ ಮತ್ತು ಜಾಹೀರಾತು

**– ಸಾರಾ ಅಬೂಬಕ್ಕರ್**

ಮಹಿಳೆಯರು ಬಹಳ ಸುಲಭವಾಗಿ, ತಮಗೆ ತಿಳಿಯದಂತೆ ಶೋಷಿಸಲ್ಪಡುವ ಒಂದು ಕ್ಷೇತ್ರ ಮಾಡೆಲಿಂಗ್ ಮತ್ತು ಜಾಹೀರಾತು ಕ್ಷೇತ್ರ. ಜಾಹೀರಾತಿನಲ್ಲಿ ಮಹಿಳೆ ಎಂಬ ವಿಷಯದ ಕುರಿತು ಮಾತನಾಡುವ ಮೊದಲ ಜಾಹೀರಾತು ಬೇಕೇ ಅಥವಾ ಏಕೆ ಬೇಕು ಎಂಬ ಕುರಿತು ನಮ್ಮ ಚಿಂತನೆ ಹರಿಯಬೇಕಾಗಿದೆ. ಬಹುಶಃ ಹಿಂದಿನ ಶತಮಾನಗಳಲ್ಲಿ ಈ ಜಾಹೀರಾತುಗಳ ಹಾವಳಿ ಇದ್ದಿರಲಾರದು. ಅಂದು ಮಾರುಕಟ್ಟೆಗಳಿದ್ದುದೇ ಜೀವನಾವಶ್ಯಕ ವಸ್ತುಗಳನ್ನು ಕೊಳ್ಳುವುದಕ್ಕಾಗಿ ಉಪ್ಪು, ಸಕ್ಕರೆ ಮತ್ತು ಮೈ ಮುಚ್ಚಲು ಬೇಕಾಗುವಷ್ಟು ಬಟ್ಟೆಗಳನ್ನು ಮಾತ್ರ ಕೊಂಡುಕೊಳ್ಳುತ್ತಿದ್ದ ದಿನಗಳು ಅವಾಗಿದ್ದು ಉಳಿದ ಜೀವನಾವಶ್ಯಕ ವಸ್ತುಗಳನ್ನು ತಾವೇ ಬೆಳಸಿಕೊಳ್ಳುತ್ತಿದ್ದ ದಿನಗಳು. ಯಾವುದೇ ಪೈಪೋಟಿ ಇಲ್ಲದ ದಿನಗಳಲ್ಲಿ ತಮ್ಮ ವಸ್ತುಗಳನ್ನು ಕೊಳ್ಳಿರೆಂದು ಯಾರಿಗೂ ಯಾವುದೇ ಆಮಿಷವನ್ನೂ ಒಡ್ಡಬೇಕಾದ ಅಗತ್ಯವೇ ಇರಲಿಲ್ಲ. ಮನುಷ್ಯರೇ ಬದುಕಲು ತಿನ್ನುತ್ತಿದ್ದು; ಮೈ ಮುಚ್ಚಲು, ಮೈಯನ್ನು ಬಿಸಿಲು, ಮಳೆಗಳಿಂದ ರಕ್ಷಿಸಲು ಬಟ್ಟೆ ಧರಿಸುತ್ತಿದ್ದರು. ಮೈ ಬಗ್ಗಿಸಿ ಸೊಂಟ ಮುರಿಯುವಂತೆ ದುಡಿಯುವುದೇ ಅಂದಿನ ದಿನಚರಿಯಾಗಿತ್ತು.

ಕ್ರಮೇಣ ಮನುಷ್ಯರ ಬದುಕಿನ ರೀತಿ ಬದಲಾಗತೊಡಗಿತು. ನಾಲಗೆಯ ರುಚಿ. ಬಟ್ಟೆಯ ಬಣ್ಣಗಳ ಕುರಿತು ಜನರ ಚಿಂತೆ ಹರಿಯ ತೊಡಗಿತು. ಮೈ ಮುಚ್ಚುವಂತೆ ಬಟ್ಟೆ ತೊಟ್ಟರೆ ಸಾಲದು. ಅದು ತೊಟ್ಟಾಗ ಹೆಣ್ಣಿನ ಸೌಂದರ್ಯಕ್ಕೆ ಮೆರಗು ಬರಬೇಕು. ಆಕೆ ಗಂಡಸರನ್ನು ಆಕರ್ಷಿಸುವಂತಹ ಬಟ್ಟೆಗಳನ್ನುಡುವಂತಾಗಬೇಕು. ಪ್ರಕೃತಿಯ ಈ ಸಹಜ ನಿಯಮ ಮತ್ತು ಈ ಕುರಿತ ಹೆಣ್ಣಿನ ದೌರ್ಬಲ್ಯವೇ ಜಾಹೀರಾತಿನ ಮೂಲ ಸೆಲೆಯಾಯಿತು. ದೊರಗು ಬಟ್ಟೆಗಿಂತಲೂ ನಯವಾದ ಬಟ್ಟೆಗೆ ಸೊಗಸೂ ಇದೆ ತೊಡಲೂ ಅನುಕೂಲ ಇಂತಹ ಉತ್ತಮವಾದ ಸರಕು ತಮ್ಮ ಬಳಿ ಇದೆಯೆಂಬ ವಿಷಯವನ್ನು ಜನರಿಗೆ ತಲುಪಿಸುವುದು ಹೇಗೆ? ಹೀಗೆ ಆರಂಭವಾದುದು ಜಾಹೀರಾತು. ಆದರೆ ಮಾರಾಟಗಾರರ ಗುರಿ ಮಹಿಳೆಯರಿಗೆ ಉತ್ತಮ ಬಟ್ಟೆ ತಲುಪಿಸಿ ಅವರ ಸೌಂದರ್ಯಕ್ಕೆ ಮೆರಗು ನೀಡುವುದಲ್ಲ. ತಾವು ತಯಾರಿಸುವ ಬಟ್ಟೆಯನ್ನು ಅಧಿಕ ಸಂಖ್ಯೆಯ ಜನರು ಕೊಳ್ಳುವಂತೆ, ಅದರಿಂದ ತಮ್ಮ ಲಾಭ ದ್ವಿಗುಣಗೊಳ್ಳುವಂತೆ, ಮಾಡುವುದೇ ಅವರ ಗುರಿ. ಹೀಗಾಗಿಯೆ ಜಾಹೀರಾತು ನೀಡುವಲ್ಲಿಯೂ ಪೈಪೋಟಿ ಆರಂಭವಾಯಿತು.

ಬಳಕೆದಾರಿಕೆಯೇ ಜಾಹೀರಾತುಗಳ ಮೂಲ ಸೆಲೆ. ಮೈಮುರಿದು ದುಡಿದು, ದುಡಿದದ್ದನ್ನೇ ತಿನ್ನುತ್ತಿದ್ದ ದಿನಗಳಲ್ಲಿ ಜನರು ವಸ್ತುಗಳ ಕೊಳ್ಳುವಿಕೆಯ ಕುರಿತು ಚಿಂತಿಸಲೇ ಇಲ್ಲವೇನೋ, ಆದರೆ ಮಾರುಕಟ್ಟೆಗೆ ವಿನೂತನ ಸಾಮಾಗ್ರಿಗಳ ಆಗಮನವಾದಾಗ ಜನರು ಈ ವಸ್ತುಗಳೆಡೆಗೆ

ಆಕರ್ಷಿಸಲ್ಪತೊಡಗಿದರು. ಒಂದು ಸಂಸ್ಥೆ ತಮ್ಮ ಮಾರಾಟದಿಂದ ಮಾರುಕಟ್ಟೆಯನ್ನು ಕೊಳ್ಳೆ ಹೊಡೆಯತೊಡಗಿದಾಗ ಇನ್ನೊಂದು ಕಂಪೆನಿಯೂ ಅದೇ ವಸ್ತುವನ್ನು ಉತ್ಪಾದಿಸತೊಡಗಿತು. ಜಾಹೀರಾತುಗಳ ಮೂಲಕ ತಮ್ಮ ತಯಾರಿಕೆ ಅತ್ಯುತ್ತಮವೆಂದೂ, ತಮ್ಮ ಸಂಸ್ಥೆಯ ವಸ್ತುವನ್ನೇ ಕೊಳ್ಳಬೇಕೆಂದೂ ಜನರಿಗೆ ಹಲವು ಬಗೆಯ ಆಮಿಷಗಳನ್ನೊಡ್ಡತೊಡಗಿತು. ಸೀರೆಯ ಜಾಹಿರಾತನ್ನೇ ನೋಡಿ, ತಮ್ಮ ಸೀರೆ ಅತ್ಯುತ್ತಮವೆಂದು ಜಾಹೀರಾತು ನೀಡುವ ಬದಲಾಗಿ ಅದನ್ನು ಕಲಾತ್ಮಕವಾಗಿ, ದೇಹದ ಉಬ್ಬುತಗ್ಗುಗಳು ಗೋಚರಿಸುವಂತ ಉಟ್ಟ ಓರ್ವ ಮಹಿಳೆಯ ಚಿತ್ರವನ್ನೇ ತೋರಿಸಿದರೆ ಹೇಗೆ? ಸೀರೆಯುಟ್ಟ ಮಹಿಳೆ ಸುಂದರಿಯಾಗಿರಬೇಕು. ಹಾಗಿದ್ದರೆ ಮಾತ್ರ ಆ ಸೀರೆಯ ಚೆಂದವೂ ವೃದ್ಧಿಸುತ್ತದೆ ತಾನೇ? ತೆಳ್ಳಗೆ ಬೆಳ್ಳಗೆ, ಬಳಕುವ ಮೈಯ ಸುಂದರಿಯೊಬ್ಬಳು ಉಟ್ಟ ಸೀರೆಯ ಬಣ್ಣ, ವಿನ್ಯಾಸ ನೋಡಿ ಮರುಳಾಗದ ಮಹಿಳೆಯರು ಯಾರು? ಇಂತಹ ಜಾಹೀರಾತಿನಿಂದಲೇ ಸೀರೆಯ ವ್ಯಾಪಾರ ಒಂದಕ್ಕೆರಡು ಲಾಭ ಗಳಿಸುತ್ತಾನೆ.

ಸೀರೆಯಿಂದಲೇ ಹೆಣ್ಣಿನ ಸೌಂದರ್ಯವನ್ನಳೆಯುವ ಕಾಲ ಹಿಂದೆ ಸರಿಯಿತು. ಹೆಂಗಸರ ಸೌಂದರ್ಯ ವೃದ್ಧಿಗಾಗಿ ಹಲವು ರೀತಿಯ ಸೌಂದರ್ಯವರ್ಧಕ ಸಾಧನಗಳು ಮಾರುಕಟ್ಟೆಯನ್ನು ಪ್ರವೇಶಿಸತೊಡಗಿದವು. ಸ್ನೋ, ಪೌಡರ್, ಕ್ರೀಮ್ ಲಿಪಿಸ್ಟಿಕ್, ಶಾಂಪೂ, ಕಾಡಿಗೆ, ಹೀಗೆ ನೂರಾರು ಬಗೆಯ ಸಾಮಾಗ್ರಿಗಳನ್ನು ನೂರಾರು ಕಂಪನಿಗಳು ತಯಾರಿಸಿ ಮಾರುಕಟ್ಟೆಗೆ ಬಿಡುಗಡೆಗೊಳಿಸಿದವು. ತಮ್ಮ ಕಂಪೆನಿಗಳ ಮಾಲುಗಳ ಜಾಹೀರಾತಿಗಾಗಿ ಈ ಸಂಸ್ಥೆಗಳು ಸುಂದರಿಯರಾದ ಮಹಿಳೆಯರನ್ನು ರೂಪದರ್ಶಿಗಳಾಗಿ ಬಳಸಿಕೊಳ್ಳತೊಡಗಿದರು. ತಮ್ಮ ಸಂಸ್ಥೆಯ ಸಾಬೂನು ಉಪಯೋಗಿಸಿದರೆ ನೀವು ಖ್ಯಾತ ಸಿನಿಮಾ ನಟಿಯಂತಾಗುತ್ತೀರಿ ಎನ್ನಲು ಆ ನಟಿಯ ಬಾಯಿಯಿಂದಲೇ ಈ ಮಾತುಗಳನ್ನು ಹೇಳಲಾರಂಭಿಸಿದರು. ಆಕೆ ತನ್ನ ಬದುಕಿನಲ್ಲಿ ಬಹುಶಃ ಆ ಕಂಪೆನಿಯ ಸಾಬೂನನ್ನು ಕಣ್ಣಿನಿಂದಲೂ ನೋಡಿರಲಾರಳೇನೋ! ಆದರೆ ಜಾಹೀರಾತಿಗಾಗಿ, ಆ ಮೂಲಕ ಆಕೆಗೆ ದೊರೆಯುವ ಹಣಕ್ಕಾಗಿ ಆಕೆ ಆ ರೀತಿ ಹೇಳಲೇಬೇಕಾಗಿತ್ತು. ಕೆಲವು ಮಹಿಳೆಯರಂತೂ ಆ ಸಿನಿಮಾ ನಟಿಯಂತಾಗಲು ಯಾವ ತ್ಯಾಗಕ್ಕೂ ಸಿದ್ಧರಾಗುತ್ತಾರೆ.

ಮಹಿಳೆಯರಿಗೆ ಅಗತ್ಯವಾದ ಮಹಿಳೆಯರು ಮಾತ್ರ ಉಪಯೋಗಿಸಬಹುದಾದಂತಹ ವಸ್ತುಗಳ ಜಾಹೀರಾತುಗಳಿಗೆ ಮಹಿಳೆಯರನ್ನು ಬಳಸಲಾಯಿತು. ಜಾಹೀರಾತಿನಲ್ಲಿ ಸುಂದರಿಯಾದ ಓರ್ವ ಮಹಿಳೆಯ ಚಿತ್ರ ಇದ್ದರೆನೇ ತಮ್ಮ ಸರಕುಗಳ ಮಾರಾಟಕ್ಕೆ ಅನುಕೂಲವೆಂಬುದು ಮನಗಂಡ ವ್ಯಾಪಾರಿಗಳು ಎಲ್ಲಾ ರೀತಿಯ ಜಾಹೀರಾತುಗಳಲ್ಲೂ ಮಹಿಳೆಯರನ್ನು ಬಳಸತೊಡಗಿದರು. ಹೊಸ ಮೋಟಾರ್ ಕಾರನ್ನೂ ಮಹಿಳೆಯೊಬ್ಬಳು ಸುಂದರವಾಗಿ ನಗುತ್ತಾ ಚಲಾಯಿಸುವ ಚಿತ್ರ ಪತ್ರಿಕೆಗಳ ಪುಟಗಳಲ್ಲಿ ರಾರಾಜಿಸತೊಡಗುತ್ತದೆ. ನೀರಿನ ಪಂಪ್ಸೆಟ್, ಕೃಷಿಕರು ಉಪಯೋಗಿಸುವ ಗೊಬ್ಬರ ಟೂತ್ ಪೇಷ್ಟ್, ಟೂತ್‌ಬ್ರಶ್‌ನಿಂದ ಹಿಡಿದು ಮೋಟಾರ್ ಕಾರು, ಕಂಪ್ಯೂಟರ್‌ವರೆಗೆ ಎಲ್ಲಾ ವಸ್ತುಗಳ ಜಾಹೀರಾತಿಗೂ

ಮಹಿಳೆಯೊಬ್ಬಳ ಚಿತ್ರ ಬೇಕೇ ಬೇಕು. ಎಂಬಂತಾಯಿತು. ಹಣ್ಣಿನ ದಾಳಿಂಬೆ ಬೀಜದಂತಹ ಹಲ್ಲುಗಳನ್ನು ಜಾಹೀರಾತಿನಲ್ಲಿ ಕಂಡ ಹುಳುಕು ಹಲ್ಲಿನನವನೊಬ್ಬನು ದಂತ ವೈದ್ಯರ ಬಳಿ ಹೋಗುವುದನ್ನು ಬಿಟ್ಟು ಈ ಟೂತ್ ಪೇಸ್ಟ್ ಕೊಂಡುಕೊಂಡು ಮನೆಗೆ ಬರುತ್ತಾನೇ! ಹೊಸ ಮೋಟಾರ್ ಕಾರನ್ನು ಚಲಾಯಿಸುವಾತನ ಪಕ್ಕದಲ್ಲಿ ನಗುತ್ತಾ ಕುಳಿತುಕೊಂಡ ಸುಂದರವಾದ ಹೆಣ್ಣು, ಬಟ್ಟೆ ಒಗೆಯುವ ಯಂತ್ರ, ಮಸಾಲೆ ಕಡೆಯುವ ಯಂತ್ರ, ಮಿಕ್ಸಿ ಮುಂತಾದವುಗಳಿಗಂತೂ ಹಣ್ಣಿನ ಚಿತ್ರ ಬೇಕೇ ಬೇಕು. ಆದರೆ ಗಂಡಸರು ತೊಡುವ ಒಳ ಉಡುಪುಗಳಿಗೂ ಹೆಣ್ಣಿನ ಚಿತ್ರವೆಂದರೆ ಅದಕ್ಕಿಂತಲೂ ಹಾಸ್ಯಾಸ್ಪದವಾದುದೇನಿದೆ? ಜಾಹೀರಾತಿನಲ್ಲಿ ಆಕೆ ಎನ್ನುತ್ತಾಳೆ 'ಆ ಕಂಪೆನಿಯ ಒಳ ಉಡುಪು ಧರಿಸಿಧಾತನನ್ನು ನಾನು ಪ್ರೀತಿಸುತ್ತೇನೆ!'

ಪತ್ರಿಕಾ ಮಾಧ್ಯಮಗಳಿಂದ ಎಲೆಕ್ಟ್ರಾನಿಕ್ ಮಾಧ್ಯಮಗಳಿಗೆ ಕಾಲಿಟ್ಟಾಗ ಜಾಹೀರಾತುಗಳ ವಿನ್ಯಾಸವೂ ಬದಲಾಗತೊಡಗಿತು. ಮೈ ತುಂಬಾ ಬಟ್ಟೆ ತೊಟ್ಟುಕೊಂಡು ಹೆಣ್ಣಿನ ಚಿತ್ರಕ್ಕಿಂತ ಆದಷ್ಟು ಕಮ್ಮಿ ಬಟ್ಟೆ ತೊಟ್ಟ ಹೆಣ್ಣು ಮತ್ತಷ್ಟು ಆಕರ್ಷಣೀಯವಾಗಿ ಕಾಣಿಸಿಕೊಳ್ಳತೊಡಗಿದಳು. ಅರೆನಗ್ನ ಹೆಣ್ಣಿನ ಮೈ ಮಾಟವನ್ನು ಜಾಹೀರಾತಿಗಾಗಿ ಬಳಸಿದರೆ ಮತ್ತಷ್ಟು ಲಾಭ ಪಡೆಯಬಹುದೆಂದು ಮನಗಂಡ ವ್ಯಾಪಾರಿಗಳು ಅದಕ್ಕೂ ಮುಂದಾದರು. ಈಜುಡುಗೆ ತೊಟ್ಟ ಹೆಣ್ಣು ಸಿನಿಮಾ ಮತ್ತು ಜಾಹೀರಾತುಗಳಲ್ಲಿ ಕಾಣಸಿಗುವುದು ಸಾಮಾನ್ಯವಾಯಿತು. ಈಜುಡುಗೆಯಲ್ಲಿ ಮಾತ್ರವಲ್ಲ ಈಜುತ್ತಾ ಅಥವಾ ಮಳೆಯಲ್ಲಿ ನೆನೆಯುತ್ತಾ ಅಥವಾ ಧುಮ್ಮಿಕ್ಕುವ ಜಲಪಾತದಡಿಯಲ್ಲಿ ಜಲಕ್ರೀಡೆಯಾಡುತ್ತಾ ತಾನು ಹಚ್ಚಿಕೊಳ್ಳುವ ಸಾಬೂನಿನ ಕುರಿತೋ, ಟೂತ್ ಪೇಸ್ಟಿನ ಕುರಿತೋ ಹೇಳತೊಡಗುತ್ತಾಳೆ. ಒದ್ದೆ ಮೈಯ ಹೆಣ್ಣು ಮಗಳ ಅರೆನಗ್ನ ದೇಹದ ಮೈ ಮಾಟದ ಸೌಂದರ್ಯನ್ನು ಸವಿಯುತ್ತಾ ಪ್ರೇಕ್ಷಕನು ಮೈಮರೆಯುತ್ತಾನೆಂಬುದರಲ್ಲಿ ಸಂದೇಹವೇ ಇಲ್ಲ.

ಹೆಣ್ಣು ಮಕ್ಕಳ ಇಂತಹ ದೃಶ್ಯಗಳಲ್ಲಿ ಅಭಿನಯಿಸಲು ಯಾಕೆ ಸಿದ್ಧರಾಗುತ್ತಾರೆ? ಇವರು ಬಹಳ ಬೇಗನೆ ಹಣದ ಆಮಿಷಕ್ಕೆ ಬಲಿಯಾಗುತ್ತಾರೆ. ತಿಂಗಳು ಗಟ್ಟಲೆ ಮೈ ಮುರಿದು ದುಡಿದರೂ ದೊರೆಯದಷ್ಟು ಹಣ ಇಂತಹ ಜಾಹೀರಾತು ಸಂಸ್ಥೆಗಳಿಂದ ದೊರೆಯುತ್ತವೆಂದರೆ ಅದೇನೂ ಸಣ್ಣ ವಿಷಯವಲ್ಲ. ಮಾರಾಟಗಾರರು ಈ ಹಣವನ್ನು ಬಳಕೆದಾರರ ಮೇಲೆ ಹೊರಿಸುತ್ತಾರೆಯೇ ಹೊರತು ತಮಗೆ ನಷ್ಟವುಂಟು ಮಾಡಿಕೊಳ್ಳುವುದಿಲ್ಲ. ಬಡವರು ಹೊಟ್ಟೆಯ ಪಾಡಿಗಾಗಿ ಈ ಜಾಹೀರಾತು ಸಂಸ್ಥೆಯ ಮೊರೆಹೋದರೆ ಶ್ರೀಮಂತ ಹೆಣ್ಣು ಮಕ್ಕಳೂ ಈ ಕ್ಷೇತ್ರ ಪ್ರವೇಶಿಸಲು ಕಾರಣವೇನು? ಮನಕ್ಕೆ ಮುದ ನೀಡುವುದೆಂದೇ? ಮತ್ತು ಈ ನಗ್ನತೆ ಎಲ್ಲಿಯವರೆಗೆ ಮುಂದುವರಿಯಿತು? ಮಹಿಳೆಯೊಬ್ಬಳು ಪುರುಷರ ಶೂ ಕಂಪೆನಿಗಾಗಿ ತನ್ನ ನಗ್ನ ದೇಹಕ್ಕೆ ಹೆಬ್ಬಾವನ್ನು ಸುತ್ತಿಕೊಂಡು ಜಾಹೀರಾತು ನೀಡಿದ ಚಿತ್ರವನ್ನು ಕಂಡು ನಮ್ಮಂತಹವರಿಗೆ ಅಘಾತವಾಗಿದೆ. ಹಾವನ್ನು ಸುತ್ತಿಕೊಂಡ ಆಕೆಯ ನಗ್ನ ದೇಹಕ್ಕೂ ಗಂಡಸರ ಶೂಸಿಗೂ ಏನು ಸಂಬಂಧ?

ಹೀಗೆ ಪರಸ್ಪರ ಹೊಂದಿಕೆಯೇ ಇಲ್ಲವಾದರೂ ಜಾಹೀರಾತಿನಲ್ಲಿ ಅರೆನಗ್ನ ಹೆಣ್ಣಿನ ಚಿತ್ರವನ್ನು ಅಳವಡಿಸುವುದು ಇತ್ತೀಚೆಗೆ ಜಾಹೀರಾತು ಸಂಸ್ಥೆಗಳ ಹವ್ಯಾಸವೇ ಆಗಿದೆ.

ಈ ಸಂದರ್ಭದಲ್ಲಿ ಜಾಹೀರಾತು ಕ್ಷೇತ್ರ ಪ್ರವೇಶಿಸಿದ ಮಹಿಳೆ ಎಂತೆಂತಹ ಒತ್ತಡಗಳಿಗೆ ಗುರಿಯಾಗಬೇಕಾಗುತ್ತದೆ; ಆಕೆಯ ಕೌಟುಂಬಿಕ ಬದುಕಿನ ಮೇಲೆ ಕೂಡಾ ಅದು ಎಂತಹ ಪರಿಣಾಮ ಬೀರುತ್ತದೆ ಎಂಬುದಕ್ಕೆ ನಾನು ನೋಡಿದ ಒಂದು ಮಲಯಾಳ ಚಿತ್ರ ಉದಾಹರಣೆಯಾಗಿದೆ.

ಆ ಚಿತ್ರದಲ್ಲಿ ಹೆಂಗಸೊಬ್ಬಳು ಒಂದು ಜಾಹೀರಾತು ಕಂಪೆನಿಯೊಡನೆ ರೂಪದರ್ಶಿಗಳಾಗಿ ಒಪ್ಪಂದ ಮಾಡಿಕೊಳ್ಳುತ್ತಾಳೆ. ಆ ಒಪ್ಪಂದದಂತೆ ಆಕೆ ಆ ಸಂಸ್ಥೆಯಲ್ಲಿರುವವರೆಗೆ ಮದುವೆಯಾಗಬಾರದು, ಮಕ್ಕಳನ್ನು ಹೆರಬಾರದು. ತೆಳ್ಳಗೆ ಬಳ್ಳಿಯಂತೆ ಬಳುಕುವ ಮೈ ಮಾಟವನ್ನು ಕಾಪಾಡಿಕೊಳ್ಳಬೇಕು. ಆದರೆ ಆಕೆ ಮನೆಯವರ ಒತ್ತಾಯದಿಂದ ಆ ಸಂಸ್ಥೆಗೆ ತಿಳಿಸದೆ ಮದುವೆಯಾಗುತ್ತಾಳೆ. ಮಗುವಾಗುವುದನ್ನು ತಡೆಯಲು ಗಂಡನಿಂದ ತನ್ನ ದೂರವನ್ನು ಕಾಪಾಡಿಕೊಳ್ಳಲು ಹಗಲಿರುಳೂ ಪ್ರಯತ್ನಿಸುತ್ತಾಳೆ. ಮನೆಯ ಹಿರಿಯರು ಆಕೆಗೆ ಹುಟ್ಟುವ ಮಗುವಿಗಾಗಿ ಕಾತರಿಸುತ್ತಾರೆ. ಕೊನೆಗೆ ಹೇಗೋ ಆಕೆ ಗರ್ಭಿಣಿಯಾದಾಗ ಗರ್ಭಪಾತ ಮಾಡಿಸಿಕೊಳ್ಳಲೂ ಕೂಡಾ ಪ್ರಯತ್ನಿಸುತ್ತಾಳೆ. ಜಾಹೀರಾತಿಗೆ ರೂಪದರ್ಶಿಯಾಗುವ ಮಹಿಳೆಯರ ಮೇಲೆ ಎಂತೆಂತಹ ಒತ್ತಡಗಳನ್ನು ಹೇರಲಾಗುತ್ತದೆ ಹಾಗೂ ಆಕೆಯ ಕೌಟುಂಬಿಕ ಬದುಕಿಗೆ ಎಂತೆಂತಹ ಕುತ್ತು ಬರಬಹುದೆಂಬುದನ್ನು ಈ ಚಿತ್ರದಲ್ಲಿ ಅತ್ಯಂತ ಮಾರ್ಮಿಕವಾಗಿ ಚಿತ್ರಿಸಲಾಗಿದೆ.

ಇತ್ತೀಚಿನ ವರ್ಷಗಳಲ್ಲಿ ವಿಶ್ವಸುಂದರಿ, ಲೋಕಸುಂದರಿ ಮುಂತಾದ ಸೌಂದರ್ಯ ಸ್ಪರ್ಧೆಗಳಲ್ಲಿ ಇಂಡಿಯನ್ನರು ವಿಜೇತರಾಗುತ್ತಿದ್ದಾರೆ. ವಿದೇಶಗಳಿಂದ ಅಮದಾಗುವ ಸೌಂದರ್ಯವರ್ಧಕ ಸಾಧನಗಳಿಗೆ ನಮ್ಮ ದೇಶದಲ್ಲಿ ವಿಫುಲವಾದ ಮಾರುಕಟ್ಟೆಗಳನ್ನೊದಗಿಸುವುದು ಈ ಸೌಂದರ್ಯ ಸ್ಪರ್ಧೆಗಳ ಯೋಜನೆಯ ಹಿಂದಿರುವ ಹುನ್ನಾರವೇ?

## ಓದು ಪತ್ಯ : ದೋಸೆ ಮತ್ತು ವಿಜ್ಞಾನ

**– ಜೆ. ಆರ್. ಲಕ್ಷಣರಾವ್**

ಲೇಖನದ ಶೀರ್ಷಿಕೆ ತಮಾಷೆಯಾಗಿ ಕಾಣಿಸುವುದಿಲ್ಲವೆ? ವಿಜ್ಞಾನ ಕೂಡಲೇ ಒಂದು ಪ್ರಯೋಗಶಾಲೆ, ಅದರಲ್ಲಿಯ ದುಬಾರಿಯಾದ ಸಾಮಾನು ಸರಂಜಾಮು, ಪರಿಷ್ಕೃತ ಉಪಕರಣಗಳು – ಇವುಗಳ ಚಿತ್ರ ಮನಸ್ಸಿನ ಮುಂದೆ ಬಂದು ನಿಲ್ಲುತ್ತದೆ. ವಿಜ್ಞಾನದ ವಿಷಯವಾಗಿ ನಾವು ತಪ್ಪು ಕಲ್ಪನೆ ಬೆಳೆಸಿಕೊಂಡಿರುವುದೇ ಅದಕ್ಕೆ ಕಾರಣ. ವಿಜ್ಞಾನದಲ್ಲಿ ಏಳುವ ಪ್ರಶ್ನೆಗಳಿಗೆ ಸಮರ್ಪಕ ಉತ್ತರ ನೀಡಬೇಕಾಗಿ ಬಂದಾಗ ಕರಾರುವಕ್ಕಾದ ಪ್ರಯೋಗಗಳನ್ನು ನಿಯಂತ್ರಿತ ಪರಿಸ್ಥಿತಿಗಳಲ್ಲಿ ನಡೆಸಬೇಕಾಗುವುದು. ಅನೇಕ ವೇಳೆ ಅದಕ್ಕೆ ಪ್ರಯೋಗಶಾಲೆ ಮತ್ತು ಸುಧಾರಿತ ಉಪಕರಣಗಳು ಬೇಕಾಗುವುದು ನಿಜ. ಅಂದಮಾತ್ರಕ್ಕೆ ವಿಜ್ಞಾನವನ್ನು ಪ್ರಯೋಗಶಾಲೆಯ ನಾಲ್ಕು ಗೋಡೆಗಳಿಗೆ ಸೀಮಿತಗೊಳಿಸುವುದು ಸರಿಯಾದೀತೆ? ನಿತ್ಯ ಜೀವನದಲ್ಲಿ ಹೆಜ್ಜೆ ಹೆಜ್ಜೆಗೂ ವಿಜ್ಞಾನ ನಮಗೆ ಇದಿರಾಗುತ್ತದೆ. ಈ ಅಂಶವನ್ನು ಒತ್ತಿ ಹೇಳುವ ಉದ್ದೇಶದಿಂದ ಬೇಕೆಂತಲೇ ಮೇಲಿನ ಶೀರ್ಷಿಕೆಯನ್ನು ಆರಿಸಲಾಗಿದೆ. ದೋಸೆ ಹಿಟ್ಟು ತಯಾರಿಸಿ ದೋಸೆ ಹೊಯ್ಯುವುದರಲ್ಲಿ ಎಷ್ಟೆಲ್ಲ ವೈಜ್ಞಾನಿಕ ಅಂಶಗಳನ್ನು ಗುರುತಿಸಬಹುದು ಎಂದು ತೋರಿಸುವುದು ಈ ಲೇಖನದ ಉದ್ದೇಶ.

ದೋಸೆ ಹಿಟ್ಟು ತಯಾರಿಸಿ ಆ ಕೂಡಲೇ ದೋಸೆ ಮಾಡುವುದು ಸಾಧ್ಯವಿಲ್ಲವಷ್ಟೆ. ನೀರಿನಲ್ಲಿ ನೆನೆಸಿಟ್ಟ ಅಕ್ಕಿ ಮತ್ತು ಉದ್ದಿನ ಬೇಳೆ – ಎರಡನ್ನೂ ನುಣ್ಣಗೆ ರುಬ್ಬಿ, ಆ ಹಿಟ್ಟು ಹುದಗಲು ಒಂದು ರಾತ್ರಿ ಹಾಗೇ ಬಿಡುತ್ತೇವೆ. ಮರುದಿನ ಬೆಳಗಿನ ವೇಳೆಗೆ ಹಿಟ್ಟು ಉಕ್ಕಿ ಪಾತ್ರೆಯಿಂದ ಹೊರಕ್ಕೆ ಚೆಲ್ಲಬಹುದು. ಹಾಗೇನಾದರೂ ಆದರೆ ಹಿಟ್ಟು ಚೆನ್ನಾಗಿ ಹುದುಗಿದೆ ಎಂದರ್ಥ. ಅದರಿಂದ ದೋಸೆ ಹೊಯ್ದರೆ ತುಂಬ ಚೆನ್ನಾಗಿರುತ್ತದೆ.

ಹುದುಗುವುದು ಒಂದು ಬಗೆಯ ಜೀವರಾಸಾಯನಿಕ ಕ್ರಿಯೆ. ಬರಿಯ ಕಣ್ಣಿಗೆ ಕಾಣಿಸದಿರುವಷ್ಟು ಚಿಕ್ಕವಾದ ಏಕಕೋಶ ಜೀವಿಗಳೂ ದೋಸೆ ಹಿಟ್ಟಿನಲ್ಲಿ ತಮ್ಮ ಸಂತಾನಾಭಿವೃದ್ಧಿ ಮಾಡಿಕೊಳ್ಳುವುದರ ಫಲವಾಗಿ ಆ ಹಿಟ್ಟಿನಲ್ಲಿ ಉಂಟಾಗುವ ರಾಸಾಯನಿಕ ಬದಲಾವಣೆಗಳೇ ಹುದುಗುವಿಕೆ. ಸೂಕ್ಷ್ಮಜೀವಿಗಳ ಕಾರ್ಯಾಚರಣೆಯ ಫಲವಾಗಿ ಜರುಗುವ ಇಂಥ ರಾಸಾಯನಿಕ ಕ್ರಿಯೆಗಳನ್ನು ಇಂಗ್ಲೀಷಿನಲ್ಲಿ ಫರ್ಮಂಟೇಷನ್ ಎಂದು ಕರೆಯುತ್ತಾರೆ. ಈ ಪದದ ಮೂಲ ಅರ್ಥ 'ಬುರುಗು ಬರುವುದು' ಎಂದು ಈ ಬಗೆಯ ಅನೇಕ ಕ್ರಿಯೆಗಳಲ್ಲಿ ಬುರುಗು ಕಂಡು ಬಂದುದರಿಂದ ಇಂಥ ಎಲ್ಲ ಜೀವ ರಾಸಾಯನಿಕ ಕ್ರಿಯೆಗಳಿಗೂ 'ಫರ್ಮಂಟೇಷನ್' ಎಂಬ ಪದ ರೂಢಿಗೆ ಬಂದುಬಿಟ್ಟಿದೆ. ಫರ್ಮಂಟೇಷನ್

ಕ್ರಿಯೆಗಳನ್ನು ಬಳಸಿಕೊಂಡು ತಯಾರಿಸುವ ಖಾದ್ಯ ಪದಾರ್ಥಗಳು ಹಿಂದಿನ ಕಾಲದಿಂದಲೂ ರೂಢಿಯಲ್ಲಿವೆ – ಪಾಶ್ಚ್ಯಾತ್ಯರಲ್ಲಿಯೂ ಇವೆ. ನಮ್ಮಲ್ಲಿಯೂ ಇವೆ.

'ಬ್ರೆಡ್ ತಯಾರಿಸಲು ಮೈದಾ ಹಿಟ್ಟನ್ನು ನೀರಿನೊಡನೆ ಕಲಸಿ ಸ್ವಲ್ಪ ಯೀಸ್ಟ್ ಹಾಕಿ ಚೆನ್ನಾಗಿ ನಾದಿ ಹುದುಗಲು ಬಿಡುತ್ತಾರೆ. ಯೀಸ್ಟ್‌ನಂಥ ಒಂದು ಬಗೆಯ **'ಏಕಕೋಶ ಜೀವಿ'**. ಹಿಟ್ಟಿನಲ್ಲಿ ಅದು ವೃದ್ಧಿಯಾಗುವುರಿಂದಲೇ ಹಿಟ್ಟು ಹುದುಗುವುದು. ಫರ್ಮೆಂಟೇಷನ್ ಕ್ರಿಯೆ ಜರಗಲೆಂಬ ಉದ್ದೇಶದಿಂದ ಸೇರಿಸುವ ಯೀಸ್ಟನಂಥ ಪದಾರ್ಥವನ್ನು ಫರ್ಮೆಂಟ್ ಎಂದು ಕರೆದಿದ್ದಾರೆ. ಕಿಣ್ವದ ನೆರವಿನಿಂದ ನಡೆಯುವ ಫರ್ಮೆಂಟೇಷನ್ ಕ್ರಿಯೆಯನ್ನು ನಾವು ಕಿಣ್ವನ ಎಂದು ಕರೆಯಬಹುದು. ಕಿಣ್ವನವನ್ನು ಜರುಗಿಸಲು ನಾವು ಎಲ್ಲ ಸಂದರ್ಭಗಳಲ್ಲೂ ಕಿಣ್ವವನ್ನು ಸೇರಿಸುವ ಅಗತ್ಯವಿರುವುದಿಲ್ಲ. ಉದಾಹರಣೆಗೆ, ದ್ರಾಕ್ಷಾರಸದಿಂದ ವೈನ್ ತಯಾರಿಸಲು ಯಾವ ಕಿಣ್ವವನ್ನೂ ಸೇರಿಸುವುದಿಲ್ಲ. ದ್ರಾಕ್ಷಿ ಹಣ್ಣಿನ ಸಿಪ್ಪೆಯ ಮೇಲೆ ಯೀಸ್ಟ್ ಯಾವಾಗಲೂ ಇರುತ್ತದೆ. ಹಣ್ಣನ್ನು ಜಜ್ಜಿ ರಸ ತೆಗೆಯುವಾಗ ರಸದಲ್ಲಿ ಆ ಯೀಸ್ಟ್ ಸೇರಿಕೊಳ್ಳುವುದರಿಂದ ಕಿಣ್ವನ ಅದರ ಪಾಡಿಗೆ ಜರಗುತ್ತದೆ. ಅದೇ ರೀತಿ ದೋಸೆ ಹಿಟ್ಟು ತಯಾರಿಸುವಾಗ ಉದ್ದಿನ ಬೇಳೆ ಮತ್ತು ಅಕ್ಕಿಯೊಡನಿದ್ದ ಅಗತ್ಯ ಸೂಕ್ಷ್ಮಜೀವಿಗಳು ರುಬ್ಬಿದ ಹಿಟ್ಟಿನಲ್ಲಿ ಸೇರಿಕೊಳ್ಳುವುದರಿಂದ ಕಿಣ್ವನ ತನಗೆ ತಾನೇ ಜರಗುತ್ತದೆ.

ಸೂಕ್ಷ್ಮಜೀವಿಗಳ ಸಂತಾನಾಭಿವೃದ್ಧಿಗೆ ಅತ್ಯಂತ ಪ್ರಶಸ್ತವಾದ ಉಷ್ಣತೆ ಎಂದರೆ 37 ಡಿಗ್ರಿ ಸೆಲ್ಸಿಯಸ್. ಮನುಷ್ಯದೇಹದ ಉಷ್ಣತೆಯೂ ಅಷ್ಟೇ ಎಂಬುದನ್ನು ಗಮನಿಸಬೇಕು. ಬೇಸಗೆಯಲ್ಲಿ ವಾತಾವರಣದ ತಾಪ ಹೆಚ್ಚಾಗಿರುವುದರಿಂದ ರುಬ್ಬಿಟ್ಟ ದೋಸೆ ಹಿಟ್ಟು ರಾತ್ರಿ ಕಳೆಯುವುದರಲ್ಲಿ ಚೆನ್ನಾಗಿ ಹುದುಗುವ ಸಂಭವ ಹೆಚ್ಚು. ಚಳಿಗಾಲದಲ್ಲಿ ಅನೇಕ ವೇಳೆ ಹಿಟ್ಟು ಹುದುಗದಿದ್ದು ಹಿಟ್ಟಿರುವ ಪಾತ್ರೆಯನ್ನು ಬಿಸಿ ನೀರಿನಲ್ಲಿಟ್ಟು ಮತ್ತೆ ಕೆಲವು ಗಂಟೆಗಳ ಕಾಲ ಕಾಯುತ್ತೇವೆ. ಕಿಣ್ವನ ಸುಗಮವಾಗಿ ನಡೆಯಲು ಪ್ರೋತ್ಸಾಹ ನೀಡುವ ಇನ್ನೊಂದು ಅಂಶವಿದೆ. ಹಿಟ್ಟನ್ನು ಸಾಕಷ್ಟು ನುಣ್ಣಗೆ ರುಬ್ಬಿರಬೇಕು. ಸೂಕ್ಷ್ಮಜೀವಿಗಳಿಗೆ ಅಗತ್ಯವಾದ ಆಹಾರ ಆಗ ಸುಲಭವಾಗಿ ದೊರೆಯುತ್ತದೆ; ಅವುಗಳ ಸಂಖ್ಯೆ ವೃದ್ಧಿಯಾಗುತ್ತದೆ. ಹಿಟ್ಟಿನಲ್ಲಿ ರಾಸಾಯನಿಕ ಕ್ರಿಯೆಗಳೂ ಸುಲಭವಾಗಿ ನಡೆಯುತ್ತವೆ.

ದೋಸೆ ಹಿಟ್ಟಿನ ಕಿಣ್ವನದಲ್ಲಿ ಪಾತ್ರವಹಿಸುವ ಸೂಕ್ಷ್ಮಜೀವಿಗಳು ಹಲವಾರು. ಅವೆಲ್ಲವೂ ಅಕ್ಕಿ ಮತ್ತು ಉದ್ದಿನ ಬೇಳೆಯ ಮೇಲಿರುತ್ತವೆ. ಹಿಟ್ಟು ರುಬ್ಬಿದಾಗ ಅದರಲ್ಲಿ ಸೇರಿಕೊಳ್ಳುತ್ತವೆ. ಅಕ್ಕಿ ಮತ್ತು ಉದ್ದಿನ ಬೇಳೆಯಲ್ಲಿನ ಕಾರ್ಬೋಹೈಡ್ರೇಟ್ ಮತ್ತು ಪ್ರೋಟೀನುಗಳ ಸಂಕೀರ್ಣ ಅಣುಗಳು ರಾಸಾಯನಿಕ ಕ್ರಿಯೆಗೆ ಒಳಗಾಗಿ ಭಾಗಶಃ ವಿಘಟನೆಗೊಂಡು ಇನ್ನೂ ಸರಳ ಅಣುಗಳಾಗುವುದದರಿಂದ ಅದನ್ನು ನಾವು ಸೇವಿಸಿದಾಗ ಅರಗುವುದು ಸುಲಭ. ಹುದುಗುವಿಕೆಯಿಂದ ನಮಗಾಗುವ ಇನ್ನೊಂದು ಪ್ರಯೋಜನವೆಂದರೆ, ನಾಲಗೆಗೆ ರುಚಿಯಾಗುವುದು. ಅದಕ್ಕೆ ಕಾರಣ ಕಿಣ್ವನದಲ್ಲಿ ಪ್ರಮುಖ ಪಾತ್ರ ವಹಿಸುವ ಲಾಕ್ಟಿಕ್ ಗುಂಪಿನ ಬ್ಯಾಕ್ಟೀರಿಯ. ಅವು ಕಾರ್ಬೋಹೈಡ್ರೇಟ್‌ಗಳ ಮೇಲೆ ವರ್ತಿಸಿ ಲ್ಯಾಕ್ಟಿಕ್ ಆಮ್ಲವನ್ನು

ಉತ್ಪತ್ತಿಮಾಡುವುವು. ಪರಿಣಾಮವಾಗಿ ಹಿಟ್ಟಿಗೆ ಹುಳಿ ರುಚಿ ಬಂದು ನಾಲಗೆಗೆ ರುಚಿಸುವುದು. ಕಿಣ್ವನ ಕ್ರಿಯೆಯಿಂದ ಆಗುವ ಮೂರನೆಯ ಪ್ರಯೋಜನ ಒಂದಿದೆ. ಹಿಟ್ಟಿನಲ್ಲಿ ಜರುಗುವ ರಾಸಾಯನಿಕ ಕ್ರಿಯೆಯಿಂದ ಕಾರ್ಬನ್‌ಡೈಆಕ್ಸೈಡ್ ಗುಳ್ಳೆಗುಳ್ಳೆಯಾಗಿ ಹೊರಕ್ಕೆ ಬರುತ್ತದೆ. ಪರಿಣಾಮವಾಗಿ ದೋಸೆಗೆ ಸ್ಪಂಜಿನಂಥ ರಚನೆ ಒದಗುವುದರಿಂದ ಅದನ್ನು ತಿನ್ನುವಾಗ ಹಲ್ಲಿಗೆ ಸುಖ ಸಿಕ್ಕುತ್ತದೆ. ಎಲ್ಲರ ಮನೆಯ ದೋಸೆಯೂ ತೂತೇ ಎಂಬ ಒಂದು ಗಾದೆ ಇದೆ. ದೋಸೆ ಬೇಯುವಾಗ ಹೊರಕ್ಕೆ ತಪ್ಪಿಸಿಕೊಂಡು ಹೋಗುವ ಕಾರ್ಬನ್ ಡೈಆಕ್ಸೈಡ್ ಆ ತೂತುಗಳಿಗೆ ಕಾರಣ. ಕೆಲವೊಮ್ಮೆ ಮಜ್ಜಿಗೆಗೆ ಮೈದಾ ಹಿಟ್ಟು ಹಾಕಿ ಕಲಕಿ ಅದರಿಂದ ದೋಸೆ ಹೊಯ್ಯುವುದುಂಟು. ಅದರಲ್ಲಿ ಕಾರ್ಬನ್ ಡೈಆಕ್ಸೈಡ್ ಇಲ್ಲದಿರುವುದರಿಂದ ಆ ದೊಸೆಯಲ್ಲಿ ತೂತಿರುವುದಿಲ್ಲವೆಂಬುದನ್ನು ಗಮನಿಸಿ.

ದೋಸೆಗೆ ನಸು ಹುಳಿ ರುಚಿ ಬರಿಸಿ. ಅದಕ್ಕೆ ಸ್ಪಂಜಿನಂಥ ಸರಂಧ್ರ ರಚನೆ ನೀಡಿ, ಸುಲಭವಾಗಿ ಜೀರ್ಣವಾಗುವಂತೆ ಮಾಡುವುದು ಕಿಣ್ವನ ಕ್ರೀಯೆ ಎಂದು ಆಗಲೇ ಹೇಳಲಿಲ್ಲವೆ? ಆದರೆ ಕಿಣ್ವನ ಎಷ್ಟು ಬೇಕೋ ಅಷ್ಟು ಆದರೆ ಹಿತಕರ. ಕಿಣ್ವನ ಹೆಚ್ಚಾಗಿ ಆದರೆ ದೋಸೆ ತುಂಬಾ ಹುಳಿಯಾಗಿ ರುಚಿ ಕೆಟ್ಟುಹೋಗುತ್ತದೆ. ಒಂದು ರಾತ್ರಿ ಹುದುಗಿದ ದೋಸೆ ಹಿಟ್ಟನ್ನು ಯಾವುದೇ ಕಾರಣದಿಂದ ಮರುದಿನ ಬೆಳಗ್ಗೆಯೇ ಉಪಯೋಗಿಸದೆ ಹೋದರೆ ಅಥವಾ ಅದರ ಸ್ವಲ್ಪ ಭಾಗವನ್ನು ಉಪಯೋಗಿಸಿ ಗಣನೀಯ ಭಾಗ ಉಳಿದುಹೋದರೆ. ಅದರಲ್ಲಿ ಕಿಣ್ವನ ಮುಂದುವರಿಯದಂತೆ ನೋಡಿಕೊಳ್ಳಬೇಕು. ರೆಫ್ರಿಜರೇಟರ್‌ನಲ್ಲಿಟ್ಟರೆ ಕಿಣ್ವನ ಕ್ರಿಯೆ ಹೆಚ್ಚು ಕಡಿಮೆ ಸಂಪೂರ್ಣವಾಗಿ ನಿಂತುಹೋಗುತ್ತದೆ. ಮಣ್ಣಿನ ಪಾತ್ರೆಯಲ್ಲಿರುವ ನೀರಿನಲ್ಲಿ ಪಾತ್ರಯನ್ನಿರಿಸಿ ಅದರಲ್ಲಿ ಆ ದೋಸೆ ಹಿಟ್ಟನ್ನು ಇಟ್ಟರೆ ಕಿಣ್ವನ ಕ್ರಿಯೆ ಮುಂದುವರಿಯುವುದನ್ನು ಗಮನಾರ್ಹವಾಗಿ ತಡೆಗಟ್ಟಬಹುದು. ಅಂಥದೇನನ್ನೂ ಮಾಡದೆ ಕಿಣ್ವನ ಕ್ರಿಯೆ ಮುಂದುವರಿದು ಹಿಟ್ಟು ತುಂಬ ಹುಳಿಯಾಯಿತೆನ್ನಿ, ಅದರಲ್ಲಿನ ಹೆಚ್ಚುವರಿ ಲ್ಯಾಕ್ಟಿಕ್ ಅಮ್ಲವನ್ನು ತೆಗೆದು ಬಿಡಲು ಒಂದು ಉಪಾಯವಿದೆ. ಹಿಟ್ಟಿಗೆ ಸಾಕಷ್ಟು ನೀರು ಬೆರೆಸಿ ಕಲಕಿ ತಿಳಿಗಟ್ಟಲು ಕೆಲಕಾಲ ಬಿಟ್ಟರೆ ಅಥವಾ ಹಿಟ್ಟು ತಳಸೇರಿ ಮೇಲ್ಗಡೆ ತಿಳಿಯಾಗುತ್ತದೆ. ಲ್ಯಾಕ್ಟಿಕ್ ಆಮ್ಲ ನೀರಿನಲ್ಲಿ ದ್ರಾವ್ಯವಾದುದರಿಂದ ತಿಳಿಯನ್ನು ಬಸಿದು ಚೆಲ್ಲಿದರೆ ಆಮ್ಲದ ಬಹುಭಾಗ ಹೊರಟುಹೋಗುತ್ತದೆ. ಎರಡು ಹೆಚ್ಚೆಂದರೆ ಮೂರು ಬಾರಿ ಈ ರೀತಿ ತಿಳಿಯನ್ನು ಬಸಿದರೆ ಹುಳಿ ರುಚಿ ಕಡಿಮೆಯಾಗುತ್ತದೆ.

ದೋಸೆ ಹೊಯ್ಯುವಾಗ ಕಾವಲಿಯ ಮೇಲೆ ಎಣ್ಣೆ ಸವರಿ, ಮೇಲೆ ದೋಸೆ ಹೊಯ್ಯುವರಷ್ಟೇ? ಹಾಗೆ ಮಾಡುವುದೇಕೆ? ಅದರಿಂದ ಏನು ಪ್ರಯೋಜನ? ಜೈವಿಕ ಮೂಲದಿಂದ ಪಡೆದ ಪದಾರ್ಥಗಳೆಲ್ಲವೂ ಕಾರ್ಬನ್ ಸಂಯುಕ್ತಗಳಿಂದ ಕೂಡಿದವು. ಸಾಕಷ್ಟು ಉಷ್ಣತೆಗೆ ಕಾಯಿಸಿದರೆ ಅವು ದಹಿಸಿಹೋಗುತ್ತವೆ. ಹಾಗೆ ಕಾಯಿಸಿದಾಗ ಸುತ್ತಮುತ್ತ ಆಕ್ಸಿಜನ್‌ಗೆ ಅಭಾವವಿದ್ದರೆ ಅವು ವಿಘಟಿಸಿ ಕಾರ್ಬನ್ ಅನ್ನು ಬಿಡುಗಡೆ ಮಾಡುತ್ತವೆ. ಪದಾರ್ಥಗಳು ಸೀದುಹೋಗುವಾಗ ನಡೆಯುವ ಕ್ರಿಯೆ ಇದೇನೇ. ದೋಸೆ ಹೊಯ್ಯುವಾಗ

ಎಣ್ಣೆ ಸವರದೆ ಹಿಟ್ಟನ್ನು ಕಾದ ಕಾವಲಿಯ ಮೇಲೆ ಸುರಿದು ಹರಡಿದರೆ ದೋಸೆಯ ತಳಭಾಗ ಕಾದ ಕಾವಲಿಯ ಸಂಪರ್ಕದಿಂದ ಹಾಗೆ ಸೀದುಹೋಗುತ್ತದೆ. ಏಕೆಂದರೆ ಅಲ್ಲಿ ಆಕ್ಸಿಜನ್‌ಗೆ ಅಭಾವ. ಹಾಗೆ ಸೀದುಹೋಗಿ ಕಾವಲಿಗೆ ಅಂಟಿಕೊಂಡು ಬಿಡುತ್ತದೆ. ಎಣ್ಣೆ ಸವರಿ ಅದರ ಮೇಲೆ ಹಿಟ್ಟನ್ನು ಹರಡಿದರೆ ಎಣ್ಣೆ ವಿಘಟಿಸಲು ಇನ್ನೂ ಹೆಚ್ಚು ಉಷ್ಣತೆ ಅಗತ್ಯವಾದುದರಿಂದ ಆ ಎಣ್ಣೆಯ ಪದರ ಸೀದುಹೋಗದೆ ಉಳಿದು ದೋಸೆಗೆ ಮೆತ್ತೆಯಂತೆ ವರ್ತಿಸುತ್ತದೆ. ಅಷ್ಟೇ ಅಲ್ಲ; ಕಾದ ಎಣ್ಣೆಯ ಸಂಪರ್ಕದಿಂದ ದೋಸೆಯ ಕೆಳಮೈ ಬೇಯುತ್ತದೆ; ಆ ಕ್ರಿಯೆಯಲ್ಲಿ ಬಿಡುಗಡೆಗೊಳ್ಳುವ ಹಬೆಯೂ ಮೆತ್ತೆಯಂತೆ ವರ್ತಿಸುತ್ತದೆ. ಆಗ ಮಗಚುವ ಕೈಯನ್ನು ದೋಸೆಯ ಕೆಳಗೆ ನೂಕಿದರೆ ದೋಸೆ ಸುಲಭವಾಗಿ ಕಾವಲಿ ಬಿಟ್ಟು ಏಳುತ್ತದೆ. ಕಾವಲಿಯ ಮೇಲೆ ಎಣ್ಣೆ ಸವರಿ ದೋಸೆ ಹೊಯ್ಯುವುದಲ್ಲದೆ ಹೊಯ್ದ ದೋಸೆಯ ಮೇಲೂ ಎಣ್ಣೆ ಸವರುವುದು ರೂಢಿ. ದೋಸೆ ಬೇಯುವಾಗ ಅದರ ಮೇಲ್ಮೈಯಿಂದ ಹೊರಡುವ ಹಬೆ ತಪ್ಪಿಸಿಕೊಂಡು ಹೋಗದಂತೆ ಎಣ್ಣೆ ಪದರ ತಡೆಯುವುದರಿಂದ ರುಚಿ ಅಲ್ಲಿಯೇ ಉಳಿದು ದೋಸೆಯ ಮೇಲ್ಮೈಯನ್ನೂ ಚೆನ್ನಾಗಿ ಬೇಯಿಸುತ್ತದೆ. ಕೆಲವರಿಗೆ ದೋಸೆ ತೆಳ್ಳಗಿರಬೇಕು. ಕೆಲವರಿಗೆ ದಪ್ಪಗಿರಬೇಕು. ದಪ್ಪ ದೋಸೆ ಇಷ್ಟಪಡುವವರು ದೋಸೆಯ ಮೇಲ್ಭಾಗವೂ ಚೆನ್ನಾಗಿ ಬೇಯುವಂತೆ ಎಚ್ಚರ ವಹಿಸಬೇಕಾಗುವುದು. ಅದಕ್ಕಾಗಿ ದೋಸೆ ಹೊಯ್ದ ತರುವಾಯ ಅದರ ಮೇಲೆ ಒಂದು ತಟ್ಟೆ ಬೋರಲು ಹಾಕುವುದನ್ನು ನೀವು ನೋಡಿರಬಹುದು. ಹಾಗೆ ಮಾಡಿದರೆ ದೋಸೆ ಚೆನ್ನಾಗಿ ಬೇಯುವುದೆಂಬುದು ಅನುಭವಿಸಿದ್ದ ವಿಷಯ. ಅದು ಚೆನ್ನಾಗಿ ಬೇಯಲು ಕಾರಣ ತುಂಬ ಸರಳ. ಬಿಡುಗಡೆಗೊಂಡ ಹಬೆ ಎಲ್ಲ ಬೋರಲು ತಟ್ಟೆಯ ಕೆಳಗೆ ಸಂಗ್ರಹಗೊಂಡು ದೋಸೆಯ ಮೇಲ್ಭಾಗವೂ ಚೆನ್ನಾಗಿ ಬೇಯುತ್ತದೆ.

ಮಸಾಲೆ ದೋಸೆ ಮಾಡುವವರು ಉದ್ದಿನ ಬೇಳೆಯೊಂದಿಗೆ ಸ್ವಲ್ಪ ಕಡಲೆ ಬೇಳೆ ಹಾಕುವುದುಂಟು. ಅದು ಕೆಲಸ ಮಾಡುವ ಬಗೆ ಬಹುಶಃ ಇದು ಕಡಲೆ ಬೇಳೆ ಬಹುಶಃ ಉದ್ದಿನ ಬೇಳೆಯಂತೆ ತುಂಬ ನುಣ್ಣಗೆ ನುರಿಯದೆ ಸಣ್ಣ ಸಣ್ಣ ಕಣಗಳು ಹಿಟ್ಟಿನಲ್ಲಿ ಹಾಗೇ ಉಳಿದಿರುತ್ತದೆ. ಗುರುತ್ವದ ಕಾರಣ ಆ ಕಣಗಳು ದೋಸೆಯ ತಳ ಭಾಗದಲ್ಲಿ ಕುಳಿತು, ಕಾವಲಿ ಸಂಪರ್ಕದಿಂದ ಭಾಗಶಃ ವಿಘಟಿಸಿ ಕಂದು ಬಣ್ಣ ತಳೆಯುತ್ತವೆ. ದೋಸೆಯ ತಳಭಾಗ ಗರಿಗರಿಯಾಗುವಂತೆ ಮಾಡುತ್ತವೆ.

ದೋಸೆ ತಯಾರಿಸುವ ಇಡೀ ಪ್ರಕ್ರಿಯೆಯಲ್ಲಿ ಅಡಗಿರುವ ವೈಜ್ಞಾನಿಕ ತತ್ವಗಳಲ್ಲಿ ಕೆಲವನ್ನು ಮಾತ್ರ ಹೆಕ್ಕಿ ಇಲ್ಲಿ ವಿವರಿಸಲಾಗಿದೆ. ಅರಸಿ ನೋಡಿದರೆ ನಿದರ್ಶನಗಳು ಇನ್ನೂ ಹೇರಳವಾಗಿ ಸಿಕ್ಕುವುದು ಖಚಿತ. ನೂರಾರು ವರ್ಷಗಳ ಅನುಭವದಿಂದ ಗೃಹಿಣಿಯರು ಅನೇಕ ಉಪಯುಕ್ತ ಪಾಠಗಳನ್ನು ಕಲಿತಿದ್ದಾರೆ. ಅದರಿಂದ ನಿರ್ದಿಷ್ಟ ಕ್ರಮಗಳು ರೂಢಿಗೆ ಬಂದಿವೆ. ಅವುಗಳ ಹಿಂದಿರುವ ವೈಜ್ಞಾನಿಕ ತತ್ವಗಳನ್ನು ಪತ್ತೆ ಮಾಡಿ ತಿಳಿದುಕೊಳ್ಳುವುದು ಒಳ್ಳೆಯದು. ಕೆಲವು ಆಧಾರ ರಹಿತ ಮೂಢನಂಬಿಕೆಗಳೂ ಬಳಕೆಗೆ ಬಂದಿರಬಹುದು.

ಅವುಗಳಲ್ಲಿ ವಿಷಯದಲ್ಲಿ ಎಚ್ಚರ ಅಗತ್ಯ. ಜೊಳ್ಳಿನಿಂದ ಕಾಳನ್ನು ಬೇರ್ಪಡಿಸುವುದು ವೈಜ್ಞಾನಿಕ ದೃಷ್ಟಿ ಉಳ್ಳವರ ಕರ್ತವ್ಯ.

**ಸಂಪಾದಕರ ವಿಳಾಸ:**

**ಪ್ರೊ. ಬೊಮ್ಮೆಗೌಡ**
ಪ್ರಾಧ್ಯಾಪಕರು, ಕನ್ನಡ ವಿಭಾಗ
ವಿ. ವಿ. ಪುರಂ ಕಾಲೇಜು
ಕೆ. ಆರ್. ರಸ್ತೆ, ಬೆಂಗಳೂರು – 04
ಸಂಚಾರಿವಾಣಿ: 9449108989
ವಿ–ಅಂಚೆ: bgowda2014@gmail.com

**ಡಾ. ಪ್ರಮೀಳ**
ಸಹ ಪ್ರಾಧ್ಯಾಪಕರು, ಮುಖ್ಯಸ್ಥರು, ಕನ್ನಡ ವಿಭಾಗ
ಸಂತ ಆನ್ಸ್ ಮಹಿಳಾ ಪದವಿ ಕಾಲೇಜು
#23, ಕೇಂಬ್ರಿಡ್ಜ್ ರಸ್ತೆ, ಹಲಸೂರು, ಬೆಂಗಳೂರು – 08
ಸಂಚಾರಿವಾಣಿ: 9945734583
ವಿ–ಅಂಚೆ: prameela4677@gmail.com

**ಮೋಹನ್ ರಾವ್. ಸಿಎನ್.**
ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ,
ಎಸ್. ಎಸ್. ಎಂ. ಆರ್. ವಿ ಕಾಲೇಜು
#17, 36ನೇ ಅಡ್ಡರಸ್ತೆ, 26ನೇ ಮುಖ್ಯರಸ್ತೆ, 4ನೇ 'ಟಿ' ಬ್ಲಾಕ್
ಜಯನಗರ, ಬೆಂಗಳೂರು – 560041
ಸಂಚಾರಿವಾಣಿ: 9019893940
ವಿ–ಅಂಚೆ: Mohanrao.n.yadav@gmail.com